ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
45
ಅಕ್ಟೋಬರ್ 7 ಸೋಮವಾರ 2024
ಸಂಪುಟ: 45 | ಸಂಚಿಕೆ: 172 | ಪುಟಗಳು: 12
₹4
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಒಳಪುಟಗಳಲ್ಲಿ...

ಯುವ ದಸರಾ ಸಂಗೀತ, ನೃತ್ಯ ರಸದೌತಣಕ್ಕೆ ಚಾಲನೆ

ನಮ್ಮ ಸಂಸ್ಕೃತಿ ಕಾಪಾಡುವ ಶಕ್ತಿ ಯುವ ಜನತೆಯಲ್ಲಿದೆ: ಅಶ್ವಿನಿ ಪುನೀತ್ ರಾಜ್‌ಕುಮಾರ್



ಯುವ ದಸರಾ ನೃತ್ಯ–ಸಂಗೀತ ಕಾರ್ಯಕ್ರಮವನ್ನು ನಿರ್ಮಾಪಕಿ ಶ್ರೀಮತಿ ಅಶ್ವಿನಿ ಪುನೀತ್‌ರಾಜ್‌ಕುಮಾರ್ ಉದ್ಘಾಟಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕ ಜಿ.ಟಿ.ದೇವೇಗೌಡ ಮತ್ತಿತರರಿದ್ದರು.


ಮೈಸೂರು, ಅ.6(ಎಂಕೆ)– ವಿಶ್ವ ವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಬಹು ಜನಾಕರ್ಷಣೀಯ ಸಂಗೀತ, ನೃತ್ಯ ರಸದೌತಣ ನೀಡುವ ಭವ್ಯ 'ಯುವ ದಸರಾ' ಮೆಗಾ ವೇದಿಕೆಯ ಐದು ದಿನಗಳ ಕಾರ್ಯಕ್ರಮಕ್ಕೆ ಭಾನುವಾರ ವಿಧ್ಯುಕ್ತ ಚಾಲನೆ ದೊರೆಯಿತು.

ಮೈಸೂರು ಹೊರವಲಯದ ರಿಂಗ್ ರಸ್ತೆಯಲ್ಲಿರುವ ಉತ್ತನಹಳ್ಳಿ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ದೇವಸ್ಥಾನದ ಬಳಿ ಝೇಂಕರಿಸುವ ಧ್ವನಿವರ್ಧಕಗಳು, ಕಣ್ ಕುಕ್ಕುವ ಬೆಳಕಿನ ವೈಭವದೊಂದಿಗೆ ನಿರ್ಮಿಸಿರುವ ಸುಂದರ ವೇದಿಕೆಯಲ್ಲಿ ಕನ್ನಡ ಚಿತ್ರರಂಗದ ಖ್ಯಾತ ನಟ, ಕರ್ನಾಟಕ ರತ್ನ ದಿವಂಗತ ಡಾ. ಪುನೀತ್ ರಾಜ್‌ಕುಮಾರ್ ಅವರ ಪತ್ನಿ, ನಿರ್ಮಾಪಕಿ ಶ್ರೀಮತಿ ಅಶ್ವಿನಿ ಪುನೀತ್ ರಾಜ್‌ಕುಮಾರ್ 'ಯುವ ದಸರಾ' ಮೆಗಾ ಸಂಗೀತ–ನೃತ್ಯ ರಸದೌತಣ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಯುವ ದಸರಾ ಕರುನಾಡಿನ ಹೆಮ್ಮೆಯ ಸಂಸ್ಕೃತಿಯನ್ನು ಆಚರಿಸುವ ಬಹುದೊಡ್ಡ ವೇದಿಕೆಯಾಗಿ ಸಾಕ್ಷಿಯಾಗಿದೆ. ನಮ್ಮ ದೇಶದಲ್ಲಿ ದಸರಾ ಹಬ್ಬವನ್ನು ವಿವಿಧ ರೀತಿಯಲ್ಲಿ ಆಚರಿಸಲಾಗುತ್ತದೆ. ಹಾಗೆಯೇ ದಸರಾ ಹಬ್ಬಕ್ಕೆ ವಿಶೇಷವಾಗಿ ಕರ್ನಾಟಕ ಹಾಗೂ ಮೈಸೂರಿಗೆ ಅದರದ್ದೇ ಆದ ಇತಿಹಾಸ ಮತ್ತು ಬಾಂಧವ್ಯ ಹೊಂದಿದೆ. ದಸರಾ ಹಬ್ಬ ಎಲ್ಲರಿಗೂ ಸಂತೋಷವನ್ನುಂಟು ಮಾಡಲಿ ಎಂದರಲ್ಲದೆ, ದಸರಾ ಹಬ್ಬದ ಶುಭಾಶಯ ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಮಾತನಾಡಿ, ಪ್ರತಿಯೊಬ್ಬರೂ ಸಂವಿಧಾನದ ಆಶಯಗಳನ್ನು ಪಾಲನೆ ಮಾಡುತ್ತಾ ಸಂವಿಧಾನಬದ್ಧವಾಗಿ ಬದುಕೋಣ. ನಮ್ಮ ನಾಡನ್ನು ಸಂವಿಧಾನದ ಆಶಯದಂತೆ ನಡೆಸುತ್ತಾ ನಾಡಿನ {ಸಚಿತ್ರ ವರದಿ ಪುಟ 6ರಲ್ಲಿ}

ಶ್ರೇಯಾ ಘೋಷಾಲ್ ಗಾನಸುಧೆಗೆ ಕುಣಿದು ಕುಪ್ಪಳಿಸಿದ ಯುವ ಸಮೂಹ



ಖ್ಯಾತ ಬಾಲಿವುಡ್ ಹಿನ್ನೆಲೆ ಗಾಯಕಿ ಶ್ರೇಯಾ ಘೋಷಾಲ್ ಗಾಯನ

ಮೈಸೂರು, ಅ.6(ಎಂಕೆ)– ಯುವ ದಸರಾ ಭವ್ಯ ವೇದಿಕೆಯಲ್ಲಿ ಮಿಂಚು ಹರಿಸಿದ ಶ್ರೇಯಾ ಘೋಷಾಲ್ ಗಾನ ಸುಧೆ... ವಾಸುಕಿ ವೈಭವ್ ಗೀತೆಗಳ ಮೋಡಿಗೆ ಕುಣಿದು ಕುಪ್ಪಳಿಸಿ, ಸಂಗೀತದ ಅಲೆಯಲ್ಲಿ ತೇಲಾಡಿದ ಯುವ ಜನಸ್ತೋಮ...!

ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಮೆಗಾ ಇವೆಂಟ್ ಖ್ಯಾತಿಯ ಯುವ ದಸರಾ ಸಾಂಸ್ಕೃತಿಕ ಕಾರ್ಯಕ್ರಮದ ಮೊದಲ ದಿನ ಸಂಗೀತ ಸುಧೆ ಹರಿಸಿದ ಖ್ಯಾತ ಬಾಲಿವುಡ್ ಹಿನ್ನೆಲೆ ಗಾಯಕಿ ಶ್ರೇಯಾ ಘೋಷಾಲ್ ಭವ್ಯ ವೇದಿಕೆಯಲ್ಲಿ ಮಿಂಚಿನ ಸಂಚಲನ ಸೃಷ್ಟಿಸಿದರು. ಹಾಗೆಯೇ ಗಾಯಕ ವಾಸುಕಿ ವೈಭವ್ ತಮ್ಮ ಸೊಗಸಾದ ಗಾಯನದ ಮೂಲಕ ■ 6ನೇ ಪುಟಕ್ಕೆ

ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲೂ ಕ್ಯಾಶ್‌ಲೆಸ್ ಟಿಕೆಟ್



ಬೆಂಗಳೂರು, ಅ.6– ಈ ವರೆಗೂ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಪ್ರಯಾಣಿಸುವಾಗ ಸರಿಯಾದ ಚಿಲ್ಲರೆ ಹಿಡಿದುಕೊಂಡೇ ಹೋಗಬೇಕಿತ್ತು. ಕಾಯ್ದಿರಿಸಿದ ಟಿಕೆಟ್ ಆದರೆ ಸಮಸ್ಯೆ ಆಗುತ್ತಿರಲಿಲ್ಲ. ಆದರೆ ನೀವು ನೇರ ಬಸ್ ಹತ್ತಿದರೆ, ಅದಕ್ಕಾಗಿಯೇ ಬ್ಯಾಂಕಿಗೋ, ಎಟಿಎಂಗೋ ಎಡತಾಕಬೇಕಿತ್ತು. ಎಲ್ಲಿಂದಲೋ ನಗದು ಹಿಡಿದುಕೊಂಡು ಬಸ್ ಹತ್ತಿ ಟಿಕೆಟ್ ಪಡೆವಾಗ ಒಂದೋ ನಿಮ್ಮಲ್ಲಿ ಹಾಗೂ ನಿರ್ವಾಹಕರ ಬಳಿ ಚಿಲ್ಲರೆ ಇದ್ದರೆ ಸರಿ. ಇಲ್ಲವಾದಲ್ಲಿ ಬಸ್ಸಿನಲ್ಲೂ ಚರ್ಚೆ, ವಾದ– ವಿವಾದ, ಜಗಳ. ಹಾದಿಯುದ್ದಕ್ಕೂ ಮುಖ ಗಂಟಿಕ್ಕಿಕೊಂಡೇ ಪ್ರಯಾಣ. ಕೊನೇ ಪಕ್ಷ ಪ್ರಯಾಣದ ಖುಷಿಯೂ ಇಲ್ಲ. ಪ್ರಯಾಣಿಕರ ಬಳಿ ಚಿಲ್ಲರೆ ಇಲ್ಲ ಎಂಬ ಕಾರಣಕ್ಕೆ ನಿರ್ವಾಹಕರು ವಿಧಿಯಿಲ್ಲದೆ ಬಸ್‌ನಿಂದ ಇಳಿಸಿದ ಘಟನೆಗಳೂ ನಡೆದಿವೆ.

ಈ ಎಲ್ಲ ಸಮಸ್ಯೆಗಳೂ ಇನ್ನು ಕೆಲ ದಿನಗಳಲ್ಲೇ ದೂರಾಗಲಿವೆ. ಕೆಎಸ್‌ಆರ್‌ಟಿಸಿ ಪ್ರಯಾಣಕ್ಕೆ ಕ್ಯಾಶ್ ಹಿಡಿದುಕೊಂಡೇ ಹೋಗಬೇಕೆಂದು ಇಲ್ಲ. ಗೂಗಲ್ ಪೇ, ಫೋನ್ ಪೇ, ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಹೀಗೆ ಯಾವುದರಲ್ಲಿ ಬೇಕಾದರೂ ಹಣ ಪಾವತಿಸಿ. ನಿಮಗೆ ಕಂಡಕ್ಟರ್ ಟಿಕೆಟ್ ಕೊಡಲಿದ್ದಾರೆ. ಕಾರಣ ಕೆಎಸ್‌ಆರ್‌ಟಿಸಿಯು ರಾಜ್ಯಾದ್ಯಂತ ಸಂಚರಿಸುವ ಬಸ್‌ಗಳಲ್ಲಿ ನಗದು ರಹಿತ ಟಿಕೆಟ್ ವ್ಯವಸ್ಥೆಯನ್ನು ವಿಸ್ತರಿಸಲು ನಿರ್ಧರಿಸಿದೆ. ನಗದು ರಹಿತ ವ್ಯವಹಾರಕ್ಕಾಗಿ ಸ್ಮಾರ್ಟ್ ಎಲೆಕ್ಟ್ರಾನಿಕ್ ಟಿಕೆಟ್ ವಿತರಣಾ ಯಂತ್ರಗಳನ್ನು ಬಳಕೆ ಮಾಡಲು ಉದ್ದೇಶಿಸಿದೆ. ಬಸ್‌ಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರು ಯುಪಿಐ, ಡೆಬಿಟ್, ಕ್ರೆಡಿಟ್ ಕಾರ್ಡ್‌ಗಳ ಬಳಸಿ ಟಿಕೆಟ್ ಖರೀದಿಸಬಹುದಾಗಿದೆ. ಎಲ್ಲೆಡೆ ನಗದು ರಹಿತ ಪ್ರಯಾಣಕ್ಕೆ ವ್ಯವಸ್ಥೆ ಇದ್ದರೂ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮಾತ್ರ ಯಾಕಿಲ್ಲ ಎಂಬ ಪ್ರಶ್ನೆ ಹಿಂದಿನಿಂದಲೂ ಇತ್ತು. ಈಗ ಅವೆಲ್ಲದಕ್ಕೂ ಪರಿಹಾರ ಸಿಕ್ಕಿದೆ. ಈ ನಗದು ರಹಿತ ವ್ಯವಸ್ಥೆಯು ನವೆಂಬರ್ ಅಥವಾ ಡಿಸೆಂಬರ್ ಮೊದಲ ವಾರದಿಂದಲೇ ಜಾರಿಯಾಗಲಿದೆ. ಇದರಿಂದ ಚಿಲ್ಲರೆ ಸಮಸ್ಯೆಗೆ ಪರಿಹಾರ ಸಿಗಲಿದೆ ■ 6ನೇ ಪುಟಕ್ಕೆ

ದಸರಾ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಭವಿಷ್ಯ



ಮೈಸೂರು, ಅ.6(ಎಸ್‌ಪಿಎನ್)– ಸಿದ್ದರಾಮಯ್ಯ ಅವರು ದಸರಾ ನಂತರ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಲಿದ್ದಾರೆ ಎಂದು ಭವಿಷ್ಯ ನುಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಅವರು, ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಕುರಿತು ಕಾಂಗ್ರೆಸ್ ಹೈಕಮಾಂಡ್ ಮಟ್ಟದಲ್ಲೂ ಚರ್ಚೆ ನಡೆಯುತ್ತಿದೆ ಎಂದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಭಾನುವಾರ ನಡೆದ ಮೈಸೂರು ವಿಭಾಗೀಯ ಬಿಜೆಪಿ ಪ್ರಮುಖರ ಸಭೆ ಹಾಗೂ ಸದಸ್ಯತ್ವ ಅಭಿಯಾನದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಮುಡಾ ಹಗರಣ ಬೆಳಕಿಗೆ ಬಂದಾಗಿನಿಂದಲೂ ನಾನೇ ಮುಖ್ಯಮಂತ್ರಿ ಎಂದು ಸಿದ್ದರಾಮಯ್ಯ ಹೇಳಿಕೊಂಡು ಓಡಾಡುತ್ತಿದ್ದಾರೆ. ಭ್ರಷ್ಟ ಮುಖ್ಯಮಂತ್ರಿ ಹಾಗೂ ಸರ್ಕಾರದ ವಿರುದ್ಧ ಹೋರಾಟ ಮಾಡುತ್ತಾ ಬಂದಿದ್ದೇವೆ. ಮುಡಾ ಪ್ರಕರಣ ಕೇವಲ 14 ನಿವೇಶನಗಳ ವಿಚಾರದ್ದಲ್ಲ. ಮುಡಾದಲ್ಲಿ ಸಾವಿರಾರು ಕೋಟಿ ರೂ.

ಕಾಂಗ್ರೆಸ್ ಹೈಕಮಾಂಡ್ ಮಟ್ಟದಲ್ಲಿ ಸಿಎಂ ಬದಲಾವಣೆ ಚರ್ಚೆ ನಡೆಯುತ್ತಿದೆ

ಲೂಟಿ ಆಗಿದೆ. ಈ ಅಕ್ರಮದ ಬಗ್ಗೆ ಅಧಿವೇಶನದಲ್ಲೂ ಚರ್ಚೆಯಾಯಿತು. ಆಗ ಹಗರಣವೇ ನಡೆದಿಲ್ಲ, ಚರ್ಚೆ ಅವಶ್ಯಕತೆ ಇಲ್ಲ ಎಂದು ಅವರು ಹೇಳಿದ್ದರು. ನಂತರ ಅವರೇ ತನಿಖೆಗೆ ಮುಂದಾದರು. ಈಗ ಸಿದ್ದರಾಮಯ್ಯನವರ ಪರಿಸ್ಥಿತಿ ಎಲ್ಲಿಗೆ ಬಂದಿದೆ ಎಂದು ವಿಜಯೇಂದ್ರ ಪ್ರಶ್ನಿಸಿದರು.

ತಪ್ಪೇ ಮಾಡಿಲ್ಲ ಎಂದು ಹೇಳುತ್ತಿದ್ದ ಮುಖ್ಯಮಂತ್ರಿಗಳು, 14 ನಿವೇಶನ ಮುಡಾಗೆ ವಾಪಸ್ ಕೊಟ್ಟಿದ್ದಾರೆ. ಈ 14 ಮುಡಾ ನಿವೇಶನ ತಮ್ಮ ಬುಡಕ್ಕೆ ಬಂದಿದೆ ಎಂದು ಅವರಿಗೆ ಜ್ಞಾನೋದಯವಾಗಿದೆ. ಕಾಂಗ್ರೆಸ್ ಹೈಕಮಾಂಡ್ ಎಷ್ಟು ದಿನಗಳ ಕಾಲ ತಾನೇ ಅವರ ಬೆಂಬಲಕ್ಕೆ ನಿಲ್ಲಲು ಸಾಧ್ಯ? ಹೀಗಾಗಿ ಮುಖ್ಯಮಂತ್ರಿ ಬದಲಾವಣೆ ಕುರಿತು ದೆಹಲಿಯಲ್ಲಿ ಚರ್ಚೆ ನಡೆಯುತ್ತಿದೆ. ತಮ್ಮ ಪರವಾಗಿ ಹೈಕಮಾಂಡ್ ಜೊತೆ ಮಾತನಾಡಲು ಸತೀಶ್ ಜಾರಕಿಹೊಳಿ ಅವರನ್ನು ಸಿದ್ದರಾಮಯ್ಯ ದೆಹಲಿಗೆ ಕಳುಹಿಸಿದ್ದರು. ■ 2ನೇ ಪುಟಕ್ಕೆ



ಸರ್ಕಾರ ಬಿದ್ದರೆ ಬೀಳಲಿ, ಜಾತಿಗಣತಿ ವರದಿ ಜಾರಿ ಮಾಡಲೇಬೇಕು

ಕಾಂಗ್ರೆಸ್ ಹಿರಿಯ ಮುಖಂಡ ಬಿ.ಕೆ.ಹರಿಪ್ರಸಾದ್ ಸ್ಫೋಟಕ ಹೇಳಿಕೆ



ಬೆಂಗಳೂರು, ಅ.6– ಜಾತಿಗಣತಿ ಜಾರಿ ವಿಚಾರ ಕಾಂಗ್ರೆಸ್ ಪ್ರಣಾಳಿಕೆಯಲ್ಲಿಯೇ ಇದೆ. ಆದರೆ ಜಾತಿಗಣತಿ ಜಾರಿಗೆ ಸರ್ಕಾರ ಯಾಕೆ ಯೋಚನೆ ಮಾಡುತ್ತಿದೆ? ಮೀನಾಮೇಷ ಎಣಿಸದೆ ಮೊದಲು ಜಾತಿಗಣತಿ ಜಾರಿ ಮಾಡಲಿ, ಸರ್ಕಾರ ಬಿದ್ದರೆ ಬೀಳಲಿ. ಕರ್ನಾಟಕದಲ್ಲಿ ಜಾತಿಗಣತಿ ಜಾರಿ ಮಾಡಲೇಬೇಕು ಎಂದು ಕಾಂಗ್ರೆಸ್ ಹಿರಿಯ ಮುಖಂಡ, ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಸ್ಫೋಟಕ ಹೇಳಿಕೆ ನೀಡಿದ್ದಾರೆ.

ನಮ್ಮ ಪ್ರಣಾಳಿಕೆಯಲ್ಲಿ ಜಾತಿ ಜನಗಣತಿ ಬಹಳ ಪ್ರಮುಖವಾದ ವಿಚಾರವಾಗಿದೆ. ನಮ್ಮೆಲ್ಲರ ನಾಯಕ ರಾಹುಲ್ ಗಾಂಧಿಯವರು ನಿನ್ನೆಯೂ ಕೂಡ ಹೇಳಿದ್ದಾರೆ. ಪ್ರಪಂಚವೇ ಮೇಲೆ ಬಿದ್ದರೂ ಕೂಡ ಜಾತಿ ಗಣತಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಸರ್ಕಾರ ಯಾಕೆ ಯೋಚನೆ ಮಾಡುತ್ತಿದೆ ಎಂದು ಗೊತ್ತಿಲ್ಲ. ಜಾತಿ ಗಣತಿ ವರದಿ ತಕ್ಷಣ ಜಾರಿಗೊಳಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಜಾತಿ ಗಣತಿ ವರದಿ ಜಾರಿ ಮಾಡಿದರೆ, ಅದರಿಂದ ಏನಾಗುತ್ತೆ ಮುಂದೆ ನೋಡೋಣ. ಇಲ್ಲಿ ವಿರೋಧ ಮಾಡುವ ಪ್ರಶ್ನೆಯೇ ಇಲ್ಲ. ಜಾತಿಗಣತಿ ಜಾರಿಯಿಂದ ಎಲ್ಲರಿಗೂ ಒಳ್ಳೆಯದಾಗುತ್ತದೆ. ಸರ್ವತೋಮುಖ ಅಭಿವೃದ್ಧಿ ಆಗುತ್ತದೆ. ಅದರಿಂದ ಸರ್ಕಾರ ಹೋಗುತ್ತೆ ಅಂದರೆ ಹೋಗಲಿ, ಭಯ ಯಾಕೆ ಬೀಳಬೇಕು? ಜಾತಿ ಗಣತಿ ■ 2ನೇ ಪುಟಕ್ಕೆ

ಕ್ಯಾಬಿನೆಟ್‌ನಲ್ಲಿ ಚರ್ಚೆಯಾಗಲಿ ಆಮೇಲೆ ನೋಡೋಣ




ಬೆಂಗಳೂರು, ಅ.6– ಜಾತಿ ಜನಗಣತಿ ವರದಿಯನ್ನು ಮುಂದಿನ ಬಾರಿ ಕ್ಯಾಬಿನೆಟ್‌ನಲ್ಲಿ ಚರ್ಚೆಗೆ ತರಲಾಗುವುದು. ಕ್ಯಾಬಿನೆಟ್‌ನಲ್ಲಿ ಚರ್ಚೆ ಆದ ಮೇಲೆ ನೋಡೋಣ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಹೇಳಿದ್ದಾರೆ.


ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಜಾತಿ ಗಣತಿ ಜಾರಿಯಿಂದ ಸರ್ಕಾರ ಹೋಗುತ್ತೆ ಅನ್ನೋದಾದ್ರೆ ಹೋಗಲಿ ಎಂಬ ಕಾಂಗ್ರೆಸ್‌ನ ಹಿರಿಯ ನಾಯಕ ಬಿ.ಕೆ ಹರಿಪ್ರಸಾದ್ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ್ದಾರೆ. ಯಾವಾಗಲೂ ಕೇಂದ್ರ ಸರ್ಕಾರದ ಜನಗಣತಿಯನ್ನೇ ಎಲ್ಲರೂ ಪರಿಗಣಿಸುತ್ತಾರೆ. ಒಂದು ಸಾರಿ ಕ್ಯಾಬಿನೆಟ್‌ನಲ್ಲಿ ಚರ್ಚೆಯಾಗಲಿ. ಆಮೇಲೆ ನೋಡೋಣ. ರಾಜ್ಯ ಸರ್ಕಾರ 160 ಕೋಟಿ ರೂ. ಖರ್ಚು ಮಾಡಿದೆ, ಅದಕ್ಕೂ ಲೆಕ್ಕ ಕೊಡಬೇಕು. ನಾಳೆ ಸಿಎಜಿ ಕೂಡ ಇದಕ್ಕೆ ಆಕ್ಷೇಪ ಮಾಡಬಹುದು. ಹೀಗಾಗಿ ರಾಜ್ಯದ ಜನಗಣತಿ ಕ್ಯಾಬಿನೆಟ್‌ಗೆ ತರುತ್ತೇವೆ ಎಂದಿದ್ದಾರೆ.

ಜನಗಣತಿ ಸ್ವೀಕಾರ ವಿಳಂಬಕ್ಕೂ ಕಾರಣಗಳಿವೆ. ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ ಅಸೆಂಬ್ಲಿಗೆ ತರಬೇಕಾ? ಬೇಡವಾ? ಎನ್ನುವುದನ್ನು ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಲಾಗುವುದು. ಆದರೆ ಇದೊಂದು ವಿಚಿತ್ರ ಸಂದರ್ಭ ಜಾತಿ ■ 2ನೇ ಪುಟಕ್ಕೆ

ಬಾನಂಗಳದಲ್ಲಿ ವರ್ಣಮಯ ಚಿತ್ತಾರ ಮೂಡಿಸಿದ ಡ್ರೋನ್‌ಗಳು; ಮನಸೋತ ಪ್ರೇಕ್ಷಕರು








ಮೈಸೂರು, ಅ.6(ಎಸ್‌ಬಿಡಿ)– ಮಿನುಗುವ ಡ್ರೋನ್‌ಗಳಲ್ಲಿ ಪಡಿಮೂಡಿದ ವರ್ಣಮಯ ವಿವಿಧ ಆಕೃತಿಗಳ ಚಿತ್ತಾರ, ಮೈಸೂರು ದಸರಾ ಮಹೋತ್ಸವದ ಸಂಭ್ರಮ ಹೆಚ್ಚಿಸಿತು.

ದಸರಾ ಮಹೋತ್ಸವದ ಅಂಗವಾಗಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ(ಸೆಸ್ಕ್)ದ ವತಿಯಿಂದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಭಾನುವಾರ ನಡೆದ ಡ್ರೋನ್ ಪ್ರದರ್ಶನವನ್ನು ಸಾವಿರಾರು ಮಂದಿ ಕಣ್ತುಂಬಿಕೊಂಡರು. 1500 ಸಾವಿರ ಡ್ರೋನ್‌ಗಳಿಂದ ಬಾನಂಗಳದಲ್ಲಿ ಮೂಡಿದ ಚಿತ್ತಾರಗಳನ್ನು ಕಂಡು ಹರ್ಷಚಕಿತರಾದರು.

ವರ್ಣಮಯ ಬೆಳಕಿನೊಂದಿಗೆ ಚುಕ್ಕಿಗಳಂತೆ ಮೈದಾನದ ಪಶ್ಚಿಮ ದಿಕ್ಕಿನಿಂದ ಬಾನಂಗಳದತ್ತ ಹಾರಿದ ಡ್ರೋನ್‌ಗಳಿಂದ ರಾಷ್ಟ್ರಧ್ವಜ, ಚಂದ್ರಯಾನ, ವಿಶ್ವ ಭೂಪಟ, ಯೋಧ, ಕರ್ನಾಟಕ ಭೂಪಟ, ಅಂಬಾರಿ ಹೊತ್ತ ಆನೆ, ಸುವರ್ಣ ಕರ್ನಾಟಕ ಸಂಭ್ರಮ, ಅರಳಿಮರ, ತಿಮಿಂಗಿಲ, ಚಾಮುಂಡೇಶ್ವರಿ ದೇವಿ ಸೇರಿದಂತೆ 15ಕ್ಕೂ ಹೆಚ್ಚು ವಿನ್ಯಾಸಗಳು ಪಡಿಮೂಡಿದವು. ಕಿಕ್ಕಿರಿದಿದ್ದ ಜನಸಮೂಹ ಆಶ್ಚರ್ಯದಿಂದ ಹೋ... ಎಂಬ ಉದ್ಗಾರದೊಂದಿಗೆ ಎದ್ದುನಿಂತು ತಮ್ಮ ಮೊಬೈಲ್‌ಗಳಲ್ಲಿ ಡ್ರೋನ್ ಪ್ರದರ್ಶನವನ್ನು ಸೆರೆಹಿಡಿದು ಸಂಭ್ರಮಿಸಿದರು. ಆಗಸದಲ್ಲಿ ಮೂಡಿದ ವಿನ್ಯಾಸಕ್ಕೆ ಪೂರಕವಾದ ಹಿನ್ನೆಲೆ ಸಂಗೀತ ಪ್ರಸಾರವಾಗಿದ್ದು ವಿಶೇಷವಾಗಿತ್ತು. ■ 6ನೇ ಪುಟಕ್ಕೆ

ಇಂದು ಮತ್ತೊಂದು ಅವಕಾಶ

ಯಾವುದೇ ಪಾಸ್ ಅಥವಾ ಟಿಕೆಟ್ ಇಲ್ಲದೆ ಡ್ರೋನ್ ಶೋ ವೀಕ್ಷಣೆಗೆ ಸೋಮವಾರ ಮತ್ತೊಂದು ಅವಕಾಶ ಕಲ್ಪಿಸಲಾಗಿದೆ. ರಾತ್ರಿ 8ಕ್ಕೆ ಡ್ರೋನ್ ಶೋ ಆರಂಭವಾಗಲಿದ್ದು, ಮುಂಚಿತವಾಗಿ ಹೋದವರಿಗೆ ಸ್ಥಳಾವಕಾಶ ಸಿಗಲಿದೆ. ಅ.11ರಂದು ಪಂಜಿನ ಕವಾಯತು ತಾಲೀಮು ಹಾಗೂ ಅ.12ರಂದು ಪಂಜಿನ ಕವಾಯತು ವೇಳೆಯೂ ಡ್ರೋನ್ ಪ್ರದರ್ಶನವಿರಲಿದೆ. ಆದರೆ ಆ ಎರಡು ದಿನ ಪಾಸ್ ಅಥವಾ ಟಿಕೆಟ್ ಇದ್ದವರಿಗೆ ಮಾತ್ರ ಅವಕಾಶ.




ಮುಕ್ತ ಅವಕಾಶ; ನೆರೆದ ಜನಸಾಗರ

ಯಾವುದೇ ಪಾಸ್ ವ್ಯವಸ್ಥೆ ಇಲ್ಲದೆ ಮುಕ್ತವಾಗಿ ಡ್ರೋನ್ ಶೋ ವೀಕ್ಷಿಸಲು ಅವಕಾಶ ಕಲ್ಪಿಸಿದ್ದರಿಂದ ಪಂಜಿನ ಕವಾಯತು ಮೈದಾನದಲ್ಲಿ ಜನಸಾಗರವೇ ನೆರೆದಿತ್ತು. ಸಂಜೆ 5.30ರಂದಲೇ ಜನ ಆಗಮಿಸಲಾರಂಭಿಸಿದರು. ಸಂಜೆ 7ರ ಹೊತ್ತಿಗೆ ಮೈದಾನ ಸಂಪೂರ್ಣ ಭರ್ತಿಯಾಗಿ ಅಷ್ಟೇ ಜನ ಹೊರಭಾಗದಲ್ಲಿ ನಿಂತಿದ್ದರು. ಹೇಗಾದರೂ ಡ್ರೋನ್ ಶೋ ಕಣ್ತುಂಬಿಕೊಳ್ಳುವ ತವಕದಲ್ಲಿ ಎಲ್ಲೆಡೆ ಓಡಾಡುತ್ತಿದ್ದರು. ರೂಫ್ ಅಡಿಯಲ್ಲಿ ಕುಳಿತಿದ್ದವರಿಗೆ ಮರೆಯಾಗಿದ್ದರಿಂದ ಪ್ರದರ್ಶನ ಆರಂಭವಾಗುತ್ತಿದ್ದಂತೆ ಒಬ್ಬರ ಮೇಲೊಬ್ಬರು ಬಿದ್ದು, ಮೊಬೈಲ್‌ನಲ್ಲಿ ಸೆರೆ ಹಿಡಿದರು. ಬನ್ನಿಮಂಟಪ ಬಡಾವಣೆಯ ರಸ್ತೆಗಳಲ್ಲೆಲ್ಲಾ ವಾಹನಗಳನ್ನು ನಿಲುಗಡೆ ಮಾಡಿದ್ದರು. ಕಾರ್ಯಕ್ರಮ ಮುಕ್ತಾಯವಾಗಿ ಜನ ಹೊರಬರುತ್ತಿದ್ದಂತೆ ಬೆಂಗಳೂರು–ಮೈಸೂರು ಹೆದ್ದಾರಿ, ನೆಲ್ಸನ್ ಮಂಡೇಲಾ ರಸ್ತೆ, ಹನುಮಂತನಗರದ ರಸ್ತೆಗಳಲ್ಲಿ ವಿಪರೀತ ವಾಹನ ದಟ್ಟಣೆಯಾಗಿ ಪ್ರಯಾಣಿಕರು ಬಸವಳಿದರು.

ಮೈಸೂರು ಮಿತ್ರ ಸೋಮವಾರ 7 ಅಕ್ಟೋಬರ್ 2024

ಭಾನುವಾರದ ರಜಾ ಇದ್ದರೂ ಮೈಸೂರು ಲೋಕಾಯುಕ್ತರು ಕರ್ತವ್ಯ ನಿರ್ವಹಣೆ

ಸಿದ್ದರಾಮಯ್ಯ ವಿರುದ್ಧದ ಎಫ್ಐಆರ್ ಪ್ರಕರಣದ ತನಿಖೆ ಮತ್ತಷ್ಟು ಚುರುಕು



ಮೈಸೂರು,ಅ.6(ಬಿಎಲ್‌ಯು)– ಭಾನುವಾರದ ರಜಾ ಇದ್ದರೂ ಮೈಸೂರು ಲೋಕಾಯುಕ್ತ ಪೊಲೀಸರು ಕಾರ್ಯನಿರ್ವಹಿಸಿದ್ದಾರೆ.

ಭಾನುವಾರದ ರಜಾ ಇದ್ದರೂ ಕಚೇರಿ ಬಾಗಿಲು ತೆರೆದಿದ್ದ ಲೋಕಾಯುಕ್ತ ಪೊಲೀಸರು ಮುಡಾ ಹಗರಣದ ತನಿಖೆಗೆ ಸಂಬಂಧಿಸಿದಂತೆ ದಾಖಲಾತಿ ಸಿದ್ದಪಡಿಸುವ ಕಾರ್ಯದಲ್ಲಿ ತೊಡಗಿದ್ದರು. ಲೋಕಾಯುಕ್ತ ಕಚೇರಿಯ ಎಲ್ಲಾ ಅಧಿಕಾರಿಗಳು ಇಂದು ಕಚೇರಿಗೆ ಹಾಜರಾಗಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ದಾಖಲಾಗಿರುವ ಎಫ್ಐಆರ್ ಪ್ರಕರಣದ ಕಡತಗಳ ಪರಿಶೀಲನೆಯಲ್ಲಿ ತೊಡಗಿದ್ದರು.

ಲೋಕಾಯುಕ್ತ ಎಸ್ಪಿ ಉದೇಶ್ ನೇತೃತ್ವದ ತಂಡ ನಿನ್ನೆ ರಾತ್ರಿ 11 ಗಂಟೆ ತನಕ ಮುಡಾದಲ್ಲಿ ಹಲವು ದಾಖಲಾತಿ ಪರಿಶೀಲನೆ ನಡೆಸಿತು. ಆ ವೇಳೆ ಮುಡಾ ಆಯುಕ್ತ ರಘುನಂದನ್ ಅವರಿಂದ ಹಲವು ಮಾಹಿತಿಗಳನ್ನು ಕಲೆ ಹಾಕಿದ್ದಾರೆ.

ಒಟ್ಟಾರೆ ಲೋಕಾಯುಕ್ತ ಪೊಲೀಸರು ತನಿಖೆಯನ್ನು ಮತ್ತಷ್ಟು ಚುರುಕುಗೊಳಿಸಿದ್ದು, ಮುಂದಿನ ತನಿಖೆಯ ಆಯಾಮ ತೀವ್ರ ಕುತೂಹಲ ಮೂಡಿಸಿದೆ.

ಸ್ವಾತಂತ್ರ್ಯ ಹೋರಾಟಗಾರರು, ಸಾಧಕರಿಗೆ ಸನ್ಮಾನ



ಮೈಸೂರಿನ ಬೃಂದಾವನ ಬಡಾವಣೆಯ ನಿವಾಸಿ ಶತಾಯುಷಿ, ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದ ಸ್ವಾತಂತ್ರ್ಯ ಹೋರಾಟಗಾರ್ತಿ ಶ್ರೀಮತಿ ಸಿ.ಎಸ್. ಮಂಗಳಮ್ಮ ಹಾಗೂ ಜಪಾನ್‌ನಲ್ಲಿ ಸಂಶೋಧನಾ ಕ್ಷೇತ್ರದಲ್ಲಿ ಆಯ್ಕೆಯಾಗಿರುವ ನಂದಗೋಕುಲ ಬಡಾವಣೆಯ ನಿವಾಸಿ ರವೀಂದ್ರ ಪಿ. ಚೌದರಿ ಅವರನ್ನು ಗಾಂಧಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಸಂದರ್ಭದಲ್ಲಿ ಮಾಜಿ ಕಾರ್ಪೋರೇಟರ್ ಎಸ್‌ಬಿಎಂ ಮಂಜು ಅಭಿನಂದಿಸಿದರು. ಈ ವೇಳೆ ಸಿ.ಎಸ್.ಮಂಗಳಮ್ಮ ಅವರ ಪುತ್ರ ನರಹರಿ, ಬೃಂದಾವನ ಬಡಾವಣೆಯ ಕೃಷ್ಣಪ್ಪ, ಮೋಹನ್, ರಘುರಾಮ್, ಚೇತನ್ ಇನ್ನಿತರರು ಉಪಸ್ಥಿತರಿದ್ದರು.

ಸಚಿವ ಭೈರತಿ ಸುರೇಶ್, ಲೋಕಾಯುಕ್ತ ಹಿಂದಿನ ಎಸ್ಪಿ ವಿರುದ್ಧ ಕ್ರಮಕ್ಕೆ ಸ್ನೇಹಮಯಿ ಕೃಷ್ಣ ಆಗ್ರಹ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ ಪತ್ರ

ಮೈಸೂರು, ಅ.6(ಬಿಎಲ್‌ಯು)– ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಹಾಗೂ ಲೋಕಾಯುಕ್ತ ಹಿಂದಿನ ಎಸ್ಪಿ ಸುಜಿತ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಆಗ್ರಹಿಸಿದ್ದಾರೆ.

ಈ ಸಂಬಂಧ ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಡಾ.ಅಲೋಕ್ ಮೋಹನ್ ಅವರಿಗೆ ಪತ್ರ ಬರೆದಿರುವ ಅವರು, ಭೈರತಿ ಸುರೇಶ್ ಮುಡಾದ ಅಕ್ರಮ ದಾಖಲಾತಿಗಳನ್ನು ಯಾವ ರೀತಿ ಕೊಂಡೊಯ್ದರು ಹಾಗೂ ಇದಕ್ಕೆ ಹಿಂದಿನ ಲೋಕಾಯುಕ್ತ ಎಸ್ಪಿ ಸುಜಿತ್ ಯಾವ ರೀತಿ ಸಹಕಾರ ನೀಡಿದರು ಎಂದು ಸಮಗ್ರವಾಗಿ ವಿವರಿಸಿದ್ದಾರೆ

ಮುಡಾ ಬ್ರಹ್ಮಾಂಡ ಭ್ರಷ್ಟಾಚಾರ ಬಹಿರಂಗಗೊಂಡ ಸಂದರ್ಭದಲ್ಲಿ ಜುಲೈ 27, 2024 ರಂದು ಮೈಸೂರಿಗೆ ಆಗಮಿಸಿದ್ದ ಭೈರತಿ ಸುರೇಶ್, ಮುಡಾದಲ್ಲಿದ್ದ ಹಲವು ದಾಖಲಾತಿಗಳನ್ನು ಹೆಲಿಕಾಪ್ಟರ್‌ನಲ್ಲಿ ಕೊಂಡೊಯ್ದರು ಎಂದು ಆರೋಪಿಸಿದ್ದಾರೆ. ಲೋಕಾಯುಕ್ತ ಹಿಂದಿನ ಎಸ್ಪಿ ಸುಜಿತ್ ಇದಕ್ಕೆ ಸಹಕರಿಸಿದ್ದಾರೆ ಎಂದು ಆಪಾದಿಸಿದ್ದಾರೆ. ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರಿಕಾಗೋಷ್ಠಿಯಲ್ಲಿ ಬಿಡುಗಡೆ ಮಾಡಿದ ದಾಖಲಾತಿಗಳು ಮುಡಾದಿಂದ ಕೊಂಡೊಯ್ದಿದ್ದ ದಾಖಲಾತಿಗಳಾಗಿದೆ.

ಈ ಹಿನ್ನೆಲೆ ಭೈರತಿ ಸುರೇಶ್ ಹಾಗೂ ಸುಜಿತ್ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸ್ನೇಹಮಯಿ ಕೃಷ್ಣ ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಡಾ.ಅಲೋಕ್ ಮೋಹನ್ ಅವರಿಗೆ ಪತ್ರ ಬರೆದು ಆಗ್ರಹಿಸಿದ್ದಾರೆ.

ಒಂದನೇ ಪುಟದಿಂದ

ಸಿದ್ದರಾಮಯ್ಯ ರಾಜೀನಾಮೆ

ಅವರು ರಾಜೀನಾಮೆ ನೀಡುವುದು ಶತಸಿದ್ಧವಾಗಿದ್ದು, ಮುಖ್ಯಮಂತ್ರಿ ಸ್ಥಾನಕ್ಕಾಗಿ ಏಳೆಂಟು ಮಂದಿ ಟವಲ್ ಹಾಕಿದ್ದಾರೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಪೈಪೋಟಿ ಹೆಚ್ಚಾಗಲಿದೆ. ಇದರಿಂದ ಸರ್ಕಾರ ಪತನವಾಗುವ ಸಾಧ್ಯತೆಯೂ ತಳ್ಳಿಹಾಕುವ ಹಾಗಿಲ್ಲ. ಹಾಗಾಗಿ ಕಾರ್ಯಕರ್ತರು ಪಕ್ಷವನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಕೆಲಸ ಮಾಡಬೇಕು ಎಂದು ಕರೆ ನೀಡಿದರು. ಮುಡಾ ಹಗರಣ ಕುರಿತು ಮೊದಲು ಧ್ವನಿ ಎತ್ತಿದವರು ನಮ್ಮ ಶಾಸಕ ಶ್ರೀವತ್ಸ ಅವರಿಗೆ ಪಕ್ಷವೂ ಕೂಡ ಸಾಥ್ ನೀಡಿದ್ದರಿಂದ ಈ ಪ್ರಕರಣ ರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಯಾಗುತ್ತಿದೆ. ಮೊದಲು ಧ್ವನಿ ಎತ್ತಿದ ಶ್ರೀವತ್ಸರನ್ನು ಸನ್ಮಾನಿಸಬೇಕು ಎಂದರು.

ಜಿಟಿಡಿ ಹೇಳಿಕೆ ವೈಯುಕ್ತಿಕ: ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡರು ಮುಖ್ಯಮಂತ್ರಿಗಳ ರಾಜೀನಾಮೆ ಅಗತ್ಯವಿಲ್ಲ ಎಂದು ಹೇಳಿರುವುದು ಅವರ ವೈಯಕ್ತಿಕ ಹಾಗೂ ಜೆಡಿಎಸ್‌ನ ಆಂತರಿಕ ವಿಚಾರವಾಗಿದೆ. ಅದನ್ನು ಸರಿಪಡಿಸಿಕೊಳ್ಳುವ ಶಕ್ತಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಗಿದೆ. ಮುಡಾ ಹಗರಕ್ಕೆ ಸಂಬಂಧಿಸಿದಂತೆ ಬೆಂಗಳೂರಿನಿಂದ ಮೈಸೂರಿಗೆ ಪಾದಯಾತ್ರೆ ಕೈಗೊಂಡಾಗ ಜಿ.ಟಿ.ದೇವೇಗೌಡರನ್ನು ಕೇಳಿ ನಾವು ನಿರ್ಧಾರ ಕೈಗೊಂಡಿಲ್ಲ. ಆದರೆ ಅಕ್ರಮದ ವಿರುದ್ಧ ಹೋರಾಟ ವಿಪಕ್ಷಗಳ ಜವಾಬ್ದಾರಿಯಾಗಿದೆ ಎಂದು ಹೇಳಿದರು. ಮುಡಾ ಹಗರಣವನ್ನು ದಿಕ್ಕು ತಪ್ಪಿಸಲು ಮುಖ್ಯಮಂತ್ರಿಗಳು ಜಾತಿ ಗಣತಿ ಬಗ್ಗೆ ಮಾತನಾಡುತ್ತಿದ್ದಾರೆ. ಅವರ ಹೇಳಿಕೆಯಲ್ಲಿ ಪ್ರಾಮಾಣಿಕತೆ ಕಾಣಿಸುತ್ತಿಲ್ಲ ಎಂದ ಅವರು, ರಾಜ್ಯದ ಮುಖ್ಯಮಂತ್ರಿ ಅಪರಾಧಿ ಸ್ಥಾನದಲ್ಲಿರುವುದು ರಾಜ್ಯದ ದುರಂತ. ಸಿದ್ದರಾಮಯ್ಯ ಭಂಡತನ ಬದಿಗಿಟ್ಟು ರಾಜೀನಾಮೆ ನೀಡಿದರೆ ಅವರ ಮರ್ಯಾದೆ ಉಳಿಯಲಿದೆ. ಇಲ್ಲದಿದ್ದರೆ ಗೌರವ ಕಡಿಮೆಯಾಗುತ್ತದೆ. ಕಾಂಗ್ರೆಸ್ ಹೈಕಮಾಂಡ್ ಎಷ್ಟು ದಿನ ಅವರ ಬೆಂಬಲಕ್ಕೆ ನಿಲ್ಲುತ್ತದೋ ನೋಡೋಣ ಎಂದರು.

ವೇದಿಕೆಯಲ್ಲಿ ಪಕ್ಷದ ನಗರಾಧ್ಯಕ್ಷರೂ ಆದ ಮಾಜಿ ಶಾಸಕ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಶಾಸಕ ಶ್ರೀವತ್ಸ ಇನ್ನಿತರ ಮುಖಂಡರಿದ್ದರು.

ವರದಿ ಜಾರಿ ಮಾಡಲೇಬೇಕು

ಮಾಡಿರುವುದು ಜನಸಾಮಾನ್ಯರ ಹಣದಿಂದ. ಪಕ್ಷದ ಪ್ರಣಾಳಿಕೆಯಲ್ಲಿ ಜಾತಿ ಗಣತಿ ವಿಚಾರ ಇದೆ. ಅದನ್ನು ಜಾರಿಗೊಳಿಸಲು ಮೀನಾ ಮೇಷ ಎಣಿಸುವುದು ಬೇಕಾಗಿಲ್ಲ. ರಾಹುಲ್ ಗಾಂಧಿಯವರು ಹೇಳಿದ್ದಾರೆ, ಮಲ್ಲಿಕಾರ್ಜುನ ಖರ್ಗೆ ಕೂಡ ಹೇಳಿದ್ದಾರೆ. ಜಾತಿ ಜನಗಣತಿಯನ್ನು ಅನುಷ್ಠಾನ ಮಾಡಬೇಕು. ವರದಿಯಲ್ಲಿ ಸಣ್ಣಪುಟ್ಟ ತಪ್ಪುಗಳಿದ್ದರೆ ಚರ್ಚೆ ಮಾಡಿ ಸರಿ ಮಾಡಬೇಕು. ಇದನ್ನು ಮೊದಲಿನಿಂದಲೂ ಹೇಳುತ್ತಿದ್ದೇನೆ ಈಗಲೂ ಹೇಳುತ್ತಿದ್ದೇನೆ ಎಂದರು. ಅಹಿಂದ ಎಂಬುದು ನನಗೆ ಸರಿಯಾಗಿ ಏನು ಅಂತ ಗೊತ್ತಿಲ್ಲ. ನಾನು ಮೊದಲಿನಿಂದ ನಂಬಿಕೆ ಇಟ್ಟಿರುವುದು ಮಹಾತ್ಮ ಗಾಂಧಿ, ಜವಾಹರ್ ಲಾಲ್ ನೆಹರು ಹೇಳಿರುವ ಸರ್ವಧರ್ಮ ಸಮಭಾವದಲ್ಲಿ, ಹಾಗಾಗಿ ಎಲ್ಲಾ ವರ್ಗದವರಿಗೂ ಅನುಕೂಲ ಆಗಬೇಕು ಅನ್ನುವ ಕಾರಣಕ್ಕಾಗಿ ಹೇಳುತ್ತಿದ್ದೇನೆ ಎಂದರು.

ಡಿಕೆ ಸುರೇಶ್ ಹೇಳಿಕೆಗೆ ಹರಿಪ್ರಸಾದ್ ತಿರುಗೇಟು: ಜಾತಿ ಗಣತಿ ವಿಚಾರದಲ್ಲಿ ಸಿಎಂ ಎಚ್ಚರಿಕೆ ಹೆಜ್ಜೆ ಇಡಲಿ ಎಂಬ ಹೇಳಿಕೆ ನೀಡಿದ್ದ ಡಿಕೆ ಸುರೇಶ್ ಹೇಳಿಕೆಗೆ ತಿರುಗೇಟು ನೀಡಿದ ಬಿಕೆ ಹರಿಪ್ರಸಾದ್, ಡಿಕೆ ಸುರೇಶ್ ಯಾರಿಗೆ ಎಚ್ಚರಿಕೆ ಕೊಟ್ಟಿದ್ದಾರೆ ಗೊತ್ತಿಲ್ಲ. ಇದು ಕಾಂಗ್ರೆಸ್ ಪಕ್ಷದ ಕಾರ್ಯಕ್ರಮ. ಚುನಾವಣಾ ಪ್ರಣಾಳಿಕೆಯಲ್ಲೂ ಕೂಡ ಹೇಳಿದ್ದೇವೆ. ಜಾತಿಗಣತಿ ಜಾರಿ ಬಗ್ಗೆ ಆಶ್ವಾಸನೆ ಕೂಡ ಕೊಟ್ಟಿದ್ದೇವೆ. ಡಿಕೆ ಸುರೇಶ್ ಅವರು ಪ್ರಣಾಳಿಕೆ ಏನು ಅಂತ ನೋಡಿ ಹೇಳಲಿ, ಜಾತಿ ಗಣತಿ ವರದಿಗೆ ಮಹತ್ವ ಇದೆಯೋ ಇಲ್ಲವೋ ಗೊತ್ತಿಲ್ಲ. ಕಾಂಗ್ರೆಸ್ ಪ್ರಣಾಳಿಕೆ ಬಗ್ಗೆ ಗೌರವ ಇರೋರು ಎಲ್ಲರೂ ಕೂಡ ರಾಹುಲ್ ಗಾಂಧಿ ಹೇಳಿರುವ ವಿಚಾರಕ್ಕೆ ಗೌರವ ಇದ್ದವರು ಒಪ್ಕೋ ಬೇಕಾಗುತ್ತೆ ವಿರೋಧ ಸಹಜವಾಗಿ ಬಂದೇ ಬರುತ್ತದೆ. ಕಾಂಗ್ರೆಸ್ ಪಕ್ಷವನ್ನು ಪ್ರಾರಂಭದಲ್ಲಿ 77 ಜನ ಶುರು ಮಾಡಿದರು. ಮಹಾತ್ಮ ಗಾಂಧಿಯವರು ದಲಿತರು, ಎಲ್ಲರನ್ನು ಸೇರಿಸಿಕೊಂಡರು ಬಳಿಕ ಪಕ್ಷ ದೊಡ್ಡದಾಯಿತು. ಈಗ ಹಿಂದುಳಿದ ವರ್ಗದವರಿಂದ ಪಕ್ಷ ಬಲಪಡುತ್ತಿದೆ ಎಂದರು.

ಚರ್ಚೆಯಾಗಲಿ ಆಮೇಲೆ ನೋಡೋಣ

ಜನಗಣತಿ ಸ್ವೀಕಾರ ಮಾಡಿಲ್ಲ ಅಂದರೆ ಮಾಡಿಲ್ಲ ಅಂತಾರೆ, ಮಾಡಿದರೆ ಯಾಕೆ ಈಗ ಮಾಡುತ್ತೀರಿ? ಎಂದು ವ್ಯಾಖ್ಯಾನ ಮಾಡುತ್ತಾರೆ. ಅಸೆಂಬ್ಲಿಗೆ ಬೇಕಾಗಿಲ್ಲ ಎಂದು ತೀರ್ಮಾನ ಮಾಡಿದರೆ ಮುಗಿಯಿತು. ಜನಗಣತಿ ಕೂಡ ಆಗಲಿ. ಓವರ್ ಲ್ಯಾಪ್ ಆಗಿದ್ದರೆ ಮುಂದೆ ಸರಿಪಡಿಸಿಕೊಳ್ಳಬಹುದು. ಯಾವುದಾದರೂ ಸಮುದಾಯದ ಅಂಕಿಸಂಖ್ಯೆ ಹೆಚ್ಚು ಕಮ್ಮಿ ಆಗಿದ್ದರೆ ಆಮೇಲೆ ಸರಿ ಮಾಡಿಕೊಳ್ಳಬಹುದು ಎಂದು ತಿಳಿಸಿದ್ದಾರೆ.

ದಸರಾ ಪಾರಂಪರಿಕ ನಡಿಗೆಗೆ ಚಾಲನೆ



ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿ ಭಾನುವಾರ ಬೆಳಗ್ಗೆ ಪಾರಂಪರಿಕ ನಡಿಗೆ ಸಾಗುತ್ತಿರುವುದನ್ನು ಕಾಣಬಹುದು.

ಮೈಸೂರು, ಅ.6(ಎಂಟಿವೈ)– ದಸರಾ ಮಹೋತ್ಸವ ಹಿನ್ನೆಲೆಯಲ್ಲಿ ಮೈಸೂರಲ್ಲಿ ಭಾನುವಾರ ಬೆಳಗ್ಗೆ ಆಯೋಜಿಸಿದ್ದ ಪಾರಂಪರಿಕ ನಡಿಗೆಯಲ್ಲಿ ಕಾಲೇಜು ವಿದ್ಯಾರ್ಥಿಗಳೂ ಸೇರಿ 350ಕ್ಕೂ ಹೆಚ್ಚು ಮಂದಿ ಪಾಲ್ಗೊಂಡು ನಗರದಲ್ಲಿರುವ ಪಾರಂಪರಿಕ ಕಟ್ಟಡಗಳನ್ನು ವೀಕ್ಷಿಸಿ, ಅವುಗಳ ಮಹತ್ವ ಅರಿತು ಹೌಹಾರಿದರು.

ಪುರಾತತ್ವ, ಸಂಗ್ರಹಾಲಯಗಳು ಹಾಗೂ ಪರಂಪರೆ ಇಲಾಖೆ ವತಿಯಿಂದ ಪಾರಂಪರಿಕ ದಸರಾ ಆಯೋಜಿಸಿದ್ದು, ಈಗಾಗಲೇ ಕಳೆದ ಎರಡು ದಿನಗಳಿಂದ ವಿವಿಧ ಕಾರ್ಯಕ್ರಮ ನಡೆಸಲಾಗುತ್ತಿದ್ದು, ಇಂದು ಪಾರಂಪರಿಕ ನಡಿಗೆ ಆಯೋಜಿಸಲಾಗಿತ್ತು. ಇಂದು ಬೆಳಗ್ಗೆ ಪಾರಂಪರಿಕ ನಡಿಗೆಗೆ ಪುರಾತತ್ವ, ಸಂಗ್ರಹಾಲಯಗಳು ಹಾಗೂ ಪರಂಪರೆ ಇಲಾಖೆ ಆಯುಕ್ತ ದೇವರಾಜು ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಹಲವು ಪಾರಂಪರಿಕ ಕಟ್ಟಡಗಳಿದ್ದು, ಅವುಗಳನ್ನು ಉಳಿಸಿ, ಸಂರಕ್ಷಿಸುವ ಹೊಣೆ ಸರ್ಕಾರದೊಂದಿಗೆ ಯುವ ಪೀಳಿಗೆ ಮೇಲೂ ಇದೆ. ಯುವ ಜನರಲ್ಲಿ ಅರಿವು ಮೂಡಿಸಲು ಪಾರಂಪರಿಕ ನಡಿಗೆ ಆಯೋಜಿಸಲಾಗಿದೆ. ಪ್ರತಿಯೊಬ್ಬರೂ ಪಾರಂಪರಿಕ ಕಟ್ಟಡಗಳು, ನಮ್ಮ ಪರಂಪರೆ ಹಾಗೂ ಸಂಸ್ಕೃತಿಯನ್ನು ಉಳಿಸಲು ಮುಂದಾಗಬೇಕು. ರಾಜ್ಯದಲ್ಲಿ ಸಂರಕ್ಷಣೆ ಮಾಡಬೇಕಾದ ಹಲವು ಕಟ್ಟಡ ಹಾಗೂ ವಾಸ್ತು ಶಿಲ್ಪಗಳಿವೆ. ಇವುಗಳ ಬಗ್ಗೆ ವಿದ್ಯಾರ್ಥಿಗಳಿಗೆ, ಸಾರ್ವಜನಿಕರಿಗೆ ಅರಿವು ಮೂಡಿಸಲು ಕಾರ್ಯಕ್ರಮ ರೂಪಿಸಲಾಗಿದೆ ಎಂದು ತಿಳಿಸಿದರು.

ಚಾಮರಾಜನಗರ ವಿಶ್ವವಿದ್ಯಾನಿಲಯದ ಉಪಕುಲಪತಿ ಗಂಗಾಧರ್ ಮಾತನಾಡಿ, ಮೈಸೂರಿನ ಅರಮನೆ ಮತ್ತು ಪಾರಂಪರಿಕ ಕಟ್ಟಡಗಳು ವಿಶ್ವದ ಎಲ್ಲೆಡೆಯೂ ಪ್ರಸಿದ್ಧಿಯಾಗಿದೆ. ಅಂತಹ ವಿಶ್ವ ವಿಖ್ಯಾತ ಪರಂಪರೆ, ಸಂಸ್ಕೃತಿಯನ್ನು ಉಳಿಸುವುದು ನಮ್ಮೆಲ್ಲರ ಕರ್ತವ್ಯ. ಈ ಹಿನ್ನೆಲೆ ಯುವ ಜನರಲ್ಲಿ ಅರಿವು ಮೂಡಿಸಿ, ಪರಂಪರೆಯ ಮಹತ್ವವನ್ನು ತಿಳಿಸಲು ಪಾರಂಪರಿಕ ನಡಿಗೆ ಮಹತ್ವದ ಪಾತ್ರವಹಿಸಿದೆ. ನಡಿಗೆಯಲ್ಲಿ ತಿಳಿದ ಸಂಗತಿಯನ್ನು ಇತರರೊಂದಿಗೆ ಹಂಚಿಕೊಂಡು ಪರಂಪರೆ ಸಂಸ್ಕೃತಿ, ಪಾರಂಪರಿಕ ಕಟ್ಟಡಗಳ ಉಳಿವು ಹಾಗೂ ಸಂರಕ್ಷಣೆಯ ಬಗ್ಗೆ ಅರಿವು ಮೂಡಿಸಬೇಕು ಎಂದು ಸಲಹೆ ನೀಡಿದರು.

ಪಾರಂಪರಿಕ ನಡಿಗೆ: ಪುರಭವನದಿಂದ ಆರಂಭವಾದ ಪಾರಂಪರಿಕ ನಡಿಗೆ ದೊಡ್ಡ ಗಡಿಯಾರ, ಫ್ರೀಮೇಸನ್ ಕ್ಲಬ್, ಹತ್ತನೆ ಚಾಮರಾಜ ಒಡೆಯರ್ ವೃತ್ತ, ಅಂಬಾವಿಲಾಸ ಅರಮನೆ, ನಾಲ್ಕನೇ ಕೃಷ್ಣರಾಜ ಒಡೆಯರ್ ವೃತ್ತ, ಚಿಕ್ಕ ಗಡಿಯಾರ, ದೇವರಾಜ ಮಾರುಕಟ್ಟೆ, ಕೃಷ್ಣರಾಜೇಂದ್ರ ಆಸ್ಪತ್ರೆ, ಮೈಸೂರು ಮೆಡಿಕಲ್ ಕಾಲೇಜು, ಸರ್ಕಾರಿ ಆಯುರ್ವೇದ ಕಾಲೇಜು, ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್, ಗಾಂಧಿ ವೃತ್ತದ ಮೂಲಕ ರಂಗಾಚಾರ್ಲು ಪುರಭವನದ ಆವರಣ ತಲುಪಿ ಕೊನೆಗೊಂಡಿತು. ಈ ಸಂದರ್ಭದಲ್ಲಿ ಸಂಗೀತ ವಿಶ್ವವಿದ್ಯಾನಿಲಯದ ಕುಲಪತಿ ನಾಗೇಶ್ ಬೆಟ್ಟಕೋಟೆ, ಪಾರಂಪರಿಕ ತಜ್ಞ ಪ್ರೊ.ರಂಗರಾಜು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಪಾರಂಪರಿಕ ಕಟ್ಟಡಗಳ ವೀಕ್ಷಣೆ, ಮಾಹಿತಿಗಾಗಿ ವಿಆರ್ ಕಾರ್ಡ್

ಪುರಾತತ್ವ, ಸಂಗ್ರಹಾಲಯಗಳು ಹಾಗೂ ಪರಂಪರೆ ಇಲಾಖೆ ವತಿಯಿಂದ ಮೈಸೂರಿನಲ್ಲಿರುವ ಪಾರಂಪರಿಕ ಕಟ್ಟಡಗಳ ಬಗ್ಗೆ ಕುಳಿತಲ್ಲಿಯೇ ಮೊಬೈಲ್ ಮೂಲಕ ಮಾಹಿತಿ ತಿಳಿಯಲು ವಿ.ಆರ್ ಕಾರ್ಡ್ ಹೊರತರಲಾಗಿದೆ. ಕಾರ್ಡ್ ಹಿಂಭಾಗದಲ್ಲಿ ಕ್ಯೂಆರ್ ಕೋಡ್ ಇದ್ದು, ಅದನ್ನು ಸ್ಕ್ಯಾನ್ ಮಾಡುವ ಮೂಲಕ ಆ್ಯಪ್ ಡೌನ್ಲೋಡ್ ಆಗುತ್ತದೆ. ಆ್ಯಪ್‌ನಲ್ಲಿರುವ ಕಣ್ಣಿನ ಸಿಂಬಲ್ ಅನ್ನು ಸ್ಕ್ಯಾನ್ ಮಾಡಿದಾಗ ಮೈಸೂರು ವಿಶ್ವವಿದ್ಯಾನಿಲಯ, ಅರಮನೆ ಸೇರಿದಂತೆ ಮೈಸೂರಿನಲ್ಲಿರುವ ಪಾರಂಪರಿಕ ಕಟ್ಟಡಗಳ ವೀಕ್ಷಣೆಯೊಂದಿಗೆ ಅವುಗಳ ಬಗ್ಗೆ ಮಾಹಿತಿ ಪಡೆಯಬಹುದು. ಕಾರ್ಡ್‌ನ ಬೆಲೆ 10 ರೂ. ಆಗಿದ್ದು, ಪುರಾತತ್ವ ಇಲಾಖೆಯಲ್ಲಿ ಪಡೆಯಬಹುದಾಗಿದೆ.

ಕೆಎಸ್‌ಆರ್‌ಟಿಸಿಯಿಂದ ಮೈಸೂರು ದಸರೆಗೆ ಪ್ಯಾಕೇಜ್ ಟೂರ್



ಮೈಸೂರು, ಅ.6–ದಸರಾ ಮಹೋತ್ಸವದ ಅಂಗವಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ ಅ.3ರಿಂದ 15ರವರೆಗೆ ಪ್ರವಾಸಿಗರ ಅನುಕೂಲಕ್ಕಾಗಿ ಮೈಸೂರಿನ ಸುತ್ತಮುತ್ತಲಿನ ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಿಸಲು ಪ್ಯಾಕೇಜ್ ಟೂರ್ ವ್ಯವಸ್ಥೆ ಕಲ್ಪಿಸಲಾಗಿದೆ.

ಗಿರಿದರ್ಶಿನಿ: ಗಿರಿದರ್ಶಿನಿ ಪ್ಯಾಕೇಜ್ ಟೂರ್‌ನಲ್ಲಿ ಬಂಡೀಪುರ, ಗೋಪಾಲ ಸ್ವಾಮಿ ಬೆಟ್ಟ, ಬಿಳಿಗಿರಿರಂಗನಬೆಟ್ಟ, ನಂಜನ ಗೂಡು ಮತ್ತು ಚಾಮುಂಡಿಬೆಟ್ಟವನ್ನು ವೀಕ್ಷಿಸಬಹುದಾಗಿದ್ದು, ವಯಸ್ಕರಿಗೆ 400 ರೂ., ಮಕ್ಕಳಿಗೆ 250 ರೂ. ಪ್ರಯಾಣ ದರ ನಿಗದಿಪಡಿಸಲಾಗಿದೆ.

ಜಲದರ್ಶಿನಿ: ಜಲದರ್ಶಿನಿ ಪ್ಯಾಕೇಜ್ ಟೂರ್‌ನಲ್ಲಿ ಗೋಲ್ಡನ್ ಟೆಂಪಲ್, ದುಬಾರೆ, ನಿಸರ್ಗಧಾಮ, ಅಬ್ಬಿ ಜಲಪಾತ, ರಾಜಾ ಸೀಟ್, ಹಾರಂಗಿ ಜಲಾಶಯ ಹಾಗೂ ಕೆಆರ್‌ಎಸ್ ಅನ್ನು ವೀಕ್ಷಿಸಬಹುದಾ ಗಿದ್ದು, ವಯಸ್ಕರಿಗೆ 450 ರೂ. ಮತ್ತು ಮಕ್ಕಳಿಗೆ 300 ರೂ. ಪ್ರಯಾಣ ದರ ನಿಗದಿಪಡಿಸಲಾಗಿದೆ.


ದೇವದರ್ಶಿನಿ: ದೇವದರ್ಶಿನಿ ಪ್ಯಾಕೇಜ್ ಟೂರ್‌ನಲ್ಲಿ ನಂಜನಗೂಡು, ತಲಕಾಡು, ಬ್ಲಫ್, ಮುಡುಕುತೊರೆ, ಸೋಮನಾಥ ಪುರ, ಶ್ರೀರಂಗಪಟ್ಟಣ ಹಾಗೂ ಕೆಆರ್‌ಎಸ್ ಅನ್ನು ವೀಕ್ಷಿಸಬಹುದಾಗಿದ್ದು, ವಯಸ್ಕ ರಿಗೆ 300 ರೂ. ಮತ್ತು ಮಕ್ಕಳಿಗೆ 200 ರೂ. ಪ್ರಯಾಣ ದರ ನಿಗದಿಪಡಿಸಲಾಗಿದೆ. ಪ್ಯಾಕೇಜ್ ಟೂರ್‌ಗಳಿಗೆ ಪ್ರವಾಸಿಗರು ನಿಗಮದ ಮೈಸೂರು ಕೇಂದ್ರೀಯ ಬಸ್ ನಿಲ್ದಾಣ ಮತ್ತು ಕೆಎಸ್‌ಆರ್‌ಟಿಸಿ ಖಾಸಗಿ ಅವತಾರ್ ಬುಕಿಂಗ್ ಕೌಂಟರ್ ಮೂಲಕ ಮುಂಗಡ ಆಸನವನ್ನು ಕಾಯ್ದಿರಿಸಬಹುದಾಗಿರುತ್ತದೆ ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಷಟಲ್‌ಕಾಕ್ ದಸರಾ ಕಪ್



ಮೈಸೂರಿನ ಶ್ರೀರಾಂಪುರ ಗೆಳೆಯರ ಬಳಗ ಹಮ್ಮಿಕೊಂಡಿದ್ದ ಪುರುಷರ ಷಟಲ್ ಕಾಕ್ ದಸರಾ ಕಪ್ ಪಂದ್ಯಾವಳಿಯನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ಡಾ.ಬಿ.ಆರ್.ನಟರಾಜ ಜೋಯಿಸ್ ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದರು. ಬಂದಿ ನಿಂಗೇಗೌಡ, ಅರುಣ್ ಕುಮಾರ್ ಶೆಟ್ಟರ್, ರವಿಪ್ರಕಾಶ್, ಶ್ರೀಕಂಠ ಮೂರ್ತಿ ಗುರೂರು, ಎಸ್.ಎಂ.ಸುರೇಶ್, ಬಳಗದ ಸಂಚಾಲಕ ಪ್ರಸಾದ್ ಬಾಬು ಇದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

07.10.2024 ಸೋಮವಾರ, ಮಳೆ ನಕ್ಷತ್ರ: ಹಸ್ತ, 27.09.2024ರಿಂದ 09.10.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಶುಕ್ಲ ಪಕ್ಷ,
ತಿಥಿ: ಪಂಚಮಿ, ನಕ್ಷತ್ರ: ಅನುರಾಧ, ರಾಹುಕಾಲ : ಬೆಳಗ್ಗೆ 7.30ರಿಂದ 9ರವರೆಗೆ

■ **ಶ್ರೀ ಶ್ರೀ ಸುಬ್ಬರಾಯ ದಾಸರ ಪ್ರಸನ್ನ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ :** ನವರಾತ್ರಿ ಬ್ರಹ್ಮೋತ್ಸವ, ಪಂಚಮಿ, ಬೆಳಗ್ಗೆಯಿಂದ ಉತ್ಸವ, ಬೃಹತೀ ಸಹಸ್ರನಾಮ ಹೋಮ, ದುರ್ಗಾ ಪೂಜೆ, ದುರ್ಗಾ ಹೋಮ, ದುರ್ಗಾ ಪಾರಾಯಣ, ಸಂಜೆ ಶೇಷ ವಾಹನೋತ್ಸವ, ಮಹಾಮಂಗಳಾರತಿ, ಸ್ಥಳ: ದೇವಸ್ಥಾನ ಆವರಣ, ಕೃಷ್ಣ ವಿಲಾಸ ರಸ್ತೆ, ದೇವರಾಜ ಮೊಹಲ್ಲಾ.

■ **ಶ್ರೀ ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ಲಕ್ಷ್ಮೀವೆಂಕಟರಮಣ ಸ್ವಾಮಿಯ 50ನೇ ಬ್ರಹ್ಮೋತ್ಸವ, ಬೆಳಗ್ಗೆಯಿಂದ ಕಲಶಾರಾಧನೆ, ನಿತ್ಯ ಹೋಮ, ಬಲಿಪ್ರಧಾನ ಪ್ರಾಕಾರೋತ್ಸವ, ನಿವೇದನೆ, ಮಂಗಳಾರತಿ, ಶಾತ್ತುದೊಡ್ರು, ವೇದ ಪ್ರಬಂಧ ಪಾರಾಯಣ, ವಿಷ್ಣು ಸಹಸ್ರನಾಮ, ಸಂಜೆಯಿಂದ ಚಂದ್ರ ಮಂಡಲಾರೋಹಣ ವೈರಮುಡಿ ಉತ್ಸವ, ಮಂಗಳಾರತಿ, ಚತು: ಸ್ಥಾನಾರ್ಚನೆ, ತೀರ್ಥ ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ವಾಣಿವಿಲಾಸ ಮೊಹಲ್ಲಾ.

■ **ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ :** ಶ್ರೀ ಶಾರದಾಶರನ್ನವರಾತ್ರೋತ್ಸವ–2024, ಬೆಳಗ್ಗೆಯಿಂದ ಪಂಚಮಿ, ಶ್ರೀ ರಾಜರಾಜೇಶ್ವರಿ ಅಲಂಕಾರ, ಶ್ರೀ ಲಲಿತಾ ಹೋಮ, ಸ್ಥಳ: ಶಂಕರ ಮಠದ ಆವರಣ, ಫೋರ್ಟ್ ಮೊಹಲ್ಲಾ.

■ **ತ್ರಯೀನ್ಯಾಸ್ ಶ್ರೀ ವಿದ್ಯಾ ಫೌಂಡೇಷನ್ :** 28ನೇ ವರ್ಷದ ಶರನ್ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ರಿಂದ ಲಲಿತಾ ಪಂಚಮಿ ಪ್ರಯುಕ್ತ ಮಹಾಭಿಷೇಕ, ಶ್ರೀ ಸ್ಕಂದಮಾತಾ, ಶ್ರೀ ವಿದ್ಯಾ ಶಬರಿ ದುರ್ಗಾ ಪೂಜಾ, ಸಪ್ತಸತಿ ಪಾರಾಯಣ, ಲಲಿತೋತ್ಸವ ಪಾರಾಯಣ, ಶ್ರೀ ಚಕ್ರಾರ್ಚನೆ ಮತ್ತು ಶ್ರೀ ಸುಂದರಕಾಂಡ ಪಾರಾಯಣ, ಸಂಜೆ 5.30ರಿಂದ ಶ್ರೀ ಲಲಿತಾ ಮಹಾಯಾಗ ಮತ್ತು ಶ್ರೀ ದಶಮಹಾವಿದ್ಯಾ ಹೋಮ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮೀಪುರಂ.

■ **ಶ್ರೀ ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನ ಚಾರಿಟಬಲ್ ಟ್ರಸ್ಟ್ :** ಶರನ್ನವರಾತ್ರಿ ಉತ್ಸವ–2024, ಶ್ರೀ ದುರ್ಗಾ ಸೂಕ್ತ ಹೋಮ, ರಾಜರಾಜೇಶ್ವರಿ ಅಲಂಕಾರ, ಸುಮಂಗಲಿಯರಿಂದ ಕುಂಕುಮಾರ್ಚನೆ, ಸಪ್ತಸತಿ ಪಾರಾಯಣ, ಸ್ಥಳ: ದೇವಸ್ಥಾನದ ಪ್ರಾಂಗಣ, ವಾಣಿವಿಲಾಸ ಮೊಹಲ್ಲಾ, ಬೆಳಗ್ಗೆ 9 ಗಂಟೆಯಿಂದ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಗುದಗತ ರೋಗಗಳಾದ ಪೈಲ್ಸ್, ಮೂಲವ್ಯಾಧಿ, ಫಿಸ್ತುಲಾ, ಭಗಂಧರ, ನಾಡಿವ್ರಣ, ಫಿಶರ್ ತೊಂದರೆಗಳಿಗೆ ತಜ್ಞ ವೈದ್ಯರಿಂದ ಉಚಿತ ತಪಾಸಣೆ ಮತ್ತು ಸಲಹಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ ಸಂಜೆ 4.30ರವರೆಗೆ.

■ **ವ್ಯವಸ್ಥಾಪಕರು :** ಕೆ.ಎಸ್. ರಾಘವೇಂದ್ರ ಅವರಿಂದ ಪೇಪರ್ ಪಲ್ಸ್ ಉಪಯೋಗಿಸಿ ಕೈಯಿಂದ ಮಾಡಿದ ಬೊಂಬೆಗಳ ಮೂಲಕ ದಶಾವತಾರ ಒಳಗೊಂಡ ಶ್ರೀ ಬಾಲಕೃಷ್ಣ ಲೀಲೆ ಪ್ರಸಂಗಗಳ ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ವಿಜಯನಗರ 2ನೇ ಹಂತ, ಬೆಳಗ್ಗೆ 10 ಗಂಟೆಯಿಂದ.

■ **ವಿದ್ಯಾವರ್ಧಕ ಸಂಘ, ವಿದ್ಯಾವರ್ಧಕ ಕಾನೂನು ಕಾಲೇಜು :** ವಿಕಾಸ ಪರ್ವ–2024–25ನೇ ಸಾಲಿನ ಹೊಸ ವಿದ್ಯಾರ್ಥಿಗಳಿಗೆ ಮೂರು ದಿನಗಳ ಪುನಶ್ಚೇತನ ಕಾರ್ಯಕ್ರಮ, ಉದ್ಘಾಟನೆ: ಹಿರಿಯ ಸಿವಿಲ್ ನ್ಯಾಯಾಧೀಶರಾದ ದಿನೇಶ್ ಬಿ.ಜಿ., ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಸ್ಥಳ: ಪ್ರೊ. ಪಿ.ಎಂ. ಚಿಕ್ಕಬೋರಯ್ಯ ಹಾಲ್, ಕಾಲೇಜು ಆವರಣ, ಬೆಳಗ್ಗೆ 10 ಗಂಟೆಯಿಂದ.

■ **ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕೆ ಸೇವಾ ಟ್ರಸ್ಟ್ :** ಶರನ್ನವರಾತ್ರಿ ವೈಭವ–2024, ಪಂಚಮಿ, ಬೆಳಗ್ಗೆ 10 ಗಂಟೆಯಿಂದ ಶ್ರೀ ಲಲಿತಾ ಹೋಮ, ಸ್ಥಳ: ಶ್ರೀ ವೆಂಕಟಾರ್ಜುನ ಧ್ಯಾನ ಮಂದಿರ, ಹಾರೋಹಳ್ಳಿ ಗ್ರಾಮ, ಸಂಜೆ 6 ಗಂಟೆಗೆ ಲಲಿತಾ ಸಹಸ್ರನಾಮ, ಶ್ರೀಮತಿ ಅನಸೂಯ ಅವರಿಂದ ಸಂಗೀತ ಕಾರ್ಯಕ್ರಮ, ಸ್ಥಳ: ಗುರು ನಿವಾಸ, ಸೋನಾರ್ ಸ್ಟ್ರೀಟ್, ನಾರಾಯಣಶಾಸ್ತ್ರಿ ರಸ್ತೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಚಿನ್ಮಯ್ ಮಿಷನ್ :** ಶರನ್ನವರಾತ್ರಿ ಕಾರ್ಯಕ್ರಮ, ಶ್ರೀ ಮಾತಾ ಲಲಿತಾಂಬಿಕಾ ಪೂಜಾ (ತ್ರಿಶತಿ ಪೂರ್ವಕ), ಎಲ್ಲರಿಂದ ತ್ರಿಶತಿ ನಾಮಾವಳಿಯಿಂದ ಅರ್ಚನೆ, ಸ್ಥಳ: ಚಿನ್ಮಯಿ ಮಿಷನ್, ಶ್ರೀ ದತ್ತ ಸನ್ನಿಧಿ, ಗೋಕುಲಂ, ಬೆಳಗ್ಗೆ 10.30ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, ಪುಂಡಿಕೈ ಗಣಪಯ್ಯಭಟ್, 6.15–ದಸರಾ ಗೀತಾರಾಧನ, 6.30–ದಸರಾದಲ್ಲಿ ಇಂದು, ಪ್ರಸ್ತುತಿ: ಜಾಂಪಣ್ಣ ಆಶೀಹಾಳ್, 6.35–ಮತ್ತು ಸಂಜೆ 6.10: ಅಂಚೆ – ಅಂಕನ–ಆಕಾಶವಾಣಿ ಅಂಕಣ, ಪ್ರಸ್ತುತಿ: ಡಾ.ಅಮ್ಮಸಂದ್ರ ಸುರೇಶ ಹಾಗೂ ಎಂ.ಎನ್. ವಿಜಯಲಕ್ಷ್ಮಿ, ಪ್ರಾಯೋಜಕರು: ಭಾರತೀಯ ಅಂಚೆ, ಮೈಸೂರು ವಿಭಾಗ, 6.40–ರಾಜಮಾರ್ಗ–ಮೈಸೂರಿನ ಇತಿಹಾಸ ಪ್ರಸಿದ್ಧ ಮಾರ್ಗಗಳ ಪರಿಚಯ, ಪ್ರಸ್ತುತಿ: ಡಾ.ಮೈಸೂರು ಉಮೇಶ್, 6.50–ರೈತರಿಗೆ ಸಲಹೆ, 7.15–ವನ್ಯಜೀವಿ ಸಪ್ತಾಹದ ಅಂಗವಾಗಿ ಪರಿಸರದಲ್ಲಿ ಪಕ್ಷಿಗಳು ಈ ಕುರಿತು ಹಾಸನ ತಾಲೂಕುನಿಟ್ಟೂರಿನ ಜಿ.ಎಸ್.ಗಿಡ್ಡೇಗೌಡ ಅವರೊಂದಿಗೆ ಸಂದರ್ಶನ. ಸಂದರ್ಶಕರು: ವಿಜಯ ಅಂಗಡಿ, 7.45–ಶರಣ ಸಂಸ್ಕೃತಿ ಉತ್ಸವ, ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಶ್ರೀ ಜಗದ್ಗುರು ಮುರುಘ ರಾಜೇಂದ್ರ ಬೃಹನ್ಮಠ, ಚಿತ್ರದುರ್ಗ, 8.30–ಕನ್ನಡ ಚಿತ್ರಗೀತೆಗಳು, 9.05–ಚಾಮುಂಡಿ ಹಬ್ಬ, ದಸರಾ ಸಂಭ್ರಮ, ಜನಪದರ ನಾಲಿಗೆಯಲ್ಲಿ ಮೈಸೂರು ದೇವತೆ, ರಚನೆ–ಡಾ.ಪಿ.ಕೆ.ರಾಜಶೇಖರ್, ಪ್ರಸ್ತುತಿ: ಡಾ.ಮೈಸೂರು ಉಮೇಶ್, 10.00–ದಸರಾ ಪ್ರಯುಕ್ತ ಶ್ರೀ ಮುತ್ತುಸ್ವಾಮಿ ದೀಕ್ಷಿತರ ನವಾವರಣ ಕೃತಿಗಳನ್ನೊಳಗೊಂಡ ವಿಶೇಷ ಸಂಗೀತ ಸರಣಿ ನಮೋ ಜಗತ್ತಾರಿಣಿ, ನಿರ್ಮಾಣ –ಮೈಸೂರು. ಎಸ್.ರಾಜಲಕ್ಷ್ಮಿ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಗೇಮ್ ಶೋ, ಪ್ರಸ್ತುತಿ: ದಿಗ್ವಿಜಯ್ ಬಿ. ಮತ್ತು ಕೀರ್ತನಾ ವಿ., 12.05–ವನಿತಾ ವಿಹಾರ, 12.30–ದೇವರನಾಮ, ಎಂ.ಎ.ಶೋಭ, 12.45–ನಮ್ಮ ಆರೋಗ್ಯ: ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಸಂದರ್ಭದಲ್ಲಿ 'ಮಹಿಳೆಯರ ಮಾನಸಿಕ ಆರೋಗ್ಯ' ಕುರಿತು ಮೈಸೂರಿನ ಮನೋವೈದ್ಯರಾದ ಡಾ.ಸುಧಾ ರಾಣಿ. ಪಿ. ನಾಯಕ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 1.00–ಚಿತ್ರಗೀತೆಗಳು, 1.20–ಭಾವಗೀತೆಗಳು–ಅಮೃತಾ ನಿತಿನ್, 2.40–ಏಳುತಲೆ ನೆನೆದೇವು ? ದಸರಾ ಸಂದರ್ಭದಲ್ಲಿ ಜನಪದ ಶಕ್ತಿ ದೇವತೆಯನ್ನು ಕುರಿತ ವಿಶೇಷ ರೂಪಕ ಮಾಲಿಕೆ. ಪ್ರಸ್ತುತಿ: ಡಾ.ಮೈಸೂರು ಉಮೇಶ್, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಶಾಂತಿರಾವ್–ವೀಣಾವಾದನ, 4.00ಮಹಿಳಾರಂಗದಲ್ಲಿ ನವರಾತ್ರಿ ಸಂಭ್ರಮ, ಪ್ರಸ್ತುತಿ: ಸಹನ ಮತ್ತು ಕೀರ್ತನ, 4.45–ಹಿಂದಿ ಪಾಠ –ಅನುರಾಧಾಮೂರ್ತಿ, 6.50–ಕೃಷಿರಂಗ: ಕೋಸಿನ ಜಾತಿಯ ತರಕಾರಿ ಬೆಳೆಗಳ ಬೇಸಾಯ. ಈ ಕುರಿತು ನಂಜನಗೂಡು ತಾಲೂಕು ಸುತ್ತೂರಿನ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ.ಜಿ.ಎಂ.ವಿನಯ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45–ಆಕಾಶವಾಣಿ ಜಾತ್ರಾ ವಿಶೇಷ–ಬಾನುಲಿ ಮಾಲಿಕೆಯಲ್ಲಿ ಟಿ.ನರಸೀಪುರ ತಾಲೂಕು ತಲಕಾಡು ಹೋಬಳಿ ಮುಡುಕುತೊರೆ ಜಾತ್ರೆಯನ್ನು ಪರಿಚಯಿಸುತ್ತಾರೆ: ಡಾ.ಕೃಷ್ಣಮೂರ್ತಿ ಹನೂರು ಹಾಗೂ ಡಾ. ಮೈಸೂರು ಗುರುರಾಜ್, ಪ್ರಸ್ತುತಿ: ಅಬ್ದುಲ್ ರಶೀದ್, 8.30–ಅರಮನೆ ಸಂಗೀತ ವೈಭವ, ಸಂಗೀತ ರೂಪಕ, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಎಸ್.ಬಿ.ಕೇಶವಮೂರ್ತಿ–ಹಾಡುಗಾರಿಕೆ, 10.00–ನಾಟಕ–"ಮನೆ ಬೆಳಗಿದ ಮಗಳು", ರಚನೆ–ಡಾ.ಜಾನಕಿ ಸುಂದರೇಶ, ನಿರ್ಮಾಣ– ಪ್ರಭುಸ್ವಾಮಿ ಮಳೀಮಠ್, 10.30–ಸವಿನೆನಪು

■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ :** ದಸರಾ ಮಹೋತ್ಸವ–2024 ಅಂಗವಾಗಿ ಛಾಯಾಚಿತ್ರ ಪ್ರದರ್ಶನ, ಸ್ಥಳ: ಸುಚಿತ್ರ ಕಲಾ ಗ್ಯಾಲರಿ, ಕಲಾಮಂದಿರ, ಬೆಳಗ್ಗೆ 11.30ರಿಂದ.

■ **ಚಾರು ಸಾಂಸ್ಕೃತಿಕ ಪ್ರತಿಷ್ಠಾನ :** ದಸರಾ–2024 ಪ್ರಯುಕ್ತ ವಿಶೇಷ ಕಾರ್ಯಕ್ರಮ, ಅಭ್ಯಾಗತರು: ವಿದುಷಿ ಮಿತ್ರ ನವೀನ್, ನಿರ್ದೇಶಕರು, ನಾದ ವಿದ್ಯಾಲಯ ಅಕಾಡೆಮಿ ಆಫ್ ಮ್ಯೂಸಿಕ್ ಅಂಡ್ ಡ್ಯಾನ್ಸ್, ಗೀತ ಗಾಯನ–ಶ್ರೀಮತಿ ಅಪರ್ಣ ಶರ್ಮ, ಭರತನಾಟ್ಯ–ಶ್ರೇಯಾ, ಗಿಟಾರ್–ಮೇಘನ್, ಸ್ಥಳ: ಎಸ್‌ಬಿಎಂ ಮತ್ತು ಇತರ ಬ್ಯಾಂಕ್ ನೌಕರರ ಕ್ಷೇಮಾಭಿವೃದ್ಧಿ ಬಡಾವಣೆ, ವರ್ತುಲ ರಸ್ತೆ, ಸಂಜೆ 5 ಗಂಟೆಗೆ.

■ **ಹಿರಿಯ ನಾಗರಿಕರ ಮಂಡಳಿ:** ಮಾಸಿಕ ಉಪನ್ಯಾಸ, ಮನೋ ವಿಜ್ಞಾನದಿಂದ ಆರೋಗ್ಯ ಸುಧಾರಣೆ ಕುರಿತು ಡಾ.ರವೀಶ್ ಅವರಿಂದ ಉಪನ್ಯಾಸ, ಅಧ್ಯಕ್ಷತೆ: ಹಿರಿಯ ನಾಗರಿಕರ ಮಂಡಳಿ ಅಧ್ಯಕ್ಷ ಡಾ.ನಾಗರಾಜು, ಸ್ಥಳ: ಮಂಡಳಿಯ ಸರಸ್ವತಿ ಸಮುದಾಯ ಭವನ, ಜಯಲಕ್ಷ್ಮೀಪುರಂ, ಸಂಜೆ 5.30ಕ್ಕೆ

■ **ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ :** ನವರಾತ್ರಿ ಪೂಜಾ ಕಾರ್ಯಕ್ರಮ, ಭಜನೆ, ರವಿಕಾಂತಾನಂದಸ್ವಾಮಿ ಅವರಿಂದ ಪ್ರವಚನ, ಸ್ಥಳ: ದೇವಸ್ಥಾನದ ಆವರಣ, ಸಂಜೆ 5.30ರಿಂದ.

■ **ಕಲಾಂದಿಕ ಕಲಾ ಅಕಾಡೆಮಿ :** ವಿದುಷಿ ಜಾನಕಿ ಮುರಳಿ ಅವರಿಂದ ಭರತನಾಟ್ಯ, ಮುಖ್ಯ ಅತಿಥಿ: ಅಂತರರಾಷ್ಟ್ರೀಯ ಯೋಗಗುರು ಡಾ. ರಾಘವೇಂದ್ರ ಪೈ, ಗೌರವ ಅತಿಥಿ: ಮೈಸೂರಿನ ನೃತ್ಯಗಿರಿಯ ನಿರ್ದೇಶಕರಾದ ವಿದುಷಿ ಡಾ. ಕೃಪಾ ಪಡ್ಕೆ, ಸ್ಥಳ: ಕಲಾಂದಿಕ ಅಕಾಡೆಮಿ, ಸರಸ್ವತಿಪುರಂ, ಸಂಜೆ 6 ಗಂಟೆಗೆ.

■ **ಶ್ರೀ ಉತ್ತರಾದಿ ಮಠ ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ :** ಶರನ್ನವರಾತ್ರಿಯ ಪ್ರಯುಕ್ತ 'ಶ್ರೀನಿವಾಸ ಕಲ್ಯಾಣ' ಪ್ರವಚನ, ಪಂ. ಶ್ರೀ ಪ್ರಭಂಜನಾಚಾರ್ಯ ವಿದ್ಯಾಪತಿ ಅವರಿಂದ, ಸ್ಥಳ: ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಉತ್ತರಾದಿ ಮಠ, ಸಂಜೆ 5.30ಕ್ಕೆ.

■ **ರಂಗಾಯಣ, ಮೈಸೂರು :** ನವರಾತ್ರಿ ಅಂಗವಾಗಿ ರಂಗ ಉತ್ಸವ, ಕುಂದಾಪುರದ ಕೊಂಡದಕುಳಿಯ ಅಶ್ವಿನಿ ಕೊಂಡದಕುಳಿ ಮತ್ತು ತಂಡದಿಂದ ನರಕಾಸುರ ವಧೆ (ಯಕ್ಷಗಾನ), ಜನಪದ ರಂಗ ಉತ್ಸವದ ಸನ್ಮಾನಿತರು: ಕುಂದಾಪುರ, ಕೊಂಡದಕುಳಿಯ ಯಕ್ಷಗಾನ ಹಿರಿಯ ಕಲಾವಿದ ರಾಮಚಂದ್ರ ಗಣೇಶ ಹೆಗಡೆ, ಸ್ಥಳ: ರಂಗಾಯಣ ಆವರಣ, ಸಂಜೆ 6.30ಕ್ಕೆ

ಜೆ.ಕೆ.ಮೈದಾನದಲ್ಲಿ ಮುದ್ದು ಶ್ವಾನಗಳ ಕಲರವ









ಮೈಸೂರು, ಅ.6(ಎಂಟಿವೈ)- ಮೈಸೂರಿನ ಜೆ.ಕೆ.ಮೈದಾನದಲ್ಲಿ ಭಾನುವಾರ ಮುದ್ದು ಶ್ವಾನಗಳ ಉತ್ಸವವೇ ಜರುಗಿತು. ರಾಜ್ಯದ ವಿವಿಧೆಡೆಯಿಂದ ಶೃಂಗಾರಗೊಂಡು ಆಗಮಿಸಿದ್ದ ವಿವಿಧ ಬಗೆಯ ಶ್ವಾನಗಳು ತಮ್ಮ ವೈಯ್ಯಾರ ಪ್ರದರ್ಶಿಸಿ ಸಭಿಕರ ಮನಸೂರೆಗೊಂಡವು.

ನಾಡಹಬ್ಬ ದಸರಾ ಮಹೋತ್ಸವದ ಅಂಗವಾಗಿ ರೈತ ದಸರಾ ಉಪಸಮಿತಿ, ಪಶುಸಂಗೋಪನ ಇಲಾಖೆ ಸಂಯುಕ್ತಾಶ್ರಯದಲ್ಲಿ ಇಂದು ಜೆ.ಕೆ.ಮೈದಾನದಲ್ಲಿ ಆಯೋಜಿಸಿದ್ದ ಶ್ವಾನ ಹಾಗೂ ಸಾಕು ಪ್ರಾಣಿಗಳ ಪ್ರದರ್ಶನದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಶ್ವಾನಪ್ರಿಯರು ಕರೆತಂದಿದ್ದ ಶ್ವಾನಗಳು ಗಮನ ಸೆಳೆದವು. ಕಳೆದ 2-3 ದಿನದಿಂದ ಸುರಿದ ಮಳೆಯಿಂದಾಗಿ ಜೆ.ಕೆ.ಮೈದಾನ ಕೆಸರು ಗದ್ದೆಯಂತಾಗಿದ್ದರೂ, ಶ್ವಾನ ಪ್ರದರ್ಶನಕ್ಕೆ ನಿರೀಕ್ಷೆಗೂ ಮೀರಿದ ಜನ ಆಗಮಿಸಿದ್ದು ವಿಶೇಷ. ಬಹುತೇಕ ಜಿಲ್ಲೆಗಳಿಂದ ಐಷಾರಾಮಿ ವಾಹನಗಳಲ್ಲಿ ಕರೆತಂದಿದ್ದ ಶ್ವಾನಗಳು ತಮ್ಮ ಬುದ್ಧಿವಂತಿಕೆಯಿಂದ ನೋಡುಗರ ಕಣ್ಮನ ಸೆಳೆದವು.

ದಸರಾ ಅಂಗವಾಗಿ ನಡೆಸುವ ಶ್ವಾನ ಪ್ರದರ್ಶನಕ್ಕೆ ಪಶುಸಂಗೋಪನೆ ಇಲಾಖೆಯಿಂದ ಕಳೆದ ಒಂದೂವರೆ ತಿಂಗಳಿಂದ ಪ್ರಚಾರ ನೀಡಿದ್ದರಿಂದ ಮೈಸೂರು ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಿಂದ 45ಕ್ಕೂ ಹೆಚ್ಚು ತಳಿಯ 600ಕ್ಕೂ ಹೆಚ್ಚು ಶ್ವಾನಗಳು ಇಂದು ನಡೆದ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದವು. ನಾಲ್ಕು ಸರ್ಕಲ್‌ನಲ್ಲಿ ವಿವಿಧ ವಿಭಾಗಗಳಲ್ಲಿ ನಡೆದ ಶ್ವಾನ ಪ್ರದರ್ಶನದಲ್ಲಿ ಶ್ವಾನಗಳನ್ನು ವಿವಿಧ



ಆಯಾಮಗಳಲ್ಲಿ ತೀರ್ಪುಗಾರರು ಪರಿಶೀಲಿಸಿ ಫಲಿತಾಂಶ ಘೋಷಿಸುತ್ತಿದ್ದರು. ಪರೀಕ್ಷೆಯಲ್ಲಿ ಶ್ವಾನಗಳ ನಡಿಗೆ, ಕೂದಲು, ಪಾಲಕರ ಆಜ್ಞೆ ಪಾಲಿಸುವಿಕೆ, ಆರೋಗ್ಯ, ದೈಹಿಕ ಸಾಮರ್ಥ್ಯ ಸೇರಿದಂತೆ ವಿವಿಧ ಪರೀಕ್ಷೆ ನಡೆಸಿ ಉತ್ತಮ ಶ್ವಾನಗಳನ್ನು ಆಯ್ಕೆ ಮಾಡಲಾಯಿತು. ಶ್ವಾನ ಪ್ರದರ್ಶನದಲ್ಲಿ ನಾಲ್ಕು ವಿಭಾಗಗಳಲ್ಲಿ ಪ್ರದರ್ಶನ ಏರ್ಪಡಿಸಲಾಗಿತ್ತು. ಇಷ್ಟೂ ವಿಭಾಗಗಳಲ್ಲಿ ಪ್ರಥಮ ಸ್ಥಾನ ಪಡೆದ ಶ್ವಾನಗಳಿಗೆ ಮತ್ತೊಮ್ಮೆ ಪ್ರದರ್ಶನಕ್ಕೆ ಅವಕಾಶ ನೀಡಿ ನಾಲ್ಕೂ ವಿಭಾಗಗಳಲ್ಲಿಯೂ ಚಾಂಪಿಯನ್ ಆಫ್ ದಿ ಚಾಂಪಿಯನ್ ಪ್ರಶಸ್ತಿ ನೀಡಿ ಪ್ರೋತ್ಸಾಹಿಸಲಾಯಿತು.

ಪ್ರದರ್ಶನದಲ್ಲಿ ಪಾಲ್ಗೊಂಡ ತಳಿಗಳು: ಮಾಲ್ಟೀಸ್, ಜರ್ಮನ್ ಶೆಫರ್ಡ್, ಲಾಸಾ ಅಪ್ಸೊ, ಟಿಬೇಟಿಯನ್ ಮಸ್ಟಿಫ್, ಇಂಡಿಯನ್ ಮಸ್ಟಿಫ್, ಡಾಬರ್‌ಮನ್, ಮುದೋಳ್ ಹೌಂಡ್, ಸೈಬೇರಿಯನ್ ಹಸ್ಕಿ, ಮಿನಿಯೇಚರ್ ಪಿಂಚರ್, ಐರಿಶ್ ಸೆಟ್ಟರ್, ಅಕಿಟ, ಲ್ಯಾಬ್ರಡಾರ್, ಚಿಚುಹಾ, ಪೂಡಲ್, ಡೊಗೊ ಅರ್ಜೆಂಟಿನ, ಬಿಕೊನ್, ಗ್ರೇಟ್ ಡೇನ್, ಪಮೊರಿಯನ್, ರಾಜಾಪಾಳ್ಯನ್, ಡಾಲ್ಮೇಶನ್, ಕೇನ್ ಕೋರ್ಸೋ, ಪಿಟ್ ಬುಲ್, ಶಿಟ್ಜು, ಪ್ರೆಂಚ್ ಬುಲ್ ಡಾಗ್, ಚೌ ಚೌ, ಪಗ್, ಜಾಕ್ ರುಸೆಲ್, ಟಿಬೇಟಿಯನ್ ಸ್ಪಾನಿಯಲ್, ಡ್ಯಾಶ್‌ಹೌಂಡ್, ಯಾರ್ಕ್‌ಸಿರ್‌ಟೆರರ್, ಕ್ಯಾಟ್, ರಾಟ್ ವೆಲ್ಲರ್, ಸೇಂಟ್ ಬರ್ನಾಡ್, ರೊಡೆಷಿಯನ್ ರಿಡ್ಜ್‌ಬ್ಯಾಕ್, ನೆಪೋಲಿಯನ್ ಮಸ್ಟಿಫ್, ಬೆಲ್ಜಿಯನ್ ಶೆಫರ್ಡ್ ಶ್ವಾನಗಳು ಪ್ರತ್ಯೇಕ ವಿಭಾಗಗಳಲ್ಲಿ ಪ್ರದರ್ಶನ ನೀಡಿದವು. ಇದರೊಂದಿಗೆ ಕೆಲ ವಿದೇಶಿ ತಳಿಗಳ ಬೆಕ್ಕುಗಳು, ವಿವಿಧ ಪಕ್ಷಿಗಳನ್ನು ಪಾಲಕರು ತಂದು ಸಂಭ್ರಮಿಸಿದರು.

> ದಸರಾ ಮಹೋತ್ಸವ ಅಂಗವಾಗಿ ರೈತ ದಸರಾ ಉಪಸಮಿತಿಯ ವತಿಯಿಂದ ಆಯೋಜಿಸಿರುವ ಶ್ವಾನ ಹಾಗೂ ಮುದ್ದು ಪ್ರಾಣಿಗಳ ಪ್ರದರ್ಶನಕ್ಕೆ ನಿರೀಕ್ಷೆಗೂ ಮೀರಿದ ಬೆಂಬಲ ದೊರೆತಿದೆ. ರಾಜ್ಯದ ವಿವಿಧ ಜಿಲ್ಲೆಗಳಿಂದ ಶ್ವಾನಪ್ರಿಯರು ತಾವು ಸಾಕಿರುವ ಶ್ವಾನ ಹಾಗೂ ಬೆಕ್ಕುಗಳನ್ನು ತಂದು ಪ್ರದರ್ಶಿಸಿದ್ದಾರೆ. ಶ್ವಾನಗಳಿಗೆ ಬೇಕಾದ ಸೌಲಭ್ಯವನ್ನು ಒದಗಿಸಲಾಗಿದೆ. ಅಲ್ಲದೆ, ಉತ್ತಮ ಪ್ರದರ್ಶನ ನೀಡಿದ ಶ್ವಾನಗಳಿಗೆ ಬಹುಮಾನ ವಿತರಿಸಲಾಗಿದೆ. ಆಯ್ಕೆ ಮಾಡಲು ನುರಿತ ಹಾಗೂ ಪರಿಣತರನ್ನೇ ತೀರ್ಪುಗಾರರಾಗಿ ನಿಯೋಜಿಸಲಾಗಿತ್ತು.
> - ಡಾ.ನಾಗರಾಜ್, ಪಶುಪಾಲನಾ ಇಲಾಖೆ ಉಪ ನಿರ್ದೇಶಕ

ಶ್ವಾನ ನೋಡಲು ಜನ ಜಾತ್ರೆ: ಒಂದೆಡೆ ಶ್ವಾನ ಹಾಗೂ ಸಾಕುಪ್ರಾಣಿಗಳ ಪಾಲಕರು ಜೆ.ಕೆ.ಮೈದಾನಕ್ಕೆ ಬಂದಿದ್ದರೆ, ವಾರಾಂತ್ಯ ರಜೆ ಹಿನ್ನೆಲೆಯಲ್ಲಿ ಮುದ್ದಿನ ಶ್ವಾನ ಕಣ್ತುಂಬಿಕೊಳ್ಳಲು ಅಪಾರ ಸಂಖ್ಯೆಯ ಜನರು ಜೆ.ಕೆ.ಮೈದಾನಕ್ಕೆ ಆಗಮಿಸಿದ್ದರು. ಬೆಳಗ್ಗೆ 11 ಗಂಟೆ ವೇಳೆಗೆ ಜೆ.ಕೆ.ಮೈದಾನದಲ್ಲಿ ಜನ ಜಂಗುಳಿ ಹಾಗೂ ವಾಹನಗಳ ಸಂಖ್ಯೆ ಹೆಚ್ಚಾದ ಹಿನ್ನೆಲೆಯಲ್ಲಿ ಪೊಲೀಸರು 11 ಗಂಟೆ ವೇಳೆಗೆ ಜೆ.ಕೆ.ಮೈದಾನದ ಗೇಟ್ ಮುಚ್ಚಿ, ಯಾವುದೇ ವಾಹನ ಮೈದಾನ ಪ್ರವೇಶಿಸದಂತೆ ನಿರ್ಬಂಧ ಹೇರಿದರು. ಆದರೆ, ಕಾಲ್ನಡಿಗೆಯಲ್ಲಿ ಬಂದವರಿಗೆ ಮಾತ್ರ ಪ್ರವೇಶಾವಕಾಶ ಕಲ್ಪಿಸಿದರು. ಸಂಜೆವರೆಗೂ ಶ್ವಾನಗಳನ್ನು ನೋಡಲು ಬಂದವರ ಸಂಖ್ಯೆ ಹೆಚ್ಚಾಗಿತ್ತು.

ಈ ಸಂದರ್ಭದಲ್ಲಿ ರೈತ ದಸರಾ ಉಪಸಮಿತಿಯ ಉಪ ವಿಶೇಷಾಧಿಕಾರಿ ಡಾ.ಎಂ.ಕೃಷ್ಣರಾಜು, ಕಾರ್ಯಾಧ್ಯಕ್ಷ ಕೆ.ಹೆಚ್.ರವಿ, ಸಹಕಾರ್ಯದರ್ಶಿ ಡಾ.ನಾಗರಾಜು ಸೇರಿದಂತೆ ರೈತ ದಸರಾ ಉಪ ಸಮಿತಿಯ ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು.

ಪೋಷಕರು ಮಕ್ಕಳಲ್ಲಿ ಪ್ರಾಣಿ ಪ್ರೀತಿ ಮೂಡಿಸಬೇಕು

ರಾಜ್ಯಸಭಾ ಸದಸ್ಯೆ ಡಾ. ಸುಧಾಮೂರ್ತಿ




ಮೈಸೂರಿನ ಜೆ.ಕೆ.ಮೈದಾನದಲ್ಲಿ ಭಾನುವಾರ ನಡೆದ ಶ್ವಾನ ಪ್ರದರ್ಶನದಲ್ಲಿ ರಾಜ್ಯಸಭಾ ಸದಸ್ಯರು ಹಾಗೂ ಇನ್ಫೋಸಿಸ್ ಫೌಂಡೇಷನ್ ಮುಖ್ಯಸ್ಥರಾದ ಡಾ.ಸುಧಾಮೂರ್ತಿ ಅವರು ತಮ್ಮ ಪ್ರೀತಿಯ ಗೋಪಿ ಶ್ವಾನದೊಂದಿಗೆ ಪಾಲ್ಗೊಂಡರು.

ಮೈಸೂರು, ಅ.6(ಎಂಟಿವೈ)- ಪೋಷಕರು ತಮ್ಮ ಮಕ್ಕಳಲ್ಲಿ ಪ್ರಾಣಿ ಪ್ರೀತಿ ಮೂಡಿಸಲು ಮುಂದಾಗಬೇಕು ಎಂದು ರಾಜ್ಯಸಭಾ ಸದಸ್ಯೆ, ಇನ್ಫೋಸಿಸ್ ಫೌಂಡೇಷನ್ ಮುಖ್ಯಸ್ಥೆ ಡಾ. ಸುಧಾಮೂರ್ತಿ ಸಲಹೆ ನಿಡಿದ್ದಾರೆ.

ಮೈಸೂರಿನ ಜೆ.ಕೆ.ಮೈದಾನದಲ್ಲಿ ರೈತ ದಸರಾ ಉಪಸಮಿತಿ ಆಯೋಜಿಸಿದ್ದ ಶ್ವಾನ ಪ್ರದರ್ಶನಕ್ಕೆ ತಮ್ಮ ಮುದ್ದಿನ ಶ್ವಾನ ಗೋಪಿಯೊಂದಿಗೆ ಆಗಮಿಸಿದ ಅವರು, ಗೋಲ್ಡನ್ ರಿಟ್ರಿವರ್ ವಿಭಾಗದಲ್ಲಿ ತಮ್ಮ ಶ್ವಾನ ಗೋಪಿಯನ್ನು ಸ್ಪರ್ಧೆಯಲ್ಲಿ ಕರೆತಂದು ಗಮನ ಸೆಳೆದರು. ಅಲ್ಲದೆ ಶ್ವಾನ ಪರೀಕ್ಷೆಗಾಗಿ ಸರ್ಕಲ್‌ನಲ್ಲಿ ತಾವೇ ಗೋಪಿಯನ್ನು ಸುತ್ತಿಸಿದರು. ಈ ವೇಳೆ ಗೋಪಿಗೆ ವಿವಿಧ ಸಂಜ್ಞೆ ಮೂಲಕ ಕೆಲ ಆದೇಶಿಸುವ ಮೂಲಕ ತಮ್ಮ ಹಾಗೂ ಶ್ವಾನ ಗೋಪಿ ನಡುವಿನ ಬಾಂಧವ್ಯವನ್ನು ಅನಾವರಣಗೊಳಿಸಿದರು.

ಇದೆ ವೇಳೆ ಡಾ.ಸುಧಾಮೂರ್ತಿ ಮಾತನಾಡಿ, ಜಗತ್ತಿನಲ್ಲಿ ತಾಯಿ ಮತ್ತು ನಾಯಿಗೆ ಮಹತ್ವದ ಸ್ಥಾನವಿದೆ. ನಿಯತ್ತಿನ ಪ್ರಾಣಿಯಾಗಿರುವ ನಾಯಿಯನ್ನು ಎಲ್ಲರೂ ಸಾಕಬೇಕು. ಸಾಕಲು ಆಗದೇ ಇದ್ದರೆ, ಅನಾಥ ಶ್ವಾನಗಳನ್ನು ಪಾಲನೆ ಮಾಡುತ್ತಿರುವ ಶೆಲ್ಟರ್‌ಗಳಿಗೆ ಹೋಗಿ ಅವುಗಳಿಗೆ ನೆರವು ನೀಡುವ ಪದ್ಧತಿಯನ್ನು ಅನುಸರಿಸಬೇಕು. ಬೀದಿ ನಾಯಿಗಳಿಗೆ ಊಟ ಹಾಕಲು ಮುಂದಾಗಬೇಕು ಎಂದು ಸಲಹೆ ನೀಡಿದರು.


ನಾನು ನನ್ನ ಶ್ವಾನ ಗೋಪಿಯೊಂದಿಗಿನ ಸಂಬಂಧದ ಬಗ್ಗೆ ನಾಲ್ಕು ಪುಸ್ತಕ ಬರೆದಿದ್ದೇನೆ. ಅದು ಹಲವು ಭಾಷೆಯಲ್ಲಿ ತರ್ಜುಮೆಗೊಂಡಿದೆ. ಅದರಿಂದ ಬರುತ್ತಿರುವ ರಾಯಲ್ಟಿಯಲ್ಲಿ ಗೋಪಿಗೆ ಒಂದು ಭಾಗ ನೀಡಿದ್ದು, ಅದು ಆ ಹಣದಲ್ಲಿ ತಿಂಗಳಿಂದ ನಾಲ್ಕು ಕ್ವಿಂಟಾಲ್ ಅಕ್ಕಿಯಿಂದ ಆಹಾರ ತಯಾರಿಸಿ ಬೀದಿ ನಾಯಿಗಳಿಗೆ ಊಣ ಬಡಿಸುತ್ತಿದ್ದಾನೆ. ಗೋಪಿ ನನಗಿಂತಲೂ ದೊಡ್ಡಮಟ್ಟದಲ್ಲಿ ಸೇವೆ ಮಾಡುತ್ತಿದ್ದಾನೆ ಎಂದು ಗುಣಗಾನ ಮಾಡಿದ ಅವರು, ತಮ್ಮ ಮಕ್ಕಳಿಗೆ ಪ್ರಾಣಿ ಪ್ರೀತಿ ಬೆಳಸಬೇಕು. ಇದರಿಂದ ಮುಂದಿನ ದಿನಗಳಲ್ಲಿ ಪರಿಸರ ಸಂರಕ್ಷಣೆಗೆ ನೆರವಾಗುತ್ತದೆ ಎಂದು ಅಭಿಪ್ರಾಯಪಟ್ಟರು.











ಆಹಾರ ಮೇಳಕ್ಕೆ ಬರುವ ಅರ್ಧದಷ್ಟು ಗ್ರಾಹಕರು ಪುಸ್ತಕ ಮೇಳಕ್ಕೆ ಬಂದು ಜ್ಞಾನ ಹೆಚ್ಚಿಸಿಕೊಳ್ಳಬೇಕು

ಹಿರಿಯ ಸಾಹಿತಿ ರಹಮತ್ ತರೀಕೆರೆ ಸಲಹೆ



ದಸರಾ ಪುಸ್ತಕ ಮೇಳ ರಿಯಾಯಿತಿ ಮಾರಾಟ ಮೇಳದಲ್ಲಿ ಹಿರಿಯ ಸಾಹಿತಿ ರಹಮತ್ ತರೀಕೆರೆ ವಿವಿಧ ಮಳಿಗೆಗಳಿಗೆ ಭೇಟಿ ನೀಡಿದರು

ಮೈಸೂರು, ಅ.6(ಎಸ್‌ಪಿಎನ್)- ದಸರಾ ಆಹಾರ ಮೇಳಕ್ಕೆ ಬರುವ ಅರ್ಧದಷ್ಟು ಗ್ರಾಹಕರು, ಪುಸ್ತಕ ಮೇಳಕ್ಕೂ ಆಗಮಿಸಿ, ತಮ್ಮ ಜ್ಞಾನದ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕು ಎಂದು ಹಿರಿಯ ಸಾಹಿತಿ ಡಾ.ರಹಮತ್ ತರೀಕೆರೆ ಸಲಹೆ ನೀಡಿದರು.

ಮೈಸೂರು ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ದಸರಾ ಪುಸ್ತಕ ಮೇಳ ಉಪಸಮಿತಿ, ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಸಹಯೋಗದೊಂದಿಗೆ ಆಯೋಜಿಸಿದ್ದ ದಸರಾ ಪುಸ್ತಕ ಮೇಳ ರಿಯಾಯಿತಿ ಮಾರಾಟ ಮೇಳಕ್ಕೆ ಆಗಮಿಸಿ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.

ದಸರಾ ಆಹಾರ ಮೇಳಕ್ಕೆ ತಂಡೋಪತಂಡವಾಗಿ ಗ್ರಾಹಕರು ಬಂದು ರುಚಿರುಚಿ ತಿನಿಸುಗಳನ್ನು ತಿಂದು ಹೊಟ್ಟೆ ತುಂಬಿಸಿಕೊಳ್ಳುತ್ತಾರೆ. ಅದರಂತೆ ಅಲ್ಲಿಗೆ ಬರುವ ಅರ್ಧದಷ್ಟು ಜನರು ಈ ಪುಸ್ತಕ ಮೇಳಕ್ಕೆ ಬಂದು ಬಗೆಬಗೆಯ ಪುಸ್ತಕಗಳನ್ನು ಖರೀದಿಸಿ ತಮ್ಮ ಬೌದ್ಧಿಕ ಮಟ್ಟವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸಬೇಕು ಎಂದು ಹೇಳಿದರು.

ಸಾಹಿತ್ಯ ಸಮ್ಮೇಳನಕ್ಕೆ ಆಗಮಿಸುವ ಆಸಕ್ತರು ಬಗೆಬಗೆಯ ಪುಸ್ತಕಗಳನ್ನು ಕೊಳ್ಳಲು ಆಸಕ್ತಿ ತೋರುತ್ತಾರೆ. ಆದರೆ, ದಸರಾ ವೀಕ್ಷಣೆಗೆ ಬರುವ ಗ್ರಾಹಕರು, ಈ ಪುಸ್ತಕ ಮೇಳಕ್ಕೆ ಬರಲು ನಿರಾಸಕ್ತಿ ತೋರುತ್ತಿರುವುದು ಬೇಸರ ಸಂಗತಿ ಎಂದ ಅವರು, ಶಾಸ್ತ್ರೀಯ ರಂಗಭೂಮಿ ಪ್ರದರ್ಶನ ಕಣ್ಮರೆಯಾಗುತ್ತಿದೆ. ಇದನ್ನು ಕಲಿಯಲು ಇಂದಿನ ಯುವ ಪೀಳಿಗೆ ಮುಂದಾಗುತ್ತಿಲ್ಲ. ಇದು ನಶಿಸುವ ಹಂತದಲ್ಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

60ಕ್ಕೂ ಹೆಚ್ಚು ಮಳಿಗೆಗಳು: ಕನ್ನಡ ಪುಸ್ತಕ ಪ್ರಾಧಿಕಾರ, ಮೈಸೂರು ವಿವಿ ಪ್ರಸಾರಾಂಗ, ಬೆಂಗಳೂರಿನ ವೇದ ಬುಕ್ ಹೌಸ್, ಮೈಸೂರಿನ ಸಂವಹನ, ಕರ್ನಾಟಕ ರಾಜ್ಯ ನಾಟಕ, ನೃತ್ಯ, ಸಂಗೀತ, ಯಕ್ಷಗಾನ, ಜಾನಪದ ಅಕಾಡೆಮಿ ಪುಸ್ತಕ ಮಳಿಗೆ, ಸಾಗರಿ ಪ್ರಕಾಶನ, ಜನನಿ ಪಬ್ಲಿಕೇಷನ್, ಸಪ್ನ ಬುಕ್ ಹೌಸ್, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಕರ್ನಾಟಕ ರಾಜ್ಯ ತುಳು, ಲಲಿತಕಲಾ, ಶಿಲ್ಪಕಲಾ ಅಕಾಡೆಮಿ ಪುಸ್ತಕ ಮಾರಾಟ ಮಳಿಗೆ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್, ಅಭಿನವ ಬುಕ್ ಹೌಸ್, ಅಭಿರುಚಿ, ಕರ್ನಾಟಕ ರಾಜ್ಯ ಜಾನಪದ ವಿವಿ ಪ್ರಸಾರಂಗ, ಕದಂಬ ಪ್ರಕಾಶನ, ಭಾರತೀ ಪ್ರಕಾಶನ, ಕೇಂದ್ರ ಸಾಹಿತ್ಯ ಅಕಾಡೆಮಿ, ಕನ್ನಡ ವಿವಿ ಪ್ರಸಾರಂಗ, ಶ್ರೀರಂಗಪಟ್ಟಣದ ಗೋಸಾಯಿ ಪಬ್ಲಿಕೇಷನ್, ವೀರಲೋಕ ಬುಕ್ಸ್ ಹೌಸ್, ಗಾಯಿತ್ರಿ ಪ್ರಕಾಶನ, ಮಂಗಳೂರಿನ ಆರ್ಯಸಮಾಜ ನೆರಳಕಟ್ಟೆ, ಸ್ನೇಹ ಬುಕ್ ಹೌಸ್, ಅನುಪಮಾ ಪ್ರಕಾಶನ, ಮೈಸೂರಿನ ಚಿಂತನ ಚಿತ್ತಾರ ಪ್ರಕಾಶನ, ಕರ್ನಾಟಕ ರಾಜ್ಯ ಮುಕ್ತ ವಿವಿ ಪ್ರಸಾರಂಗ, ಜೆಎಸ್‌ಎಸ್ ಗ್ರಂಥಮಾಲೆ, ಬೆಂಗಳೂರಿನ ಶ್ರೀ ಕನ್ಯಕ ಭಂಡಾರ, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ಸಾಧನ ಪ್ರಕಾಶನ, ಧಾತ್ರಿ ಪ್ರಕಾಶನ, ಯುನಿಕ್ ಪಬ್ಲಿಕೇಷನ್, ಸಂಸ್ಕೃತಿ ಬುಕ್ಸ್ ಏಜೆನ್ಸಿಸ್, ಸೋನಲ್ ಪಬ್ಲಿಕೇಷನ್, ಆರ್ಯಸಮಾಜ, ಬುಕ್ಸ್‌ಲೋಕ, ನಿಸರ್ಗ ಪ್ರಕಾಶನ, ರೂಪ ಪ್ರಕಾಶನ, ಕನ್ನಡ ಜ್ಯೋತಿ, ವಿಜಯವಾಹಿನಿ ಪಬ್ಲಿಕೇಷನ್, ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ ಮತ್ತು ಶಿಶಿರ ಪ್ರಕಾಶನ, ಕನ್ಯಾಕುಮಾರಿ ಶಾಖೆಯ ವಿವೇಕಾನಂದ ಕೇಂದ್ರ, ಚೇತನ ಬುಕ್ ಹೌಸ್, ನವಕರ್ನಾಟಕ ಪ್ರಬ್ಲಿಕೇಷನ್, ಅಖೀಲಾ ಏಜೆನ್ಸಿಸ್, ಜಯರಾಮ ಪ್ರಕಾಶನ, ಸಾಹಿತ್ಯ ಸ್ತಂಬ ಬುಕ್ ಹೌಸ್, ಸೃಷ್ಟಿ ಪಬ್ಲಿಕೇಷನ್ ಅಭಿನಂದನ ಪ್ರಕಾಶನ, ಮನಸೇ ಪಬ್ಲಿಕೇಷನ್ ದಸರಾ ಮಹೋತ್ಸವದ 60ಕ್ಕೂ ಹೆಚ್ಚು ಪ್ರಕಾಶನ, 10ಕ್ಕೂ ಹೆಚ್ಚು ವಿವಿಧ ಪ್ರಾಧಿಕಾರದ ಮಳಿಗೆಗಳಲ್ಲಿ ಎಲ್ಲಾ ಮನೋಮಾನವದವರನ್ನು ಸೆಳೆಯಬಲ್ಲ ಪುಸ್ತಕಗಳು ಪ್ರದರ್ಶನಗೊಂಡಿವೆ.

ಈ ವೇಳೆ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಜಿಲ್ಲಾಧ್ಯಕ್ಷ ಎಂ.ಚಂದ್ರಶೇಖರ್, ಚಿಂತನ ಚಿತ್ತಾರ ಪ್ರಕಾಶನದ ನಿಂಗರಾಜು ಚಿತ್ತಣ್ಣವರ್ ಸೇರಿದಂತೆ ಇತರರಿದ್ದರು. 'ಸೆಲ್ಫಿ ವಿತ್ ಸಾಹಿತಿ' ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ದೇವು ಪತ್ತಾರ್ ಪಾಲ್ಗೊಂಡಿದ್ದರು.

ತಾಲೀಮು ಮುಗಿಸಿ ವಾಪಸ್ಸಾಗುತ್ತಿರುವ ಗಜಪಡೆ



ಭಾನುವಾರ ಬೆಳಗ್ಗೆ ತಾಲೀಮು ಪೂರ್ಣಗೊಳಿಸಿ ಜನಸ್ತೋಮದ ನಡುವೆ ಅರಮನೆಗೆ ವಾಪಸ್ಸಾಗುತ್ತಿರುವ ಗಜಪಡೆ.

ನಕ್ಕರೆ ಅದೇ ಸ್ವರ್ಗ

ಟೀಚರ್ : ಭೂಮಿಗೆ ಮೊದಲು ಸನ್ ಬರುತ್ತಾ, ಮೂನ್ ಬರುತ್ತಾ?
ಗುಂಡ : ಮೊದಲು ಮೂನ್ ಬರುತ್ತೆ...
ಟೀಚರ್: ಅದು ಹೇಗೆ?
ಗುಂಡ: ಹನಿಮೂನ್ ಆದ ಮೇಲೆ ತಾನೇ ಭೂಮಿಗೆ ಸನ್ ಬರುವುದು!

ಮೈಸೂರು ಮಿತ್ರ

ಸೋಮವಾರ, 7 ಅಕ್ಟೋಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

'ಪ್ರಾಮಾಣಿಕತೆಯ ಮಾರ್ಗದಲ್ಲಿ ನಡೆಯಿರಿ, ಅಲ್ಲಿ ಟ್ರಾಫಿಕ್ ಕಿರಿಕಿರಿಯಾಗುವಷ್ಟು ಜನ ಓಡಾಡುವುದೇ ಇಲ್ಲ...'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಂಕೆ ಇಲ್ಲದ ಚತುರೆ, ಲಗಾಮು ಇಲ್ಲದ ಕುದುರೆ...

ನಿಮ್ಮ ಪತ್ರಗಳು

■ ಪ್ರವಾಸಿಗರಿಗೆ ಹೇಳುವವರು ಕೇಳುವವರ್‍ಯಾರಿಲ್ಲವೇ...?

ಮಾನ್ಯರೆ,

"ಅತಿಥಿ ದೇವೋಭವ" ಎಂಬ ಧ್ಯೇಯವಾಕ್ಯ ನಮ್ಮ ಭಾರತೀಯ ಸಂಸ್ಕೃತಿಯಾಗಿದೆ. ಅಂತೆಯೇ ನಾಡಹಬ್ಬ ದಸರಾ ಆರಂಭವಾಗಿದ್ದು, ರಾಜ್ಯ ಮತ್ತು ಬೇರೆ ಬೇರೆ ದೇಶಗಳಿಂದ ಪ್ರವಾಸಿಗರು ನಮ್ಮ ನಗರದ ಸೌಂದರ್ಯವನ್ನು ಕಣ್ತುಂಬಿಕೊಳ್ಳಲು ಬರುತ್ತಿದ್ದಾರೆ. ಆದರೆ, ಅದೇ ರೀತಿ ಸಭ್ಯತೆಯಿಂದ ನಡೆದುಕೊಳ್ಳುವುದು ಕೂಡ ಅಷ್ಟೇ ಮುಖ್ಯ.



ಕಳೆದ ವಾರ ಮೈಸೂರು ಅರಮನೆಯ ಒಳಾಂಗಣದಲ್ಲಿ ಸರಿ ಸುಮಾರು ಎಂಟತ್ತು ವಯಸ್ಸಿನ ಓರ್ವ ಹುಡುಗ ಮೂತ್ರ ವಿಸರ್ಜನೆ ಮಾಡಿರುವ ವಿಡಿಯೋವನ್ನು ನೆರೆ ರಾಜ್ಯದ ಓರ್ವ ಪ್ರವಾಸಿ ಬ್ಲಾಗರ್ ಸೆರೆ ಹಿಡಿದಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಅರಮನೆ ಮಂಡಳಿ ಹಾಗೂ ಭದ್ರತಾ ಪಡೆಗಳ ಕಾರ್ಯನಿರ್ವಹಣೆ ಬಗ್ಗೆ ಹಲವಾರು ಊಹಾಪೋಹಗಳು ಹುಟ್ಟಿ ಕೊಳ್ಳುವ ಜೊತೆಗೆ ಬೇಜವಾಬ್ದಾರಿತನ ಕಾಣಿಸುತ್ತಿದೆ.

ಅರಮನೆಯು ಪ್ರವಾಸಿ ತಾಣದ ಜೊತೆಗೆ ನಮ್ಮ ರಾಜವಂಶಸ್ಥರ ಮನೆ ಕೂಡ ಆಗಿದೆ. ಮನೆಯಲ್ಲಿ ಯಾರಾದರೂ ಈ ರೀತಿ ಹೇಯ ಕೃತ್ಯ ಮಾಡುವರೇ? ನಮ್ಮ ನಗರವು ಸಂಸ್ಕೃತಿ ಹಾಗೂ ಪರಂಪರೆಯನ್ನು ಕಾಪಾಡಿಕೊಂಡು ಬಂದಿರುವುದಕ್ಕೆ ಹೆಸರುವಾಸಿಯಾಗಿದ್ದು, ಪಾರಂಪರಿಕ ಕಟ್ಟಡಗಳಲ್ಲಿ ಮುಖ್ಯವಾದ ಮೈಸೂರು ಅರಮನೆಯಲ್ಲೇ ಇಂತಹ ಅಸಹ್ಯಕರ ಕೃತ್ಯ ನಡೆದಿರುವುದು ಶೋಚನೀಯ ಸಂಗತಿಯಾಗಿದೆ. ಮಕ್ಕಳನ್ನು ಪೋಷಿಸುವುದರ ಜೊತೆಗೆ ಅವರುಗಳಿಗೆ ಮೌಲ್ಯಗಳನ್ನು ಹೇಳಿಕೊಡುವುದು ತಂದೆ–ತಾಯಂದಿರ ಕರ್ತವ್ಯವಾಗಿರುತ್ತದೆ. ಸಂಘ–ಸಂಸ್ಥೆಗಳು ನಮ್ಮ ಪಾರಂಪರಿಕ ತಾಣಗಳನ್ನು ಸಂರಕ್ಷಿಸುವ ಜೊತೆಗೆ ನಾವು ಸಾರ್ವಜನಿಕರು ಕೂಡ ನಮ್ಮ ಮೌಲ್ಯಗಳನ್ನು ಕಾಪಾಡಿಕೊಂಡು ಹೋದ ಕಡೆ ಸಭ್ಯತೆಯಿಂದ ನಡೆದುಕೊಂಡರೆ ಅನ್ಯ ದೇಶದವರಿಗೆ ಮಾದರಿಯಾಗಬಹುದು.

–ಯಶಸ್ ಆರ್., ಸಾಮಾಜಿಕ ಕಾರ್ಯಕರ್ತ, ಮೈಸೂರು.

■ 3 ವರ್ಷಗಳಲ್ಲಿ ಚಿತ್ರನಗರಿ ಅಸ್ತಿತ್ವಕ್ಕೆ ಬರುವುದೇ?

ಮಾನ್ಯರೆ,

ಮೈಸೂರು ಜಿಲ್ಲೆ ನಂಜನಗೂಡು ತಾಲೂಕು ಸಮೀಪದ ಇಮ್ಮಾವು ಬಳಿ ಸುಮಾರು 160 ಎಕರೆಯಷ್ಟು ವಿಸ್ತಾರವಾದ ಪ್ರದೇಶದಲ್ಲಿ ಚಲನಚಿತ್ರ ನಗರಿಯನ್ನು ಸ್ಥಾಪಿಸಲಾಗುವುದೆಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಇತ್ತೀಚೆಗೆ ಮೈಸೂರಿನಲ್ಲಿ ದಸರಾ ಚಲನ ಚಿತ್ರೋತ್ಸವವನ್ನು ಉದ್ಘಾಟಿಸುವ ಸಂದರ್ಭದಲ್ಲಿ ತಿಳಿಸಿದ್ದಾರೆ.

ತಾವು 2013ರಲ್ಲಿ ಪ್ರಥಮ ಬಾರಿಗೆ ರಾಜ್ಯದ ಮುಖ್ಯಮಂತ್ರಿಯಾದ ಅವಧಿಯಲ್ಲಿ ಇಮ್ಮಾವು ಬಳಿ ಚಿತ್ರ ನಗರಿಗೆ 110 ಎಕರೆ ಜಾಗವನ್ನು ಮೀಸಲಿಟ್ಟಿದ್ದನ್ನು ಸ್ಮರಿಸಿದ ಮುಖ್ಯಮಂತ್ರಿಗಳು ಈಗ ಹೆಚ್ಚುವರಿಯಾಗಿ 50 ಎಕರೆ ಪ್ರದೇಶವನ್ನು ಇದೇ ಉದ್ದೇಶಕ್ಕೆ ಗುರುತಿಸಲಾಗಿದೆ ಎಂದು ಹೇಳಿದ್ದಾರೆ. ಪಾರಂಪರಿಕ ನಗರ, ಅರಮನೆಗಳ ನಗರ, ಮುಂತಾದ ಹೆಗ್ಗಳಿಕೆಗಳಿಗೆ ಪಾತ್ರವಾಗಿರುವ ಹಾಗೂ ವಿವಿಧ ಕಲೆಗಳ ನೆಲೆವೀಡಾಗಿರುವ ಮೈಸೂರಿನಲ್ಲಿ ಚಿತ್ರ ನಗರಿಯನ್ನು ಸ್ಥಾಪಿಸಬೇಕೆಂಬ ಬೇಡಿಕೆ ಹಲವಾರು ವರ್ಷಗಳಿಂದ ಕೇಳಿ ಬರುತ್ತಿದೆ. ಇನ್ನು ಮೂರು ವರ್ಷಗಳ ಒಳಗಾಗಿ ನೂತನ ಚಿತ್ರನಗರಿ ಅಸ್ತಿತ್ವಕ್ಕೆ ಬರಲಿದೆ ಎಂಬ ಮುಖ್ಯಮಂತ್ರಿಗಳ ಮಾತು ಆಶಾದಾಯಕವಾಗಿದೆ. **–ಕೆ.ವಿ.ವಾಸು, ವಕೀಲರು, ನೋಟರಿ, ವಿವೇಕಾನಂದನಗರ, ಮೈಸೂರು**

■ ಶಾಲಾ ಮುಂದಿನ ಚರಂಡಿ ಸ್ವಚ್ಛಗೊಳಿಸಿ



ಮಾನ್ಯರೆ,

ಮಂಡ್ಯದ ಫ್ಯಾಕ್ಟರಿ ಸರ್ಕಲ್‌ನ ರೋಟರಿ ಶಾಲೆಯ ಮುಂದಿನ ಚರಂಡಿ ಗುಂಡಿಯಿಂದ ಶಾಲಾ ಮಕ್ಕಳು, ಶಿಕ್ಷಕರು, ಕಾಲೇಜು ವಿದ್ಯಾರ್ಥಿನಿಯರು ಹಾಗೂ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿದೆ. ಚರಂಡಿಯ ದುರ್ವಾಸನೆ ಮತ್ತು ಅಪಾಯಕಾರಿ ಸೊಳ್ಳೆಗಳಿಂದ ಅನಾರೋಗ್ಯ ಸಮಸ್ಯೆಗಳು ಎದುರಾಗುವ ಆತಂಕವಿದೆ. ಸಾವಿರಾರು ಜನ ಮತ್ತು ಚಿಕ್ಕ ಮಕ್ಕಳು ಓಡಾಡುವ ಪ್ರದೇಶವಾಗಿರುವುದರಿಂದ ಅದನ್ನು ಸ್ವಚ್ಛಗೊಳಿಸುವುದು ನಗರಸಭೆಯವರ ಕರ್ತವ್ಯವಾಗಿದೆ. ಈ ಕುರಿತು ಶಾಲಾ ಆಡಳಿತ ಮಂಡಳಿ ಹಲವು ಬಾರಿ ದೂರು ದಾಖಲಿಸಿದ್ದು, ಕಮಿಷನರ್ ಬಳಿ ಮಾತನಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಚರಂಡಿ ಗುಂಡಿಗಳನ್ನು ಸ್ವಚ್ಛಗೊಳಿಸುವುದರಿಂದ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಓಡಾಡಲು ಅನುಕೂಲವಾಗುತ್ತದೆ. ಆದ್ದರಿಂದ ನಗರಸಭೆ ಅಧಿಕಾರಿಗಳು ಈ ಕುರಿತು ಗಮನಹರಿಸಿ, ಸ್ವಚ್ಛಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

–ಗೀತಾ ಬಿ.ಜೆ, ಮಹಿಳಾ ಸರ್ಕಾರಿ ಕಾಲೇಜು [ಸ್ವಾಯತ್ತ] ಮಂಡ್ಯ.

■ ಯಕ್ಷಪ್ರಶ್ನೆ!


ಮಾನ್ಯರೆ,

ಒಂದು ಖಾತಾ ಬದಲಾವಣೆ, ಒಂದು ಟೈಟಲ್ ಡೀಡ್, ಒಂದು ಕಂಪ್ಲೀಷನ್ ರಿಪೋರ್ಟ್ ಇತ್ಯಾದಿಗಳಿಗಾಗಿ ಶ್ರೀಸಾಮಾನ್ಯನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿಗೆ ಅಲೆದೂ ಅಲೆದೂ ಆತನ ಚಪ್ಪಲಿ ಸವೆಯುವುದರ ಜೊತೆಗೆ ಕಾಲೂ ಸವೆದುಹೋಗುತ್ತದೆ. ಜೇಬೂ ಕರಗಿ ಹೋಗಿರುತ್ತದೆ. ವಿಪರ್ಯಾಸವೆಂದರೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪತ್ನಿ ಪಾರ್ವತಮ್ಮ ಅವರು ಆ ಹದಿನಾಲ್ಕು ನಿವೇಶನಗಳನ್ನು ಹಿಂದಿರುಗಿಸಿದ ಕ್ಷಣಮಾತ್ರದಲ್ಲಿ ಹೂವನ್ನು ಎತ್ತಿ ಇಟ್ಟಷ್ಟೇ ಹಗುರವಾಗಿ ಖಾತೆಯೂ ಬದಲಾಗುತ್ತದೆ. ಇದು ಹೇಗೆ ಸಾಧ್ಯ? ಇದು ಯಕ್ಷಪ್ರಶ್ನೆ! **–ಪಿ.ಜೆ.ರಾಘವೇಂದ್ರ ನ್ಯಾಯವಾದಿ, ಮೈಸೂರು**

ನಮ್ಮ ಮೈಸೂರಿನ ಅಸಾಮಾನ್ಯರು...



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ್ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು, ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಅಪೂರ್ವ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿ ಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ಅದೇ ನನಗೆ ಬರೆದ ತೃಪ್ತಿ.



38. ಹೊರ್ಮುಸ್ಜಿ ಜಹಂಗೀರ್ ಭಾಭಾ



ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ಬೇರೆ ರಾಜ್ಯದಲ್ಲಿ ಹುಟ್ಟಿದ್ದರೂ ಹಲವಾರು ಮಂದಿ ಮೈಸೂರಿಗೆ ಬಂದು ಇಲ್ಲಿಯೇ ನೆಲೆಸಿ ತಮ್ಮದೇ ಕ್ಷೇತ್ರದಲ್ಲಿ ಮಹತ್ತರ ಸೇವೆ ಸಲ್ಲಿಸಿದರು. ರಾಜ್ಯದ ಬೆಳವಣಿಗೆಗೆ ತಮ್ಮ ಕೊಡುಗೆಯನ್ನೂ ನೀಡಿದರು. ಅಂತಹವರಲ್ಲಿ ಹೊರ್ಮುಸ್ಜಿ ಜಹಂಗೀರ್ ಭಾಭಾ ಒಬ್ಬರು. ಇವರು ಹೆಚ್. ಜೆ. ಭಾಭಾ ಎಂದೇ ಪ್ರಸಿದ್ಧರು. ಇವರ ಮೊಮ್ಮಗ ಭಾರತದ ಖ್ಯಾತ ಪರಮಾಣು ಭೌತಶಾಸ್ತ್ರಜ್ಞರಾಗಿದ್ದ ಹೆಚ್.ಜೆ.ಭಾಭಾ ಅವರು. ಇವರ ಪೂರ್ತಿ ಹೆಸರು ಹೋಮಿ ಜಹಂಗೀರ್ ಭಾಭಾ. ಎಂ.ಎ. ಮತ್ತು ಡಿ.ಲಿಟ್. ಮಾಡಿದ್ದ ಹೊರ್ಮುಸ್ಜಿ ಜಹಂಗೀರ್ ಭಾಭಾ, ಚಾಮರಾಜ ಒಡೆಯರ ಕಾಲದಲ್ಲಿ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಮಾಡಿದ ಸೇವೆ ಗಮನಾರ್ಹ.

1852ರ ಜೂನ್ 27ರಂದು ಜನಿಸಿದ ಭಾಭಾ ಮುಂಬಯಿಯ ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ಓದಿ 1869ರ ಜನವರಿಯಲ್ಲಿ ಪದವಿ ಪಡೆದರು. ಅದಕ್ಕೆ ಒಂದು ವರ್ಷ ಮುಂಚೆ ಅವರು ಮೊದಲ ಸೀನಿಯರ್ ಫೆಲೋಷಿಪ್ ಗಳಿಸಿದ್ದರು. 1870ರಲ್ಲಿ ಪೂನಾದ ಡೆಕ್ಕನ್ ಕಾಲೇಜಿನಲ್ಲಿ ಲ್ಯಾಟಿನ್ ರೀಡರ್ ಆಗಿ ಕೆಲಸ ಮಾಡಲಾರಂಭಿಸಿ, 1871ರಲ್ಲಿ ಇಂಗ್ಲಿಷ್ ಮತ್ತು ಲ್ಯಾಟಿನ್ ಭಾಷೆಗಳಲ್ಲಿ ಎಂ. ಎ. ಪದವಿ ಪಡೆದರು. ಈ ಮುಂಚೆ ಪದವಿ ಪಡೆದಿದ್ದ ಮುಂಬಯಿಯ ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿಯೇ ಅವರಿಗೆ ಇಂಗ್ಲಿಷ್ ಮತ್ತು ಲ್ಯಾಟಿನ್ ಭಾಷೆಗಳ ಸೀನಿಯರ್ ಫೆಲೋ ಮತ್ತು ಉಪನ್ಯಾಸಕರಾಗಿ ಕೆಲಸ ಸಿಕ್ಕಿತು. 1872ರಲ್ಲಿ ಹತ್ತು ತಿಂಗಳ ಅವಧಿಯಲ್ಲೇ ಇಂಗ್ಲೆಂಡಿಗೆ ಹೋಗಿ ಭಾರತೀಯ ಸಿವಿಲ್ ಸೇವೆಗೆ ಸ್ಪರ್ಧಿಸಿ ವಿಫಲರಾದರು.

ಇಂಗ್ಲೆಂಡಿನಿಂದ ಹಿಂತಿರುಗಿ ಬಂದ ಅವರನ್ನು ಈ ಮುಂಚೆ ಇದ್ದ ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿಯೇ ಲ್ಯಾಟಿನ್ ಭಾಷೆಯ ಉಪಪ್ರಾಧ್ಯಾಪಕರನ್ನಾಗಿ ನೇಮಿಸಲಾಯಿತು. 1876ರ ನವೆಂಬರ್ ತಿಂಗಳಲ್ಲಿ ಭಾಭಾ ಅವರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಮನೋವಿಜ್ಞಾನ ಮತ್ತು ನೈತಿಕ ವಿಜ್ಞಾನದ ಪ್ರಾಧ್ಯಾಪಕ ಹಾಗೂ ಉಪ ಪ್ರಿನ್ಸಿಪಾಲ್ ಆಗಿ ನೇಮಕಗೊಂಡರು. ಆದರೆ ಮರು ತಿಂಗಳಿನಲ್ಲಿಯೇ ಅವರು ಮುಂಬಯಿ ವಿಶ್ವವಿದ್ಯಾನಿಲಯದ ಫೆಲೋ ಆಗಿ ನೇಮಕಗೊಂಡರು.

1884ರಿಂದ ಭಾಭಾ ಅವರ ಸೇವೆ ಮೈಸೂರು ರಾಜ್ಯದಲ್ಲಿ ಪ್ರಾರಂಭವಾಯಿತು. ಮೊದಲಿಗೆ ಅವರು ಮಹಾರಾಜ ಕಾಲೇಜಿನ ಪ್ರಿನ್ಸಿಪಾಲರಾದರು. ಅವರು ಮನಃಶಾಸ್ತ್ರ ಮತ್ತು ನೈತಿಕ ವಿಜ್ಞಾನದ ಪ್ರಾಧ್ಯಾಪಕರಾಗಿದ್ದು, ಈ ಎರಡು ವಿಷಯಗಳನ್ನೂ ವಿದ್ಯಾರ್ಥಿಗಳಿಗೆ ಬೋಧಿಸುತ್ತಿದ್ದರು. ಆಗ ಎಫ್.ಎ. ತರಗತಿಯಲ್ಲಿದ್ದ ವಿದ್ಯಾರ್ಥಿಗಳ ಸಂಖ್ಯೆ 80ರಿಂದ 100. ಅವರ ಅವಧಿಯಲ್ಲಿ ಕಾಲೇಜಿನ ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿ ತಮ್ಮ ಪ್ರತಿಭೆ ತೋರಿದರು. ಇಡೀ ದಕ್ಷಿಣ ಭಾರತದ 97 ಸೆಕೆಂಡ್ ಗ್ರೇಡ್ ಕಾಲೇಜುಗಳ ಪೈಕಿ ಮಹಾರಾಜ ಕಾಲೇಜು ಮೊದಲ ಮತ್ತು ಮೂರನೆಯ ಸ್ಥಾನ ಸಾಧಿಸಿತು. ಇಡೀ ಭಾರತದಲ್ಲಿ ಅದು ಐದನೇ ಸ್ಥಾನ ಗಳಿಸಿತ್ತು. ಕಾಲೇಜಿನ ರೀಡಿಂಗ್ ರೂಂ ಕ್ಲಬ್ ಮತ್ತು ಚರ್ಚಾ ಕೂಟದ ಕ್ಲಬ್ ಎರಡೂ ಸೇರಿ ಖ್ಯಾತಿ ಪಡೆದ ಮಹಾರಾಜ ಕಾಲೇಜು ಯೂನಿಯನ್, ಚರ್ಚಾ ಸ್ಪರ್ಧೆ, ನಾಟಕ, ಕ್ರಿಕೆಟ್, ಮತ್ತಿತರ ಪಠ್ಯೇತರ ಚಟುವಟಿಕೆಗಳಿಗೆ ಪ್ರಸಿದ್ಧಿ ಗಳಿಸಿತು. 1887ರಲ್ಲಿ ನಡೆದ ಬಹುಮಾನ ವಿತರಣೆಯಲ್ಲಿ ಭಾಗವಹಿಸಿದ್ದ ಮಹಾರಾಜ ಕೃಷ್ಣರಾಜ ಒಡೆಯರು, ಭಾಭಾ ಅವರ ಕ್ರಿಯಾಶೀಲ ನೇತೃತ್ವದಲ್ಲಿ ಕಾಲೇಜು ಮಹತ್ತರ ಹಾಗೂ ತೀವ್ರ ಪ್ರಗತಿ ಸಾಧಿಸಿದೆಯೆಂದು ಮುಕ್ತಕಂಠದಿಂದ ಪ್ರಶಂಸಿಸಿದರು.

ಮಹಾರಾಜರ ಅಭಿಲಾಷೆಯಂತೆ ಕಾಲೇಜನ್ನು ಫಸ್ಟ್ ಗ್ರೇಡ್ ಕಾಲೇಜಾಗಿ ಪರಿವರ್ತಿಸಿ ಅದರ ದರ್ಜೆಯನ್ನು ಹೆಚ್ಚಿಸುವಂತೆ ಭಾರತದ ಗೌರ್ನರ್ ಜನರಲ್ ಅವರಿಗೆ ಮಾರನೆಯ ವರ್ಷವೇ ಭಾಭಾ ಮನವಿಯನ್ನು ಸಲ್ಲಿಸಿದರು. 1894ರಲ್ಲಿ ಇದಕ್ಕೆ ಮನ್ನಣೆ ಸಿಕ್ಕಿ ಕಾಲೇಜು ಫಸ್ಟ್ ಗ್ರೇಡ್ ಕಾಲೇಜಾಯಿತು. 1890ರಲ್ಲಿ ಶಿಕ್ಷಣ ಇಲಾಖೆಯನ್ನು ಪ್ರಾಚ್ಯವಸ್ತು ಇಲಾಖೆಯಿಂದ ಬೇರ್ಪಡಿಸಿ ಭಾಭಾ ಅವರಿಗೆ ವಹಿಸಲಾಯಿತು.

ಈ ಮಧ್ಯೆ 1893ರಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯ ಅವರನ್ನು ವಿಶ್ವವಿದ್ಯಾನಿಲಯದ ಫೆಲೋ ಆಗಿ ನೇಮಿಸಿತು. ಭಾಭಾ ಅವರು ಆ ವಿಶ್ವ ವಿದ್ಯಾನಿಲಯದ ಬೋಧಕ ಮಂಡಲಿಯ ಓರ್ವ ಸದಸ್ಯರಾಗಿದ್ದರು. ಜೊತೆಗೆ ವಿಶ್ವವಿದ್ಯಾನಿಲಯ ಆಯೋಗದ ಕಾಲೇಜುಗಳ ಅರ್ಹತೆ ಮತ್ತು ಗುಣಮಟ್ಟದ ಪರಿಶೀಲನಾ ಸಮಿತಿಯ ಸದಸ್ಯರೂ ಆಗಿದ್ದರು.

ಮಹಾರಾಜ ಕಾಲೇಜಿನಲ್ಲಿ ಆರು ವರ್ಷಗಳ ಅಭೂತಪೂರ್ವ ಸಾಧನೆಯ ನಂತರ ಏಪ್ರಿಲ್ 1900ರಲ್ಲಿ ಮಹಾರಾಜರ ಸರ್ಕಾರ ಅವರನ್ನು ಶಿಕ್ಷಣ ಇಲಾಖೆಯ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿತು. ಅವರ ಹುದ್ದೆಯನ್ನು ಇನ್ಸ್‌ಪೆಕ್ಟರ್ ಜನರಲ್ ಆಫ್ ಎಜುಕೇಷನ್ ಎಂದು ಬದಲಾಯಿಸಿತು. ಶಿಕ್ಷಣ ಇಲಾಖೆಯ ಮುಖ್ಯಸ್ಥರಾಗಿ ಭಾಭಾ 18 ವರ್ಷಗಳು ಸತತವಾಗಿ ಶ್ರಮಪಟ್ಟು ಇಲಾಖೆಯ ಪ್ರತಿಯೊಂದೂ ಶಾಖೆಯ ದಕ್ಷತೆಯನ್ನು ಉತ್ತಮ ಪಡಿಸಿ ಅದರ ಸರ್ವತೋಮುಖ ಬೆಳವಣಿಗೆಗೆ ಕಾರಣಕರ್ತರಾದರು. ಇದರಿಂದಾಗಿ ರಾಜ್ಯದ ಶಿಕ್ಷಣ ಇಲಾಖೆ ಕೆಲವೇ ವರ್ಷಗಳಲ್ಲಿ ಬ್ರಿಟಿಷ್ ಇಂಡಿಯಾದ ಪ್ರಗತಿಪರ ರಾಜ್ಯಗಳ ಸಮಮಟ್ಟಕ್ಕೆ ಬಂದಿತು.

1906–07ರಲ್ಲಿ ಅವರನ್ನು ಯೂರೋಪಿಗೆ ಕಳುಹಿಸಲಾಯಿತು. ಆ ದೇಶಗಳಲ್ಲಿ ಅವರು ಪ್ರಾಥಮಿಕ ಮತ್ತು ಉನ್ನತ ಪ್ರಾಥಮಿಕ ಶಿಕ್ಷಣ ಮಟ್ಟದಲ್ಲಿ, ಅದರಲ್ಲಿಯೂ ವಿಶೇಷವಾಗಿ ಕಿಂಡರ್ ಗಾರ್ಟನ್ ಶಾಲೆಗಳು ಮತ್ತು ಶಾರೀರಿಕ ತರಬೇತಿ ಬಗ್ಗೆ ಅಧ್ಯಯನ ಮಾಡಿದರು. ಹಿಂತಿರುಗಿ ಬಂದ ಮೇಲೆ ಭಾಭಾ ಅವರು ಕಿಂಡರ್‌ಗಾರ್ಟನ್ ಶಿಕ್ಷಣವನ್ನು, ಅದರಲ್ಲಿಯೂ ಪ್ರಮುಖವಾಗಿ ವಿದ್ಯಾರ್ಥಿನಿಯರ ಶಾಲೆಗಳಲ್ಲಿ ಪ್ರಾರಂಭಿಸಿದರು. ಅಲ್ಲದೆ ಒಂಬತ್ತು ಪ್ರೌಢಶಾಲೆಗಳಲ್ಲಿ ಸ್ಲಾಯಡ್ ತರಬೇತಿಯನ್ನು ಲಂಡನ್ ಸ್ಕೂಲ್ ಬೋರ್ಡಿನ ಸ್ಲಾಯಡ್ ಕ್ರಮದ ಸಹಾಯಕ ಸೂಪರಿಂಟೆಂಡೆಂಟ್ ಆರ್. ಲ್ಯಾಟ್ಟರ್, ಅಮೆರಿಕದ ಮೆಸಾಚ್ಯುಸೆಟ್ಸ್ ರಾಜ್ಯದ ಸ್ಲಾಯಡ್ ತರಬೇತಿ ಶಾಲೆಯ ಪ್ರಿನ್ಸಿಪಾಲ್ ಗುಸ್ತಾಫ್ಸ್ ಲ್ಯಾರ್ಸ್ಸನ್ ಮತ್ತು ದಿವಂಗತ ಲೂಸಿ ಅವರ ಸಹಾಯದಿಂದ ಪ್ರಾರಂಭಿಸಿದರು.

ಸ್ಲಾಯಡ್ ತರಬೇತಿ ಕರಕುಶಲ ಕಲೆ ಆಧಾರಿತ ಶಿಕ್ಷಣ ಕ್ರಮವಾಗಿದ್ದು ಇದನ್ನು ಪ್ರಥಮಬಾರಿಗೆ 1865ರಲ್ಲಿ ಫಿನ್ಲೆಂಡಿನಲ್ಲಿ ಪ್ರಾರಂಭಿಸಲಾಯಿತು. ಸ್ವೀಡಿಷ್ ಭಾಷೆಯಲ್ಲಿ 'ಸ್ಲಾಯಡ್' ಎಂದರೆ ಕರಕುಶಲ ವಸ್ತು ಎಂದರ್ಥ. ಈ ಕ್ರಮದಲ್ಲಿ ಕಾಗದವನ್ನು ವಿವಿಧ ಆಕಾರಗಳಲ್ಲಿ ಮಡಚುವುದು, ಬಟ್ಟೆ ಹೊಲೆಯುವುದು, ಕಸೂತಿ, ಮರಗೆಲಸ ಇತ್ಯಾದಿ ಕಲೆಗಳ ಮೂಲಕ ಶಿಕ್ಷಣ ನೀಡಿ ಮಕ್ಕಳ ಬೌದ್ಧಿಕ ಮಟ್ಟ ಹೆಚ್ಚಿಸುವುದು. ಶಾಲೆಗಳಲ್ಲಿ ಇದನ್ನು ಈಗಲೂ ಅನುಸರಿಸಲಾಗುತ್ತಿದೆ. ಭಾಭಾ ಅವರ ಸೇವೆಯನ್ನು ಗುರುತಿಸಿ ಬ್ರಿಟಿಷ್ ಸರ್ಕಾರ ಅವರಿಗೆ ಸಿ.ಐ.ಇ. ಪ್ರಶಸ್ತಿಯನ್ನು ನೀಡಿತು. ಭಾಭಾ ಅವರು 1941ರ ಏಪ್ರಿಲ್ 23ರಂದು ಕೊನೆಯುಸಿರೆಳೆದರು.

ಹೆಬ್ಬಾಳು ದಸರಾಗೆ ವರ್ಣರಂಜಿತ ತೆರೆ



ಮೈಸೂರಿನ ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್ ವತಿಯಿಂದ ಆಯೋಜಿಸಲಾಗಿದ್ದ 'ಹೆಬ್ಬಾಳು ದಸರಾ' ಸಮಾರೋಪ ಸಮಾರಂಭದಲ್ಲಿ ರಾಷ್ಟ್ರೀಯ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತ ಉಪನ್ಯಾಸಕ ಹೆಚ್.ಎನ್.ಗಿರೀಶ್ ದಂಪತಿ ಹಾಗೂ ಪದ್ಮಶ್ರೀ ಪುರಸ್ಕೃತ ಕೆ.ಎಸ್.ರಾಜಣ್ಣ ದಂಪತಿಯನ್ನು ಸನ್ಮಾನಿಸಲಾಯಿತು. ಶಾಸಕರಾದ ಜಿ.ಟಿ.ದೇವೇಗೌಡ, ಜಿ.ಡಿ.ಹರೀಶ್‌ಗೌಡ, ಮಾಜಿ ಕಾರ್ಪೋರೇಟರ್ ಪ್ರೇಮಾ ಶಂಕರೇಗೌಡ, ಟ್ರಸ್ಟ್ ಅಧ್ಯಕ್ಷ ಕೆ.ವಿ.ಶ್ರೀಧರ, ಜೆಡಿಎಸ್ ಮುಖಂಡ ಹೆಚ್.ಕೆ.ರಾಮು ಮತ್ತಿತರರು ಉಪಸ್ಥಿತರಿದ್ದರು.



ಗಾಯಕಿ ಐಶ್ವರ್ಯಾ ರಂಗರಾಜನ್ ಗಾಯನ ಮೋಡಿ.

ಮೈಸೂರು, ಅ.6(ಎಸ್‌ಬಿಡಿ)– ಮೈಸೂರಿನ 'ಹೆಬ್ಬಾಳು ದಸರಾ'ಗೆ ಭಾನುವಾರ ವರ್ಣರಂಜಿತ ತೆರೆ ಬಿದ್ದಿತು.

ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್ ವತಿಯಿಂದ ಆಯೋಜಿಸಲಾಗಿದ್ದ ಮೂರು ದಿನಗಳ 'ಹೆಬ್ಬಾಳು ದಸರಾ'ದಲ್ಲಿ ವೈವಿಧ್ಯಮಯ ಕಾರ್ಯಕ್ರಮಗಳು ಜರುಗಿದವು. ವಿಜಯನಗರ ರೈಲ್ವೆ ಲೇಔಟ್‌ನ ರಂಗ ಮಂದಿರದಲ್ಲಿ ಭಾನುವಾರ ಸಾಂಸ್ಕೃತಿಕ ಸಂಭ್ರಮ, ಬಹುಮಾನ ವಿತರಣೆ, ಸಾಧಕರಿಗೆ ಸನ್ಮಾನ ಇನ್ನಿತರ ಅರ್ಥಪೂರ್ಣ ಕಾರ್ಯಕ್ರಮಗಳೊಂದಿಗೆ ಸಮಾರೋಪಗೊಂಡಿತು. ಖ್ಯಾತ ಗಾಯಕಿ ಐಶ್ವರ್ಯಾ ರಂಗರಾಜನ್ ಹಾಗೂ ಗಾಯಕ ಸುನೀಲ್ ಸುಶ್ರಾವ್ಯ ಹಾಡುಗಳ ಮೂಲಕ ಮನರಂಜಿಸಿದರು. ನೃತ್ಯ ತಂಡಗಳು ಮನಮೋಹಕ ಹೆಜ್ಜೆಯೊಂದಿಗೆ ನೆರೆದಿದ್ದವರನ್ನೂ ಕುಣಿಸಿದರು. ಇದೇ ವೇಳೆ ರಾಷ್ಟ್ರೀಯ ಉತ್ತಮ ಶಿಕ್ಷಕ ಪ್ರಶಸ್ತಿಗೆ ಬಾಜನರಾದ ಹುಣಸೂರು ಸರ್ಕಾರಿ ಪದವಿಪೂರ್ವ ಕಾಲೇಜು ಉಪನ್ಯಾಸಹ ಹೆಚ್.ಎನ್.ಗಿರೀಶ್ ಹಾಗೂ ಪ್ಯಾರಾಲಿಂಪಿಕ್ಸ್‌ನಲ್ಲಿ ಚಿನ್ನದ ಪಡೆದಿರುವ ಪದ್ಮಶ್ರೀ ಪುರಸ್ಕೃತ ಕೆ.ಎಸ್.ರಾಜಣ್ಣ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು, ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ, ಮಾಜಿ ಸಂಸದ ಪ್ರತಾಪ್ ಸಿಂಹ, ಮಾಜಿ ಶಾಸಕ ಎಲ್.ನಾಗೇಂದ್ರ, ಮಾಜಿ ಕಾರ್ಪೋರೇಟರ್ ಪ್ರೇಮಾ ಶಂಕರೇಗೌಡ, ಜೆಡಿಎಸ್ ಮುಖಂಡ ಹೆಚ್.ಕೆ.ರಾಮು, ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್‌ನ ಅಧ್ಯಕ್ಷರೂ ಆದ ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಹೆಬ್ಬಾಳ್ ಕೆ.ವಿ.ಶ್ರೀಧರ ಮತ್ತಿತರ ಮುಖಂಡರು ಉಪಸ್ಥಿತರಿದ್ದರು.

ವೈವಿಧ್ಯಮಯ ಕಾರ್ಯಕ್ರಮ: ಹೆಬ್ಬಾಳು ದಸರಾ ಅಂಗವಾಗಿ ಅ.4ರಂದು ಯುವ ಜಾಗೃತಿಯ ಸೈಕಲ್ ಜಾಥಾ, ಅ.5 ಮತ್ತು 6ರಂದು ವಿವಿಧ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಹೆಬ್ಬಾಳು, ಮಂಚೇಗೌಡನಕೊಪ್ಪಲು, ಕುಂಬಾರಕೊಪ್ಪಲು, ಲಕ್ಷ್ಮೀಕಾಂತನಗರ, ಲೋಕನಾಯಕನಗರ, ವಿಜಯನಗರ, ವಾಣಿವಿಲಾಸ ಬಡಾವಣೆ ಸೇರಿದಂತೆ ವಿವಿಧ ಬಡಾವಣೆಯ ಸಾವಿರಾರು ಮಂದಿ ದಸರಾದಲ್ಲಿ ಭಾಗಿಯಾಗಿ ಸಂಭ್ರಮಿಸಿದರು.

ಶ್ರೀರಾಂಪುರದಲ್ಲಿ ಪೌರಕಾರ್ಮಿಕರ ದಿನಾಚರಣೆ



ಮೈಸೂರಿನ ಶ್ರೀರಾಂಪುರ ಪಟ್ಟಣ ಪಂಚಾಯತ್ ವತಿಯಿಂದ ಶ್ರೀರಾಂಪುರದ ಟಿ.ಎಸ್.ಕಲ್ಯಾಣ ಮಂಟಪದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ನೇತೃತ್ವದಲ್ಲಿ ಪೌರಕಾರ್ಮಿಕರ ದಿನ ಆಚರಿಸಿ, ಪೌರಕಾರ್ಮಿಕರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಮೈಸೂರು, ಅ.6–ಮೈಸೂರಿನ ಶ್ರೀರಾಂಪುರ ಪಟ್ಟಣ ಪಂಚಾಯತ್ ವತಿಯಿಂದ ಶ್ರೀರಾಂಪುರದ ಟಿ.ಎಸ್.ಕಲ್ಯಾಣ ಮಂಟಪದಲ್ಲಿ ಶಾಸಕ ಜಿ.ಟಿ. ದೇವೇಗೌಡರ ನೇತೃತ್ವದಲ್ಲಿ ಪೌರಕಾರ್ಮಿಕರ ದಿನಾಚರಣೆ ನಡೆಯಿತು. ಕಾರ್ಯಕ್ರಮದಲ್ಲಿ ಶಾಸಕ ಜಿ.ಟಿ. ದೇವೇಗೌಡರು ಪೌರಕಾರ್ಮಿಕರನ್ನು ಸನ್ಮಾನಿಸಿ, ವಿವಿಧ ಕ್ರೀಡೆಗಳಲ್ಲಿ ವಿಜೇತರಾದವರಿಗೆ ಬಹುಮಾನ, ಪ್ರಮಾಣಪತ್ರ ವಿತರಣೆ ಮತ್ತು ವಿಶೇಷ ಭತ್ಯೆ ಧನಾದೇಶ, ನೆನಪಿನ ಕಾಣಿಕೆ ವಿತರಿಸಿ ಪೌರಕಾರ್ಮಿಕರ ವೃತ್ತಿ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು.

ಇದೇ ವೇಳೆ ಕಲ್ಯಾಣ ಕಾರ್ಯಕ್ರಮದ 24.10%, 7.25% ಮತ್ತು 5% ಯೋಜನೆಗಳಡಿ ಆಯ್ಕೆ ಆಗಿರುವ ಫಲಾನುಭವಿಗಳಿಗೆ ಮತ್ತು ರಾಷ್ಟ್ರ ಮಟ್ಟದ ವಿಶೇಷಚೇತನ ಪ್ರತಿಭೆ ಕು.ಭಾರ್ಗವಿ ಅವರಿಗೆ ಸಹಾಯಧನದ ಚೆಕ್‌ಗಳನ್ನು ವಿತರಿಸಲಾಯಿತು.

ಈ ವೇಳೆ ಮೈಸೂರು ಜಿಲ್ಲಾ ನಗರಾಭಿವೃದ್ಧಿ ಕೋಶದ ಅಧಿಕಾರಿ, ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ರಾಜು, ಪುರ ಪ್ರಮುಖರಾದ ಸುರೇಶ, ಶಂಕರ್, ಮಹೇಶ್, ವೈದ್ಯಾಧಿಕಾರಿ ಶಿಲ್ಪಶ್ರೀ, ವಿವಿಧ ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು, ಅಧಿಕಾರಿಗಳು, ಶ್ರೀರಾಂಪುರ ಪಪಂ ಮುಖ್ಯಾಧಿಕಾರಿ ಸುರೇಶ್, ಸಮುದಾಯ ಸಂಘಟನಾ ಅಧಿಕಾರಿ ಶ್ರೀನಿವಾಸ ಹೆಚ್.ವಿ., ರೆವಿನ್ಯೂ ಇನ್ಸ್‌ಪೆಕ್ಟರ್ ಶಕೀಲ್ ಅಹ್ಮದ್, ಇಂಜಿನಿಯರ್ ರಂಜಿನಿ, ಹೆಲ್ತ್ ಇನ್ಸ್‌ಪೆಕ್ಟರ್ ಪರಮೇಶ್ವರ, ಲೆಕ್ಕಿಗರಾದ ಸೌಮ್ಯ, ಬಿಲ್ ಕಲೆಕ್ಟರ್ ಕುಮಾರಸ್ವಾಮಿ, ಉದಯ ಭಾಸ್ಕರ್, ಮೋಹನಕುಮಾರ್, ಪುಷ್ಪ, ಶ್ರೀಕಂಠು, ಛಾಯಾ, ಚಂದ್ರು, ರಶ್ಮಿ, ಚೈತ್ರ, ಮೇಸ್ತ್ರಿ ಮುತ್ತುಸ್ವಾಮಿ, ಪರಮೇಶ್, ಬಸವರಾಜು, ಜಯಮ್ಮ, ಜಯಶ್ರೀ, ನೀರು ಸರಬರಾಜು ನೌಕರರು, ಪೌರಕಾರ್ಮಿಕರು, ಫಲಾನುಭವಿಗಳು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com





ದಸರಾ ವಿಶೇಷ 2024

ಮೈಸೂರು ದಸರಾ ಮಹೋತ್ಸವ–2024 ಇಂದಿನ ಕಾರ್ಯಕ್ರಮಗಳು

ಬೆಳಗ್ಗೆ 6.00	:	'ಪ್ರಜಾಪ್ರಭುತ್ವಕ್ಕಾಗಿ ಯೋಗ', ಉದ್ಘಾಟನೆ: ಸಚಿವ ಡಾ.ಮಹದೇವಪ್ಪ, ಸ್ಥಳ: ಅರಮನೆ ಆವರಣ.
ಬೆಳಗ್ಗೆ 6.30	:	ಹಾಲು ಕರೆಯುವ ಸ್ಪರ್ಧೆ, ಚಾಲನೆ: ಸಚಿವ ಕೆ.ವೆಂಕಟೇಶ್, ಜೆ.ಕೆ.ಮೈದಾನ.
ಬೆಳಗ್ಗೆ 10.30	:	ಸಂತಸ ಕವಿಗೋಷ್ಠಿ, ಉದ್ಘಾಟನೆ : ನಾಡೋಜ ಡಾ.ಹಂಪನಾ, ಸ್ಥಳ: ಜಗನ್ಮೋಹನ ಅರಮನೆ.
ಸಂಜೆ 5.30	:	ಸಚಿವ ಕೆ.ವೆಂಕಟೇಶ್ ಅವರಿಂದ ಹಾಲು ಕರೆಯುವ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ, ಸ್ಥಳ: ಜೆ.ಕೆ.ಮೈದಾನ.
		ಮಹಿಳಾ ದಸರಾ, ಜೆ.ಕೆ. ಮೈದಾನ
ಬೆಳಗ್ಗೆ 10.00	:	ರಾಷ್ಟ್ರೀಯ ಸಿಟ್ಟಿಂಗ್ ಪ್ಯಾರಾ ವಾಲಿಬಾಲ್ ಆಟಗಾರ್ತಿ ಕೆ.ಎಸ್.ಶಿಲ್ಪಾ ಅವರೊಂದಿಗೆ ಸಂವಾದ
ಬೆಳಗ್ಗೆ 10.30	:	ಸರಿಗಮಪ ಖ್ಯಾತಿಯ ಬಿ.ಅಮೂಲ್ಯ ಅವರಿಂದ ಸಂಗೀತ ಕಾರ್ಯಕ್ರಮ.
ಬೆಳಗ್ಗೆ 11.00	:	ಹಿರಿಯ ನಾಗರಿಕರಿಂದ ಸಾಂಸ್ಕೃತಿಕ ಕಾರ್ಯಕ್ರಮ (ನಾಟಕ, ಭಾವಗೀತೆ ಮತ್ತು ಜಾನಪದ ಹಾಡುಗಳು).
ಬೆಳಗ್ಗೆ 11.30	:	ಮಹಿಳೆಯರಿಗೆ ಗೇಮ್ಸ್ (ಸಂಗೀತ ಕುರ್ಚಿ ಮತ್ತು ಬಾಲ್–ಇನ್–ದ ಬಕೆಟ್) ಮತ್ತು ಹಿರಿಯರಿಗೆ ಆಟಗಳು ಪುರುಷರು (100 ಮೀ ವಾಕಿಂಗ್ ಮತ್ತು ಶಾಟ್‌ಪುಟ್)
ಮಧ್ಯಾಹ್ನ 12.00	:	ವಿಶೇಷಚೇತನರಿಂದ ಮನರಂಜನಾ ಕಾರ್ಯಕ್ರಮ.
ಮಧ್ಯಾಹ್ನ 1.00	:	ಮಹಿಳೆಯರಿಂದ ಜಾನಪದ ನೃತ್ಯ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು
ಮಧ್ಯಾಹ್ನ 2.30	:	ಮಹಿಳೆಯರಿಗಾಗಿ ಆಟಗಳು (ನೀರು ತುಂಬಿದ ಬಕೆಟ್ ಅನ್ನು ಕಣ್ಣುಮುಚ್ಚಿ ಹಾದು ಹೋಗುವುದು, ನೀರು ಬದಲಾಯಿಸುವುದು ಆಟ ಮತ್ತು ಮ್ಯಾಜಿಕ್ ಕಾರ್ಪೆಟ್ ರೇಸ್).
ಮಧ್ಯಾಹ್ನ 3.30	:	ಮೈಸೂರು ನಾಗ ಮಾರ್ಷಲ್ ಆರ್ಟ್ಸ್‌ನಿಂದ ಆತ್ಮರಕ್ಷಣೆಯ ಪ್ರಾತ್ಯಕ್ಷಿಕೆ
ಮಧ್ಯಾಹ್ನ 4.30	:	ಭರತನಾಟ್ಯ ಮತ್ತು ಸಾಂಪ್ರದಾಯಿಕ ನೃತ್ಯ ಕಾರ್ಯಕ್ರಮ.
		ಯುವ ದಸರಾ
ಸಂಜೆ 6.00	:	ಸಂಗೀತ ನಿರ್ದೇಶಕ ರವಿ ಬಸ್ರೂರ್ ಅವರಿಂದ ಸ್ಯಾಂಡಲ್‌ವುಡ್ ನೈಟ್ಸ್, ಉತ್ತನಹಳ್ಳಿ ರಿಂಗ್ ರಸ್ತೆ.
		ಸಾಂಸ್ಕೃತಿಕ ಕಾರ್ಯಕ್ರಮಗಳು–ಅರಮನೆ ಆವರಣ
ಸಂಜೆ 4.00	:	ಎಂ.ಮಹಾದೇವ ಅವರಿಂದ ಬೀಸು ಕಂಸಾಳೆ, ಕಂಸಾಲೆ ಜಾನಪದ ಕಲಾ ಸಂಘ.
ಸಂಜೆ 4.30	:	ಕೆಪಿಎಸಿಯ ಡಾ. ಕೆ.ಕುಮಾರ್ ಮತ್ತು ತಂಡದಿಂದ ಭರತನಾಟ್ಯ.
ಸಂಜೆ 5.15	:	ರಾಜೇಶ್ ಮತ್ತು ತಂಡದಿಂದ ಭಾವಗೀತೆ ವಚನ ಗಾಯನ
ಸಂಜೆ 6.00	:	ಕೆರೆಮನೆಯ ಶ್ರೀ ಇಡಗುಂಜಿ ಗಣಪತಿ ಯಕ್ಷಗಾನ ಮಂಡಳಿಯವರಿಂದ 'ದಕ್ಷಯಜ್ಞ'.
ಸಂಜೆ 7.00	:	ಹಂಸಿಕಾ ಅಯ್ಯರ್, ವಿಪ್ಲಿನ್ ಅನೇಜಾರಿಂದ ಭಾರತೀಯ ಜಾನಪದ ಹಾಡುಗಳು ಮತ್ತು ಗಜಲ್‌ಗಳು.
ಸಂಜೆ 8.30	:	ಕೊಳಲು–ಹಿಂದೂಸ್ತಾನಿ ಸಿತಾರ್ ಲಯತರಂಗ ಜುಗಲ್‌ಬಂದಿ ಫ್ಯೂಷನ್–ವಿದುಷಿ. ವಾರಿಜಶ್ರೀ ವೇಣುಗೋಪಾಲ್ ಮತ್ತು ಪಂಡಿತ್ ಪುರ್ಬಯನ್ ಚಟರ್ಜಿ.
		ಜಗನ್ಮೋಹನ ಅರಮನೆ
ಸಂಜೆ 5.00	:	ಸ್ನೇಹ ಮಾಧುರ್ಯ ಸಾಂಸ್ಕೃತಿಕ ಸಂಸ್ಥೆ (ಛೀಮ್ಸಿ) ಅವರಿಂದ ಸುಗಮ ಸಂಗೀತ.
ಸಂಜೆ 6.00	:	ಬಾಗಲಕೋಟೆಯ ಡಾ.ಪುಟ್ಟರಾಜು ಭಜಂತ್ರಿ ಮತ್ತು ಬಳಗದಿಂದ ಶಹನಾಯ್ ವಾದನ
ಸಂಜೆ 7.00	:	ಪ್ರೊ.ರೇವಯ್ಯ ವಸ್ತ್ರದ್ಮಠ ಮತ್ತು ತಂಡದಿಂದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ, ಕಲಬುರಗಿ.
ರಾತ್ರಿ 8.00	:	ಸ್ನೇಹಲತಾ ಮತ್ತು ತಂಡದಿಂದ ವಚನ ಗಾಯನ.
ರಾತ್ರಿ 9.00	:	ಯಳಂದೂರು ಪ್ರತಿಧ್ವನಿ ಸಾಂಸ್ಕೃತಿಕ ಕಲಾವೇದಿಕೆಯಿಂದ ಸುಗಮ ಸಂಗೀತ (ಎಸ್.ಜೈಗುರು ಮತ್ತು ತಂಡ).
		ಕಲಾಮಂದಿರ
ಸಂಜೆ 5.00	:	ಧನುಷ್ ಮತ್ತು ತಂಡದಿಂದ ಗಾರುಡಿ ಗೊಂಬೆ, ಬೆಂಗಳೂರು.
ಸಂಜೆ 5.30	:	ರಾಮನಗರದ ಶ್ರೀ ದೇವಿ ಕುಮಾರಮ್ಮ ಮತ್ತು ತಂಡದವರಿಂದ ಚಂಡೆ ವಾದನ.
ಸಂಜೆ 6.00	:	ಮೈಸೂರು–ಚಾಮರಾಜನಗರ ಜಿಲ್ಲೆಗಳ ಮಹಿಳೆಯರಿಂದ ಸೋಬಾನೆ ಪದ
ಸಂಜೆ 7.00	:	ಆರ್.ಅನುಷಾ ಮತ್ತು ತಂಡದಿಂದ ಸಮೂಹ ನೃತ್ಯ, ಬೆಂಗಳೂರು.
ರಾತ್ರಿ 8.00	:	ಶ್ರೀ ಗೌರಿ ಗಣೇಶ ಸಾಂಸ್ಕೃತಿಕ ಕಲಾಮಟ್ಟು ಗ್ರಾಮೀಣಾಭಿವೃದ್ಧಿ ಸಂಘ, ಬಾಗಲಕೋಟ (ಎಸ್.ಪಿ. ನಾಗರಾಳ್) ಅವರಿಂದ ಜಾನಪದ ಗೀತೆಗಳು .
ರಾತ್ರಿ 9.00	:	ಜೆ.ಕವಿತಾ ಕಾಮತ್ ಮತ್ತು ತಂಡದಿಂದ ಕನ್ನಡ ಗಜಲ್, ಮೈಸೂರು.
		ಗಾನಭಾರತಿ, ಕುವೆಂಪುನಗರ
ಸಂಜೆ 5.00	:	ಆನಂದಕುಮಾರ್ ಮತ್ತು ತಂಡ, ತಿ.ನರಸೀಪುರ ಅವರಿಂದ ವೀರಗಾಸೆ
ಸಂಜೆ 5.30	:	ಸೋಮಶೇಖರ್ ಮತ್ತು ತಂಡದಿಂದ ನಾದಸ್ವರ, ಮೈಸೂರು.
ಸಂಜೆ 6.00	:	ಬೆಂಗಳೂರು ಶ್ರೀ ಗೋಸಾಯಿ ಮಹಾಸಂಸ್ಥಾನ ಮಠದಿಂದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ.
ಸಂಜೆ 7.00	:	ಬೆಂಗಳೂರು ವಿದುಷಿ ಎಂ. ಅನನ್ಯ ಮತ್ತು ತಂಡದಿಂದ ಭರತನಾಟ್ಯ.
ರಾತ್ರಿ 8.00	:	ಸುಬ್ಬಲಕ್ಷ್ಮಿ ಮತ್ತು ತಂಡ ಮೈಸೂರು ಇವರಿಂದ ಗಮಕ ವಾಚನ.
ರಾತ್ರಿ 9.00	:	ಮಾರ್ಪಳ್ಳಿಯ ಶ್ರೀ ಮಹಾಲಿಂಗೇಶ್ವರ ಯಕ್ಷಗಾನ ಕಲಾಮಂಡಳಿಯಿಂದ ತಾಳಮದ್ದಳೆ
		ಶ್ರೀ ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ
ಸಂಜೆ 5.00	:	ಮೈಸೂರು, ಚಾಮರಾಜನಗರ ಜಿಲ್ಲೆಗಳ ಮಹಿಳೆಯರಿಂದ ಸೋಬಾನೆ ಪದ.
ಸಂಜೆ 6.00	:	ದೇವಿ ಮತ್ತು ತಂಡ ಮೈಸೂರು ಇವರಿಂದ ದಾಸರಪದ.
ಸಂಜೆ 7.00	:	ಯಳಂದೂರಿನ ರಾಧಾ ಮತ್ತು ತಂಡದವರಿಂದ ಭಕ್ತಿಗೀತೆಗಳು
ಸಂಜೆ 8.00	:	ಎಚ್.ಡಿ. ಕೋಟೆಯ ಕೆಂಪರಾಜು ಮತ್ತು ಬಳಗದಿಂದ ಸುಗಮ ಸಂಗೀತ
		ಚಿಕ್ಕಗಡಿಯಾರ (ಡೆಫರಿನ್ ಟವರ್)
ಸಂಜೆ 5.00	:	ಅರಸೀಕೆರೆಯ ಜಯರಾಮ್ ಮತ್ತು ತಂಡದಿಂದ ನಂದಿಕೋಲು
ಸಂಜೆ 5.30	:	ಮಂಡ್ಯದ ಮಂಜು ಮಲೆಯೂರು ಮತ್ತು ಬಳಗದಿಂದ ಪೂಜಾ ಕುಣಿತ
ಸಂಜೆ 6.00	:	ಪಿ.ಸುದರ್ಶನ್ ಮತ್ತು ತಂಡ ಮೈಸೂರು ಇವರಿಂದ ಸುಗಮ ಸಂಗೀತ
ಸಂಜೆ 7.00	:	ಹುಬ್ಬಳ್ಳಿಯ ಸಹನಾ ಬನ್ನಿಗಿಡದ ಅವರಿಂದ ಜಾನಪದ ನೃತ್ಯ
ರಾತ್ರಿ 8.00	:	ಹಾಸನದ ಟಿ.ಎಸ್. ಲಕ್ಷ್ಮಿ ಮತ್ತು ತಂಡದವರಿಂದ ಜನಪದ ಗೀತೆಗಳು
		ಪುರಭವನ
ಬೆಳಗ್ಗೆ 10.30	:	ಮಂಡ್ಯದ ಆದಿಶಕ್ತಿ ಕನ್ನಡ ನಾಟಕ ತಂಡದಿಂದ 'ಗೌಡ ಮೆಚ್ಚಿದ ಹುಡುಗಿ' ನಾಟಕ ಪ್ರದರ್ಶನ
ಮಧ್ಯಾಹ್ನ 3.00	:	ಶ್ರೀ ನಂಜುಂಡೇಶ್ವರ ಕಲಾಸಂಘ, ಮೈಸೂರು ಇವರಿಂದ 'ತರ್ಲೆ ಮಾವ' ನಾಟಕ ಪ್ರದರ್ಶನ
ಸಂಜೆ 6.00	:	ಮೈಸೂರು ಜಿಲ್ಲಾ ನೂರೀತ ಕಲಾವಿದರ ಸಂಘ (ಎಸ್.ಉತ್ತನಹಳ್ಳಿ ಎನ್.ಹರೀಶ್‌ಕುಮಾರ್)ದಿಂದ 'ದಕ್ಷಯಜ್ಞ' ನಾಟಕ ಪ್ರದರ್ಶನ
		ಕಿರು ರಂಗಮಂದಿರ, ಕಲಾಮಂದಿರ ಆವರಣ
ಮಧ್ಯಾಹ್ನ 2.00	:	ನಿರ್ಮಲಾ, ಭೂಮ್ತಾಯಿ ಬಳಗ, ಕೋಲಾರ ಇವರಿಂದ ಜನಪದ ಗೀತೆಗಳು.
ಮಧ್ಯಾಹ್ನ 3.00	:	ಬೆಂಗಳೂರಿನ ಅನ್ನಪೂರ್ಣೇಶ್ವರಿ ಕಲಾ ಟ್ರಸ್ಟ್ ವತಿಯಿಂದ 'ಕುದುರೆ ಮೊಟ್ಟೆ' ನಾಟಕ ಪ್ರದರ್ಶನ.
ರಾತ್ರಿ 7.00	:	ಮೈಸೂರಿನ ನಾಟ್ಯಲೇಖಾ ರಂಗಸಮೂಹ ಅವರಿಂದ 'ಡೋರ್ ನಂ.8' ನಾಟಕ ಪ್ರದರ್ಶನ.
		ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ
ಸಂಜೆ 5.30	:	ಮಂಡ್ಯ ಜಿಲ್ಲೆಯ ಮಳವಳ್ಳಿ ನಾಗೇಂದ್ರ ಮತ್ತು ತಂಡದಿಂದ ಜನಪದ ಗೀತೆಗಳು
ಸಂಜೆ 6.30	:	ಬಳ್ಳಾರಿ ಜಿಲ್ಲೆಯ ಮಾವಿನಹಳ್ಳಿಯ 'ವೀರ ಅಭಿಮನ್ಯು ಕಾಳಗ' ಕಲ್ಚರಲ್ ಟ್ರಸ್ಟ್‌ನಿಂದ ಶ್ರೀ ಸಿದ್ದೇಶ್ವರ ರಂಗ ಸಂಸದಿಂದ ಬಯಲಾಟ
ಸಂಜೆ 7.30	:	ಮೈಸೂರಿನ ಚಾರ್ವಾಕ ತಂಡದಿಂದ 'ಬುದ್ಧಾಯನ' ನಾಟಕ ಪ್ರದರ್ಶನ.
		ನಟನ ರಂಗಮಂದಿರ, ರಾಮಕೃಷ್ಣನಗರ
ಸಂಜೆ 5.00	:	ಚಾಮರಾಜನಗರದ ಸಪ್ತಸ್ವರ ಸಾಂಸ್ಕೃತಿಕ ಕಲಾ ಟ್ರಸ್ಟ್ ವತಿಯಿಂದ ಕ್ರಾಂತಿಗೀತೆಗಳು,
ಸಂಜೆ 6.30	:	ಮೈಸೂರಿನ ನಕ್ಷತ್ರ ಪ್ರತಿಷ್ಠಾನದಿಂದ ಹಾಸ್ಯ ನಾಟಕ 'ಜಾತ್ರೆ' ಪ್ರದರ್ಶನ (ಸತೀಶ್‌ಕುಮಾರ್).
		ಶ್ರೀಕಂಠೇಶ್ವರ ದೇವಸ್ಥಾನ, ನಂಜನಗೂಡು
ಸಂಜೆ 4.45	:	ಮಂಡ್ಯ ಜಿಲ್ಲೆಯ ಮಂಜು ಮತ್ತು ಬಳಗದಿಂದ ಕರಗ ಕೋಲಾಟ
ಸಂಜೆ 5.15	:	ತಿ.ನರಸೀಪುರದ ಮರಡಿಪುರ ಸಾಮಾಜಿಕ ನ್ಯಾಯಪರ ವೇದಿಕೆಯಿಂದ ಗೀಗಿಪದ
ಸಂಜೆ 6.00	:	ವಿಜಯಪುರ ಜಿಲ್ಲೆಯ ಬಡಿಗೆರೆದ ಶ್ರೀ ಗ್ರಾಮದೇವತೆ ಹಲಗಿ ಮಜಲು ಕಾಳಪ್ಪ ಹನಮಂತ ಅವರಿಂದ ಹಲಗಿ ಮಜಲು
ಸಂಜೆ 7.00	:	ಶ್ರೀ ಸಾಯಿರಾಮನ್ ನೃತ್ಯ ಕೇಂದ್ರದ (ಡಾ.ಟಿ.ಎಸ್.ಸಾಗರ್) ಅವರಿಂದ ನೃತ್ಯ ವೈಶಿಷ್ಟ್ಯ
ರಾತ್ರಿ 8.00	:	ಪಾಂಡವಪುರ ಪಾಂಡವ ಸಾಂಸ್ಕೃತಿಕ ವೇದಿಕೆ ಇವರಿಂದ ಜಾನಪದ ಗೀತೆಗಳು
ರಾತ್ರಿ 9.00	:	ರಾಣೆಬೆನ್ನೂರಿನ ಶ್ರೀ ಸೇವಾಲಾಲ್ ಲಂಬಾಣಿ ಭಜನಾ ನೃತ್ಯ ಸಂಘ (ಕಾಳಪ್ಪ ತೇಜಪ್ಪ ವಡೇಟರ್ ಮತ್ತು ಬಳಗ) ದಿಂದ ಲಂಬಾಣಿ ನೃತ್ಯ
		ನವರಾತ್ರಿ ಜನಪದ ರಂಗ ಉತ್ಸವ, ವನರಂಗ, ರಂಗಾಯಣ
ಸಂಜೆ 6.30	:	ಕುಂದಾಪುರದ ಕೊಂಡದಕುಳಿಯ ಅಶ್ವಿನಿ ಕೊಂಡದಕುಳಿ ಮತ್ತು ತಂಡದಿಂದ 'ನರಕಾಸುರ ವಧೆ' ಯಕ್ಷಗಾನ

ಪ್ರತಿದಿನದ ಆಕರ್ಷಣೆ

ದಸರಾ ಫಲಪುಷ್ಪ ಪ್ರದರ್ಶನ, ಸ್ಥಳ: ಕುಪ್ಪಣ್ಣ ಪಾರ್ಕ್	–	ಬೆಳಗ್ಗೆ 9 ರಿಂದ ರಾತ್ರಿ 8.30
ದಸರಾ ಫಲಪುಷ್ಪ ಪ್ರದರ್ಶನ, ಸ್ಥಳ: ಲಿಂಗಾಂಬುದಿ ಕೆರೆ	–	ಬೆಳಗ್ಗೆ 9 ರಿಂದ ರಾತ್ರಿ 7
ದಸರಾ ಫಲಪುಷ್ಪ ಪ್ರದರ್ಶನ, ಸ್ಥಳ: ಕುಕ್ಕರಹಳ್ಳಿ ಕೆರೆ	–	ಬೆಳಗ್ಗೆ 9 ರಿಂದ ರಾತ್ರಿ 7
ಪುಸ್ತಕ ಮೇಳ, ಸ್ಥಳ: ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ	–	ಬೆಳಗ್ಗೆ 10 ರಿಂದ ರಾತ್ರಿ 7
ದಸರಾ ವಸ್ತುಪ್ರದರ್ಶನ, ಸ್ಥಳ: ವಸ್ತುಪ್ರದರ್ಶನ ಮೈದಾನ	–	ಮಧ್ಯಾಹ್ನ 2.30 ರಿಂದ ರಾತ್ರಿ 8.30
ಆಹಾರ ಮೇಳ, ಸ್ಥಳ: ಮಹಾರಾಜ ಕಾಲೇಜು ಮೈದಾನ	–	ಬೆಳಗ್ಗೆ 11 ರಿಂದ ರಾತ್ರಿ 9
ರೈಲ್ ಮ್ಯೂಸಿಯಂ	–	ಬೆಳಗ್ಗೆ 10 ರಿಂದ ರಾತ್ರಿ 8

ದಸರಾ ಸಮಾನತಾ ಕವಿಗೋಷ್ಠಿಯಲ್ಲಿ ಕಾವ್ಯ ಕಲರವ

96 ವಯಸ್ಸಿನ ಅಜ್ಜಿಯ ಕಾವ್ಯ ವಾಚನ, ಕವನ ಓದಿ ಸೈ ಎನಿಸಿಕೊಂಡ ಕೈದಿ, ವಿಶೇಷಚೇತನ ಬಾಲಕನ ಕಾವ್ಯ ಶಕ್ತಿ




ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಭಾನುವಾರ ದಸರಾ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಪಂಚ ಕಾವ್ಯೋತ್ಸವದ ಸಮಾನತಾ ಕವಿಗೋಷ್ಠಿಯನ್ನು ಸಾಹಿತಿ ದೇವು ಪತ್ತಾರ ಉದ್ಘಾಟಿಸಿದರು. (ಎಡಚಿತ್ರ). 96 ವರ್ಷದ ಇಳಿ ವಯಸ್ಸಿನಲ್ಲೂ ಸಾಹಿತಿ ನುಗ್ಗೇಹಳ್ಳಿ ಪಂಕಜಾ ಕಾವ್ಯ ವಾಚನ ಮಾಡಿ ಗಮನ ಸೆಳೆದರು.

ಮೈಸೂರು,ಅ.6(ಬಿಎಲ್‌ಯು)–96 ವರ್ಷದ ಪ್ರಾಯದಲ್ಲೂ ಕಾವ್ಯ ವಾಚನ, ಜೈಲಿನಲ್ಲಿದ್ದರೂ ಬತ್ತದ ಕಾವ್ಯ ಸ್ಫೂರ್ತಿ, ಕಾರ್ಯದೊತ್ತಡದಲ್ಲೂ ಕೈಬಿಡದ ಕೆಎಎಸ್ ಅಧಿಕಾರಿ ಸಾಹಿತ್ಯ ಕೃಷಿ, ವಿಶೇಷಚೇತನ ಬಾಲಕನ ಕಾವ್ಯ ಪ್ರೀತಿ.

ಮೈಸೂರು ದಸರಾ ಮಹೋತ್ಸವದ ಅಂಗವಾಗಿ ನಗರದ ಜಗನ್ಮೋಹನ ಅರಮನೆಯಲ್ಲಿ ಇಂದು ಆಯೋಜಿಸಿದ್ದ ಪಂಚ ಕಾವ್ಯೋತ್ಸವದ ಸಮಾನತಾ ಕವಿಗೋಷ್ಠಿಯಲ್ಲಿ ಕಾವ್ಯ ವಾಚಿಸಿದ ಸಾಹಿತಿಗಳ ವೈಶಿಷ್ಟ್ಯತೆಗಳಿವು.

ಸಮಾನತಾ ಕವಿಗೋಷ್ಠಿಯಲ್ಲಿ ಮೈಸೂರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಿಂದ 30 ಕವಿಗಳು ಭಾಗವಹಿಸಿ ಕಾವ್ಯ ವಾಚನ ಮಾಡಿದರು. ಕಾವ್ಯ ವಾಚಿಸಿದ ಒಬ್ಬೊಬ್ಬ ಕವಿಯಲ್ಲಿ ಒಂದೊಂದು ರೀತಿಯ ವೈಶಿಷ್ಟ್ಯಪೂರ್ಣ ವ್ಯಕ್ತಿತ್ವವಿತ್ತು

ಬೆಂಗಳೂರಿನ ನುಗ್ಗೇಹಳ್ಳಿ ಪಂಕಜಾ 95 ವಸಂತಗಳನ್ನೂ ಪೂರೈಸಿದ್ದಾರೆ. ನಡೆಯಲು ನಿಶ್ಯಕ್ತರಾಗಿರುವ ಪಂಕಜಾ ಅವರಲ್ಲಿ ಸಾಹಿತ್ಯ ಶಕ್ತಿ ಇಮ್ಮಡಿಕೊಳ್ಳುತ್ತಿದೆ. ಬೆಂಗಳೂರಿನ ವೃದ್ಧಾಶ್ರಮದಲ್ಲಿರುವ ಪಂಕಜಾ ಕವಿಗೋಷ್ಠಿಯಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು. ವ್ಹೀಲ್ ಚೇರ್‌ನಲ್ಲೆ ಕುಳಿತು ಕಾವ್ಯ ವಾಚನ ಮಾಡಿದ ಪಂಕಜಾ ಅವರ ಕಾವ್ಯ ವಾಚನ ನೆರೆದಿದ್ದವರನ್ನು ಉತ್ತೇಜನಗೊಳಿಸಿತು.

ಪಂಕಜಾ ಬರೆದಿರುವ ಸಿಪಾಯಿ ರಾಮ, ಮಲೆಯ ಮಾರುತ, ಗಗನ ಸೇರಿದಂತೆ ಹಲವು ಕಾದಂಬರಿಗಳು ಸಿನಿಮಾಗಳಾಗಿವೆ. ಇಳಿ ವಯಸ್ಸಿನಲ್ಲೂ ಸಾಹಿತ್ಯ ಕೃಷಿಯಿಂದ ವಿಮುಖರಾಗದ ಪಂಕಜಾ ಇಂದು ನಡೆದ ಸಮಾನತಾ ಕವಿಗೋಷ್ಠಿಯಲ್ಲಿ ಕಾವ್ಯ ವಾಚನ ಮಾಡಿ ಆದರ್ಶರಾದರು. ಇನ್ನು ನಾಲ್ಕು ವರ್ಷಕ್ಕೆ ಶತಾಯುಷಿಯಾಗುವ ಪಂಕಜಾ ಅವರು ಕಾವ್ಯ ವಾಚನ ಮಾಡುವಾಗ ಕನ್ನಡಕ ಕೂಡ ಧರಿಸಲಿಲ್ಲ. ನಡೆಯಲು ಸಾಧ್ಯವಿಲ್ಲ ಎಂಬುದನ್ನು ಬಿಟ್ಟರೆ ಮಾನಸಿಕವಾಗಿ ಶಕ್ತರಾಗಿರುವ ಪಂಕಜಾ ಸಾಹಿತ್ಯ ಕೃಷಿಯಲ್ಲಿ ಅತ್ಯುತ್ಸಾಹದಿಂದ ತೊಡಗಿಸಿಕೊಂಡಿದ್ದಾರೆ.

ಕಾವ್ಯ ವಾಚನ ಮಾಡಿದ ಮತ್ತೊಬ್ಬ ವಿಶಿಷ್ಟ ವ್ಯಕ್ತಿ ಅಂದರೆ ಆರ್.ಮನು. ಇವರು ಅಪರಾಧ ಪ್ರಕರಣದಲ್ಲಿ ಕಳೆದ ಒಂಭತ್ತು ವರ್ಷಗಳಿಂದ ಮೈಸೂರು ಕಾರಾಗೃಹದಲ್ಲಿ ಶಿಕ್ಷೆ ಅನುಭವಿಸುತ್ತಿದ್ದಾರೆ. ಮನು ಅವರಿಗೆ ಇನ್ನು ನಾಲ್ಕು ವರ್ಷಗಳ ಶಿಕ್ಷಾವಧಿ ಇದೆ.

ಜೈಲಿನಲ್ಲಿದ್ದರೂ ಮನು ಮಾನಸಿಕವಾಗಿ ಕುಗ್ಗಿಲ್ಲ. ಕಾವ್ಯ ರಚನೆ ಮಾಡುತ್ತಿರುವ ಮನು ಜೈಲಿನ ನಾಲ್ಕು ಗೋಡೆಯ ಮಧ್ಯೆಯೆ ಹಲವು ಕಥೆ, ಕಾದಂಬರಿಗಳನ್ನು ಬರೆಯುತ್ತಿದ್ದಾರೆ. ತಾವು ಬರೆದಿರುವ ಕೆಲವು ಕವನಗಳನ್ನು ಜೈಲಾಧಿಕಾರಿಗಳ ಮೂಲಕ ದಿನಪತ್ರಿಕೆಗಳಿಗೆ ಕಳುಹಿಸಿ ಪ್ರಕಟಿಸಿದ್ದಾರೆ. ಮನು ಕವನ ವಾಚನ ಮಾಡುವ ಮೂಲಕ ನೆರೆದಿದ್ದವರ ಗಮನ ಸೆಳೆದರು.

ಮೈಸೂರಿನ ಜೆಎಸ್‌ಎಸ್ ಪಾಲಿಟೆಕ್ನಿಕ್‌ನ ವಿಶೇಷ ಚೇತನ ವಿದ್ಯಾರ್ಥಿಯೊಬ್ಬ ಕಾವ್ಯ ವಾಚನ ಮಾಡಿದರು. ಮಾತನಾಡಲು ಬಾರದಿದ್ದರೂ ತಾನು ಬರೆದಿರುವ ಕವನವನ್ನು ಸಂಜ್ಞೆಯ ಮೂಲಕ ತಿಳಿಸಿದಾಗ ಅವರ ಅಧ್ಯಾಪಕರು ಅದನ್ನು ಓದಿ ಹೇಳಿದರು.

ಇವರ ಜೊತೆಗೆ ಕೆಎಎಸ್ ಅಧಿಕಾರಿ ವೆಂಕಟರಾಜು, ಒಡನಾಡಿ ಸಂಸ್ಥೆಯ ದಿವ್ಯಶ್ರೀ ಸೇರಿದಂತೆ ಹಲವರು ಕಾವ್ಯ ವಾಚನ ಮಾಡಿದರು. ಪ್ರತಿಯೊಬ್ಬರೂ ಒಂದೊಂದು ಕ್ಷೇತ್ರದಲ್ಲಿ ಗುರುತಿಸಿಕೊಂಡು ಹೆಸರು ಮಾಡಿದವರಾಗಿದ್ದರು. ಕೆಲವರಿಗೆ ಸಾಹಿತ್ಯ ಕ್ಷೇತ್ರದ ಸಂಬಂಧವೇ ಇಲ್ಲದಿದ್ದರೂ ಕಾವ್ಯ ರಚನೆಯನ್ನು ಹವ್ಯಾಸವಾಗಿ ಮಾಡಿಕೊಂಡಿರುವುದು ಕಂಡುಬಂತು.

ಸಮಾನತಾ ಕವಿಗೋಷ್ಠಿ ಉದ್ಘಾಟಿಸಿ ಮಾತನಾಡಿದ ಸಾಹಿತಿ ದೇವು ಪತ್ತಾರ, ಮಾತು ಘನತೆ ಕಳೆದುಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಕವಿತೆಗಳಿಗೂ ಕೂಡ ಅಸ್ತಿತ್ವ ಉಳಿಸಿಕೊಳ್ಳಲು ಪರದಾಡುವ ಪರಿಸ್ಥಿತಿ ಇದೆ ಎಂದು ಆತಂಕ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಪಂಚ ಕಾವ್ಯೋತ್ಸವದ ಪರಿಕಲ್ಪನಾಕಾರರಾದ ಪ್ರೊ.ಎನ್.ಲೋಲಾಕ್ಷಿ, ಕವಿಗೋಷ್ಠಿಯಲ್ಲಿ ತಮಗೆ ಅವಕಾಶ ಸಿಗುತ್ತಿಲ್ಲವೆಂದು ಕೆಲವರು ಸಾಮಾಜಿಕ ಜಾಲತಾಣದ ಮೂಲಕ ನಕಾರಾತ್ಮಕವಾಗಿ ಪ್ರಚಾರ ಮಾಡುತ್ತಿದ್ದಾರೆ. ಕವಿಗೋಷ್ಠಿಗೆ ನಾನು ಆಯ್ಕೆ ಆಗಿಲ್ಲ ಎಂದು ಅಸೂಯೆಪಟ್ಟರೆ ಆತ ಕವಿಯೇ ಅಲ್ಲ ಎಂದು ಅಭಿಪ್ರಾಯಪಟ್ಟರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಂಸ್ಕೃತಿ ಚಿಂತಕ ಶಂಕರ ದೇವನೂರು, ಪ್ರಾಧ್ಯಾಪಕ ಪ್ರೊ.ಪ್ರಶಾಂತ್ ನಾಯಕ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ದಸರಾ ಗಜಪಡೆ ಮಾವುತ, ಕಾವಾಡಿಗಳಿಗೆ ಕುಡಿಯುವ ನೀರಿನ ಸ್ಟೀಲ್ ಬಾಟಲ್ ಕೊಡುಗೆ




ದಸರಾ ಗಜಪಡೆ ಮಾವುತ, ಕಾವಾಡಿಗಳಿಗೆ ಇನ್ನರ್ ವೀಲ್ ಕ್ಲಬ್ ಆಫ್ ಮೈಸೂರು ಮಿಡ್‌ಟೌನ್ ವತಿಯಿಂದ ಕುಡಿಯುವ ನೀರಿನ ಸ್ಟೀಲ್ ಬಾಟಲ್ ವಿತರಿಸಲಾಯಿತು.

ಮೈಸೂರು, ಅ.6(ಎಂಟಿವೈ)–ಅರಮನೆ ಆವರಣದಲ್ಲಿ ಬೀಡುಬಿಟ್ಟಿರುವ ದಸರಾ ಗಜಪಡೆ ಮಾವುತ, ಕಾವಾಡಿಗಳಿಗೆ ಇನ್ನರ್ ವೀಲ್ ಕ್ಲಬ್ ಆಫ್ ಮೈಸೂರು ಮಿಡ್ ಟೌನ್ ವತಿಯಿಂದ ಕುಡಿಯುವ ನೀರಿನ ಸ್ಟೀಲ್ ಬಾಟಲ್ ವಿತರಿಸಲಾಯಿತು. ಗಜಪಡೆ ಬೀಡು ಬಿಟ್ಟಿರುವ ಸ್ಥಳದಲ್ಲಿ ಎಲ್ಲಾ ಆನೆಗಳ ಮಾವುತ, ಕಾವಾಡಿ, ಸಹಾಯಕರು, ಆನೆಗಳಿಗೆ ಅಡುಗೆ ತಯಾರಿಸುವವರು ಸೇರಿದಂತೆ 55 ಮಂದಿಗೆ ಕುಡಿಯುವ ನೀರಿನ ಸ್ಟೀಲ್ ಬಾಟಲ್ ನೀಡಲಾಯಿತು. ಬಳಿಕ ಮಾವುತ, ಕಾವಾಡಿಗಳ ಮಕ್ಕಳಿಗಾಗಿ ತೆರೆದಿರುವ ತಾತ್ಕಾಲಿಕ ಶಾಲೆಯಲ್ಲಿ ಮಕ್ಕಳಿಗೆ ಕೆಲ ಆಟೋಟ ಸ್ಪರ್ಧೆ ನಡೆಸಿದರು. ನಂತರ ಎಲ್ಲಾ ಮಕ್ಕಳಿಗೂ ತಿನಿಸು ನೀಡಲಾಯಿತು. ಇನ್ನರ್ ವೀಲ್ ಕ್ಲಬ್ ಆಫ್ ಮೈಸೂರು ಮಿಡ್ ಟೌನ್ ಅಧ್ಯಕ್ಷೆ ಅಶ್ವಿನಿ ರಾಘವೇಂದ್ರ, ಕಾರ್ಯದರ್ಶಿ ಸವಿತಾ ಶ್ರೀನಿವಾಸ್ ಸೇರಿದಂತೆ ಕ್ಲಬ್‌ನ ಇನ್ನಿತರ ಸದಸ್ಯರು ಉಪಸ್ಥಿತರಿದ್ದರು.

ನಾಡಹಬ್ಬ ಮೈಸೂರು ದಸರಾ ದೀಪಾಲಂಕಾರ ಸಮಿತಿಯ ಅವ್ಯವಸ್ಥೆ

ವಿದ್ಯುತ್ ಲೈಟ್ ಬ್ಯಾನರ್‌ನಲ್ಲಿ ಕನ್ನಡ ಅಕ್ಷರಗಳು ಮಾಯ



ಮೈಸೂರು, ಅ.6(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲಿ ಮೈಸೂರಿನ ರಸ್ತೆಗಳು ವಿದ್ಯುತ್ ದೀಪಗಳಿಂದ ಕಂಗೊಳಿಸುತ್ತಿವೆ. ಆದರೆ ಸಯ್ಯಾಜಿರಾವ್ ರಸ್ತೆಯಲ್ಲಿ ವಿದ್ಯುತ್ ಲೈಟ್‌ಗಳು ಕೆಟ್ಟು ಅವ್ಯವಸ್ಥೆ ಕಂಡು ಬಂದಿದೆ.


ನಗರದ ಸಯ್ಯಾಜಿರಾವ್ ರಸ್ತೆಯಲ್ಲಿ ದಸರಾ ದೀಪಾಲಂಕಾರ ಉಪ ಸಮಿತಿ–2024 ಎಂಬ ವಿದ್ಯುತ್ ಲೈಟ್ ಬ್ಯಾನರ್‌ನಲ್ಲಿ ಕೆಲವು ಕನ್ನಡ ಅಕ್ಷರಗಳು ಮಾಯವಾಗಿತ್ತು. 'ದಸರಾ' ಬದಲು 'ದರಾ' ಎಂದು, 'ಉಪ ಸಮಿತಿ' ಬದಲು 'ಉಪ ಮಿತಿ' ಎಂಬ ಅಕ್ಷರಗಳು ಎದ್ದು ಕಾಣುತ್ತಿತ್ತು. ಕನ್ನಡ ಅಕ್ಷರಗಳು ಮಾಯವಾಗಿರುವುದರಿಂದ ದಸರಾ ಉಪ ಸಮಿತಿ ನಗೆಪಾಟಲಿಗೀಡಾಗಿದೆ. ಸಯ್ಯಾಜಿರಾವ್ ರಸ್ತೆಯ ಹಸಿರು ಚಪ್ಪರ ಸೇರಿದಂತೆ ಇತರೆಡೆ ದಸರಾ ಉದ್ಘಾಟನೆ ದಿನದಂದು ವಿದ್ಯುತ್ ದೀಪಗಳನ್ನು ತರಾತುರಿಯಲ್ಲಿ ಅಳವಡಿಸಲಾಗುತ್ತಿತ್ತು. ಇದರಿಂದ ಅಧ್ವಾನಗಳಾಗಿದೆ. ದಸರಾ ಆರಂಭಕ್ಕೆ ಒಂದೆರಡು ದಿನಕ್ಕೆ ಮೊದಲೇ ವಿದ್ಯುತ್ ದೀಪಾಲಂಕಾರ ಕಾರ್ಯ ಪೂರ್ಣಗೊಳಿಸಿ, ಎಲ್ಲೆಲ್ಲಿ ಲೋಪ ದೋಷಗಳಿವೆ ಎಂದು ಪರಿಶೀಲನೆ ಮಾಡಿ ಅದನ್ನು ಸರಿಪಡಿಸಿದ್ದರೆ ಪ್ರಾಯಶಃ ಇವತ್ತು ಇಂತಹ ಪ್ರಸಂಗಗಳಾಗುತ್ತಿರಲ್ಲಿಲ್ಲ. ದಸರಾ ದೀಪಾಲಂಕಾರಕ್ಕೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡಲಾಗುತ್ತಿದೆ. ಇಷ್ಟು ಹಣ ವೆಚ್ಚ ಮಾಡಿದರೂ ಅವ್ಯವಸ್ಥೆಗಳು ಅಲ್ಲಲ್ಲಿ ಕಂಡು ಬರುತ್ತಿದೆ.

ದಸರಾ ವೇಳೆಯೂ ಕಂಗೊಳಿಸದ ವೆಲ್ಲೆಸ್ಲಿ ಸೇತುವೆ, ಬತ್ತೇರಿ


ದೀಪಾಲಂಕಾರ ಮಾಡದೆ ಜಿಲ್ಲಾ, ತಾಲೂಕು ಆಡಳಿತದಿಂದ ನಿರ್ಲಕ್ಷ್ಯ, ಅನಾಥವಾದ ಕೋಟೆಗಳು, ಮರೆಯಾದ ಕ್ರೀಡೆಗಳು

ಶ್ರೀರಂಗಪಟ್ಟಣ, ಅ.6– ಈ ಬಾರಿಯ ಶ್ರೀರಂಗಪಟ್ಟಣ ಪಾರಂಪರಿಕ ದಸರಾ ವೈಭವದಿಂದ ಆರಂಭಗೊಂಡಿದೆಯಾದರೂ ಐತಿಹಾಸಿಕ ವೆಲ್ಲೆಸ್ಲಿ ಸೇತುವೆ ಹಾಗೂ ಬತ್ತೇರಿಯನ್ನು ಜಿಲ್ಲಾ ಹಾಗೂ ತಾಲೂಕು ಆಡಳಿತ ಕಡೆಗಣಿಸಿದ್ದು ಕಗ್ಗತ್ತಲಿನಲ್ಲಿ ಮುಳುಗಿದೆ.

ಕಳೆದ ಐದಾರು ವರ್ಷಗಳಿಂದ ಶ್ರೀರಂಗಪಟ್ಟಣ ದಸರಾ ವೇಳೆ ವೆಲ್ಲೆಸ್ಲಿ ಸೇತುವೆ ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಕಂಗೊಳಿಸುತ್ತಿತ್ತು. ಇದು ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ತೆರಳುವ ಪ್ರಯಾಣಿಕರನ್ನು ಆಕರ್ಷಿಸುತ್ತಿತ್ತು. ಆದರೆ ಈ ಬಾರಿಯ ಶ್ರೀರಂಗಪಟ್ಟಣ ದಸರಾ ವೇಳೆ ವೆಲ್ಲೆಸ್ಲಿ ಸೇತುವೆಯನ್ನು ಸಂಪೂರ್ಣ ನಿರ್ಲಕ್ಷಿಸಿರುವುದು ಸ್ಥಳೀಯರಲ್ಲಿ ಬೇಸರ ಮೂಡಿಸಿದೆ.



ಕಳೆದ ಬಾರಿ ವಿದ್ಯುತ್ ದೀಪಗಳಿಂದ ಕಂಗೊಳಿಸಿದ ವೆಲ್ಲೆಸ್ಲಿ ಸೇತುವೆ.



ಈ ಬಾರಿ ಕತ್ತಲಿನಿಂದ ಕೂಡಿರುವ ವೆಲ್ಲೆಸ್ಲಿ ಸೇತುವೆ.



ಕಳೆದ ಬಾರಿ ಜಗಮಗಿಸಿದ್ದ ಐತಿಹಾಸಿಕ ಬತ್ತೇರಿ.



ಈ ಬಾರಿ ನಿರ್ಲಕ್ಷ್ಯಕ್ಕೊಳಗಾಗಿರುವ ಐತಿಹಾಸಿಕ ಬತ್ತೇರಿ.

ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳ ಕೇಂದ್ರಬಿಂದುವಾಗಿದ್ದ ಐತಿಹಾಸಿಕ ಬತ್ತೇರಿಯು ಸಹ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಐತಿಹಾಸಿಕ ಬತ್ತೇರಿ ಸ್ಥಳವನ್ನು ಕೋವಿಡ್ ಸಮಯದ ದಸರಾ ವೇಳೆ ವಿದ್ಯುತ್ ದೀಪಗಳ ಅಲಂಕಾರದಿಂದ ಕಂಗೊಳಿಸುವಂತೆ ಮಾಡಿ, ರಸಸಂಜೆ ಕಾರ್ಯಕ್ರಮವನ್ನು ಆಯೋಜನೆ ಮಾಡುವ ಮೂಲಕ ಜನರನ್ನು ಆಕರ್ಷಿಸುವಂತೆ ಮಾಡಲಾಗಿತ್ತು. ಆದರೆ ಇದೀಗ ಸಾರ್ವಜನಿಕರು ಅತಿ ಹೆಚ್ಚಾಗಿ ಓಡಾಡುವ ಪಟ್ಟಣದ ಮುಖ್ಯ ರಸ್ತೆ ಹಾಗೂ ಸರ್ಕಾರಿ ಕಟ್ಟಡಗಳನ್ನು ದೀಪಗಳಿಂದ ಶೃಂಗರಿಸಲಾಗಿದ್ದು, ಇತಿಹಾಸ ಹಿನ್ನೆಲೆಯುಳ್ಳ ಈ ಎರಡು ಸ್ಥಳಗಳನ್ನು ಮರೆತಿದೆ.

ಕೋಟೆ ನಿರ್ಲಕ್ಷ್ಯ: ಪಟ್ಟಣದ ಎಲ್ಲಾ ಕೋಟೆಗಳನ್ನು ಸಹ ನಿರ್ಲಕ್ಷಿಸಲಾಗಿದೆ. ಕನಿಷ್ಠ ಪಕ್ಷ ಕೋಟೆಗಳ ಮೇಲ್ಭಾಗ ಹಾಗೂ ಸುತ್ತಲು ಬೆಳೆದಿದ್ದ ಗಿಡಗಂಟಿ, ಕೋಟೆ ಕೆಳಗಡೆ ಅಶುಚಿತ್ವದಿಂದ ಗಬ್ಬುನಾರುತ್ತಿರುವುದನ್ನು ಸ್ವಚ್ಛಗೊಳಿಸದೆ, ತರಾತುರಿಯಲ್ಲಿ ಕೋಟೆಗಳ ಗೋಡೆಯ ಮೇಲೆ ಹಳೆಯ ಬಣ್ಣ–ಬಣ್ಣದ ಬಟ್ಟೆ ಹಾಕಿ ತೇಪೆ ಹಾಕಿರುವುದು ಕಂಡುಬಂದಿದೆ.

ಮರೆಯಾದ ಕ್ರೀಡೆ: ಅಪ್ಪಟ ದೇಸಿ ಕ್ರೀಡೆಗಳಾದ ಕೆಸರುಗದ್ದೆ ಓಟ, ಕಬಡ್ಡಿ, ಸ್ಲೋ ಸೈಕಲ್ ರೇಸ್, ಜಲಕ್ರೀಡೆ ಜೊತೆಗೆ ಚೆಸ್ ಹಾಗೂ ಕರಾಟೆ ಸ್ಪರ್ಧೆ ಸೇರಿದಂತೆ ಹಲವಾರು ದೇಸಿ ಕ್ರೀಡೆಗಳು ಮರೆಯಾಗಿವೆ. ಈ ಹಿಂದಿನ ಶ್ರೀರಂಗಪಟ್ಟಣ ದಸರಾ ಆಚರಣೆಗಳಲ್ಲಿ ಪುರುಷ ಹಾಗೂ ಮಹಿಳೆಯರ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿ, ಕೆಸರುಗದ್ದೆ ಓಟ ಸೇರಿದಂತೆ ಇತರೆ ಕ್ರೀಡೆಗಳು ಕ್ರೀಡಾಸಕ್ತರ ಗಮನ ಸೆಳೆದು ಉತ್ಸಾಹ ತುಂಬಿತ್ತು. ಆದರೆ ಈ ಬಾರಿ ಕೇವಲ ಬೆರಳೆಣಿಕೆಯಷ್ಟು ಕ್ರೀಡೆಗಳನ್ನು ಆಯೋಜಿಸಿರುವುದರಿಂದ ಕ್ರೀಡಾಸಕ್ತರಲ್ಲಿ ಬೇಸರ ಮೂಡಿಸಿದೆ.

ಶ್ರೀರಂಗಪಟ್ಟಣದಲ್ಲಿ ದಸರಾ ನಾಡ ಕುಸ್ತಿ



ಶ್ರೀರಂಗಪಟ್ಟಣ,ಅ.6– ಶ್ರೀರಂಗಪಟ್ಟಣ ಪಾರಂಪರಿಕ ದಸರಾ ಅಂಗವಾಗಿ ಏರ್ಪಡಿಸಿದ್ದ ಕಾಟಾ ಕುಸ್ತಿ ಪಂದ್ಯಾವಳಿಯಲ್ಲಿ ಪೈಲ್ವಾನರು ಪಟ್ಟುಗಳನ್ನು ಪ್ರದರ್ಶಿಸಿ, ಕುಸ್ತಿ ಪ್ರೇಮಿಗಳ ಮನಗೆದ್ದರು.

ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ನಡೆದ ದಸರಾ ನಾಡ ಕುಸ್ತಿ ಪಂದ್ಯಾವಳಿಗೆ ಶಾಸಕ ರಮೇಶ ಬಂಡಿಸಿದ್ದೇಗೌಡ ಪೈಲ್ವಾನರ ಬೆನ್ನುತಟ್ಟುವ ಮೂಲಕ ಚಾಲನೆ ನೀಡಿದರು. ಶ್ರೀರಂಗಪಟ್ಟಣ ತಾಲೂಕಿನ ಬಾಬುರಾಯನಕೊಪ್ಪಲು, ಗಂಜಾಂ, ಮಂಡ್ಯ, ಮೈಸೂರು, ಚಾಮರಾಜನಗರ, ಶಿವಮೊಗ್ಗ, ಬೆಳಗಾಂ ಸೇರಿದಂತೆ ಇತರೆಡೆಗಳಿಂದ ಸುಮಾರು 52 ಕ್ಕೂ ಹೆಚ್ಚು ಕಾಟಾ ಕುಸ್ತಿ ಪೈಲ್ವಾನರು ಆಗಮಿಸಿದ್ದರು. ಗೆಲುವಿಗಾಗಿ ಕೆಮ್ಮಣ್ಣು ಮಟ್ಟಿ ಮೇಲೆ ನಿಂತ ಪೈಲ್ವಾನರು ಸೆಣಸಾಡಿ, ತೋಳು, ತೊಡೆ ತಟ್ಟಿ ಎದುರಾಳಿಯ ಮೈ ಮೇಲೆ ಬಿದ್ದು ಗೆಲುವು ಸಾಧಿಸಿದರು.

ಈ ವೇಳೆ ಜಿಲ್ಲಾಧಿಕಾರಿ ಡಾ.ಕುಮಾರ್, ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ, ಜಿ.ಪಂ ಸಿಇಓ ಶೇಖ್ ತನ್ವೀರ್ ಆಸೀಫ್, ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಓಂ ಪ್ರಕಾಶ್, ಅಡಿಷನಲ್ ಎಸ್‌ಪಿ ಸಿ.ಇ ತಿಮ್ಮಯ್ಯ, ತಹಸೀಲ್ದಾರ್ ಪರಶುರಾಮ್ ಸತ್ತಿಗೇರಿ, ಡಿವೈಎಸ್‌ಪಿ ಮುರಳಿ, ತಾ.ಪಂ ಇಓ ವೇಣು, ಮುಖ್ಯಾಧಿಕಾರಿ ಎಂ.ರಾಜಣ್ಣ ವಾರ್ತಾ ಇಲಾಖೆ ಅಧಿಕಾರಿ ನಿರ್ಮಲಾ ಸೇರಿದಂತೆ ಹೆಸರಾಂತ ಪೈಲ್ವಾನರುಗಳು ಇದ್ದರು.

ಮೂಲಸೌಕರ್ಯದ ಕೊರತೆ: ಕುಸ್ತಿ ಪಟುಗಳು ಬಟ್ಟೆ ಬದಲಾಯಿಸಿಕೊಳ್ಳಲು ಸೂಕ್ತ ಮೂಲಸೌಕರ್ಯ ಕಲ್ಪಿಸದ ಕಾರಣ ಕುಸ್ತಿ ಪಟುಗಳು ಬಯಲಿನಲ್ಲೆ ತಮ್ಮ ಬಟ್ಟೆ ಬದಲಾಯಿಸಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಯಿತು.

ಚಿಕ್ಕ ಮಕ್ಕಳಿಂದ ಹಿಡಿದು ವಯಸ್ಕರವರೆವಿಗೂ ಇದೇ ಪರಿಸ್ಥಿತಿ ನಿರ್ಮಾಣವಾಗಿತ್ತು. ಚಿಕ್ಕಮಕ್ಕಳು ಬಯಲಿನಲ್ಲೇ ಬಟ್ಟೆ ಬದಲಾಯಿಸಿಕೊಂಡರೆ, ದೊಡ್ಡವರು ತಮ್ಮ ಪೋಷಕರು ಹಾಗೂ ಸಹ ಪಟುಗಳಿಂದ ಸುತ್ತುವರಿಸಿಕೊಂಡು ಬಟ್ಟೆ ಬದಲಾಯಿಸಿಕೊಂಡರು. ಮತ್ತೆ ಕೆಲವರು ಟ್ರ್ಯಾಕ್ಟರ್, ಕಾಂಪೌಂಡ್ ಸೇರಿದಂತೆ ಇತರೆ ಸ್ಥಳಗಳ ಮರೆಯಲ್ಲಿ ಬಟ್ಟೆ ಬದಲಾಯಿಸಿಕೊಳ್ಳುವಂತಾಯಿತು.

ಶ್ರೀ ಶಿವಶೈಲದಲ್ಲಿ ಶಾಸಕ ಜಿಟಿಡಿ ಸುದರ್ಶನ ಹೋಮ

ಪಾಂಡವಪುರ,ಅ.6–ತಾಲೂಕಿನ ಪಟ್ಟಸೋಮನಹಳ್ಳಿ ಗ್ರಾಮದ ಹೊರವಲಯದಲ್ಲಿರುವ ಶ್ರೀಶಿವಶೈಲ ದೇವಾಲಯದ ಆವರಣದಲ್ಲಿ ಶರನ್ನವರಾತ್ರಿ ಕಾರ್ಯಕ್ರಮಗಳು ಆರಂಭಗೊಂಡಿದ್ದು, ಮಾಜಿ ಸಚಿವರೂ ಆದ ಮೈಸೂರು ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡರು ತಮ್ಮ ಕುಟುಂಬ ಸಮೇತರಾಗಿ ಪಾಲ್ಗೊಂಡು ಸುದರ್ಶನ ಹೋಮ ನಡೆಸಿದರು.



ಶ್ರೀಶಿವಶೈಲ ದೇವಸ್ಥಾನದಲ್ಲಿ ಶರನ್ನವರಾತ್ರಿ ಪ್ರಯುಕ್ತ ಶಾಸಕ ಜಿ.ಟಿ.ದೇವೇಗೌಡರು ಕುಟುಂಬ ಸಮೇತರಾಗಿ ಸುದರ್ಶನ ಹೋಮ ನಡೆಸಿದರು.

ಇಲ್ಲಿನ ಕಾಮಾಕ್ಷಿ ಚಂದ್ರಮೌಳೇಶ್ವರ ದೇವಾಲಯದಲ್ಲಿ ನವರಾತ್ರಿ ಮಹೋತ್ಸವದ ಅಂಗವಾಗಿ ಒಂಭತ್ತು ದಿನಗಳ ಕಾಲ ವಿವಿಧ ಹೋಮ–ಹವನಗಳು ನಡೆಯಲಿದ್ದು, ನವರಾತ್ರಿಯ ಮೂರನೇ ದಿನವಾದ ಶನಿವಾರ ಮಹಾಸುದರ್ಶನ ಹೋಮದಲ್ಲಿ ಪಾಲ್ಗೊಂಡು ವಿಶೇಷ ಪೂಜೆ ಸಲ್ಲಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಹಲವು ವರ್ಷಗಳಿಂದ ಇಲ್ಲಿ ನಡೆಯುವ ನವರಾತ್ರಿ ಮಹೋತ್ಸವ ದಲ್ಲಿ ಪಾಲ್ಗೊಳ್ಳುತ್ತಿದ್ದೇವೆ. ದೇವಿಯಲ್ಲಿ ಪ್ರಾರ್ಥಿಸಿ ಮಹಾಸುದರ್ಶನ ಹೋಮ ಸೇರಿದಂತೆ ಇತರೆ ವಿಶೇಷ ಪೂಜೆಗಳನ್ನು ಸಲ್ಲಿಸಲಾಗಿದ್ದು, ಸಂಕಷ್ಟ ನಿವಾರಣೆಯಾಗಬೇಕು ಹಾಗೂ ದೇಶ ಸುಭಿಕ್ಷವಾಗಿರಬೇಕೆಂಬ ಆಶಯದಿಂದ ಪ್ರಾರ್ಥಿಸಲಾಗಿದೆ ಎಂದರು.

ನವರಾತ್ರಿ ಆಚರಣೆಗಳು ಬಹಳ ಮಹತ್ವ ಹೊಂದಿದ್ದು, ನಿಯಮ, ನಂಬಿಕೆ ಮತ್ತು ವಿಶ್ವಾಸಗಳಿಗೆ ಶರಣಾಗುವುದರಿಂದ ಅರ್ಥಪೂರ್ಣವಾದ ಬದುಕಿಗೆ ನಾಂದಿ ಹಾಡಬಹುದಾಗಿದೆ. ಈ ಬಾರಿ ದಸರಾ ಅದ್ದೂರಿಯಾಗಿ ಆಚರಣೆಯಾಗುತ್ತಿದೆ. ಹಾಗಾಗಿ ನಾಡು ಸುಭಿಕ್ಷವಾಗಿರಲಿ, ಕಾಲಕಾಲಕ್ಕೆ ಮಳೆ ಬೆಳೆಯಾಗಿ ರೈತರ ಕಲ್ಯಾಣವಾಗಲಿ, ಮೈಸೂರು ದಸರಾ ಯಶಸ್ವಿಯಾಗಲೆಂದು ಪ್ರಾರ್ಥಿಸಿ ಹೋಮದಲ್ಲಿ ಪಾಲ್ಗೊಂಡಿರುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ನಿವೃತ್ತ ನ್ಯಾಯಾಧೀಶ ಶಿವಶೈಲ ದತ್ತಿ ಧಾರ್ಮಿಕ ಸಂಸ್ಥೆಯ ಮುಖ್ಯಸ್ಥರಾದ ಸಿ.ಶಿವಪ್ಪ, ಪುತ್ರ ಡಾ||ಸಿ.ಎಸ್. ರಾಜೇಶ್, ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳಿ ಮಾಜಿ ಅಧ್ಯಕ್ಷೆ ಶ್ರೀಮತಿ ಲಲಿತಾ ದೇವೇಗೌಡ, ವಿಧಾನ ಪರಿಷತ್ ಸದಸ್ಯ ವಿವೇಕಾನಂದ, ಜಿ.ಟಿ.ಡಿ. ಸಹೋದರ ಯಧುವರ್, ಜಿ.ಟಿ.ಡಿ. ಪುತ್ರಿ ಅನ್ನಪೂರ್ಣ ವಿಶ್ವೇಶ್ವರಯ್ಯ, ಯಶೋಧ, ಮಹಾ ಲಕ್ಷ್ಮೀ ಸ್ವಿಟ್ ಮಾಲೀಕ ಶಿವಕುಮಾರ್, ವಕೀಲ ಪಾಲಾಕ್ಷ, ಜಿಪಂ ಮಾಜಿ ಸದಸ್ಯೆ ಚಂದ್ರಿಕಾ ಸುರೇಶ್, ಬಿಜೆಪಿ ಮುಖಂಡ ರೈಸ್‌ಮಿಲ್ ತಮ್ಮಣ್ಣ, ಬೆಳವಾಡಿ ರವಿ, ಎಚ್.ಎನ್.ವಿಜಯ್, ಶಂಭುಲಿಂಗೇಗೌಡ, ಭರತ್, ಗಿರೀಶ್‌ಬಾಬು, ಜಿ.ಟಿ.ಡಿ. ಆಪ್ತ ಕಾರ್ಯದರ್ಶಿ ಹರೀಶ್, ಪ್ರಧಾನ ಅರ್ಚಕರಾದ ದತ್ತಾತ್ರೇಯಾ ಭಟ್, ಶಿವಶೈಲ ಮ್ಯಾನೇಜರ್ ನಂಜುಂಡೇಗೌಡ, ಹಾಗೂ ಭಕ್ತರು ಪಾಲ್ಗೊಂಡಿದ್ದರು.

ಕಾರು ಡಿಕ್ಕಿ: ಬೈಕ್ ಸವಾರ ಸಾವು



ಭಾರತೀನಗರ.ಅ.6– ಅಪರಿಚಿತ ಕಾರೊಂದು ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಮೃತಪಟ್ಟಿರುವ ಘಟನೆ ದೇವರಹಳ್ಳಿ ಗೇಟ್ ಬಳಿ ನಡೆದಿದೆ.

ಕರಡಕೆರೆ ಗ್ರಾಮದ ಕೆ.ಬಿ.ನಾಗಣ್ಣ(55) ಮೃತ ದುರ್ದೈವಿ. ಹನುಮಂತನಗರದಲ್ಲಿ ವಾಸವಿದ್ದ ನಾಗಣ್ಣ ತಮ್ಮ ಗದ್ದೆಯಿಂದ ಮನೆಗೆ ಬೈಕ್‌ನಲ್ಲಿ ಹಿಂತಿರುಗುತ್ತಿದ್ದಾಗ ಕಾರೊಂದು ಡಿಕ್ಕಿ ಹೊಡೆದು ಪರಾರಿಯಾಗಿದೆ. ಗಂಭೀರವಾಗಿ ಗಾಯಗೊಂಡು ಬಿದ್ದಿದ್ದ ನಾಗಣ್ಣ ಅವರನ್ನು ತಕ್ಷಣ ಸ್ಥಳೀಯ ಜಿ.ಮಾದೇಗೌಡ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ನಾಗಣ್ಣ ಮೃತಪಟ್ಟಿದ್ದಾರೆ.

ಕೆ.ಎಂ.ದೊಡ್ಡಿಯ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮೃತರ ಪಂಚನಾಮೆ ನಡೆಸಿ ನಂತರ ವಾರಸುದಾರರಿಗೆ ಮೃತದೇಹವನ್ನು ಹಸ್ತಾಂತರಿಸಲಾಯಿತು.

ಈ ಸಂಬಂಧ ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಗೆ ಸಂಬಂಧಿ ಸತೀಶ್ ದೂರು ನೀಡಿದ್ದಾರೆ. ದೂರಿನ ಮೇರೆಗೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮಕೈಗೊಂಡಿದ್ದಾರೆ. ಮೃತರು ಪತ್ನಿ ಅಶ್ವಿನಿ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮವಾದ ಕರಡಕೆರೆ ಗ್ರಾಮದ ರುದ್ರಭೂಮಿಯಲ್ಲಿ ಜರುಗಿತು.

ವೆಂಕಟೇಗೌಡ ನಿಧನ



ಭಾರತೀನಗರ.ಅ.6– ಭಾರತೀನಗರ ಮಂಡಲ ಪಂಚಾಯಿತಿ ಮಾಜಿ ಪ್ರಧಾನರಾದ ಹಾಗೂ ಶ್ರೀ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯ ನಿವೃತ್ತ ನೌಕರರಾಗಿದ್ದ ವೆಂಕಟೇಗೌಡ(80) ಹೃದಯಾಘಾತದಿಂದ ಮೃತಪಟ್ಟಿದ್ದಾರೆ. ಮೃತರು ಪತ್ನಿ ಪುಷ್ಪ, ಓರ್ವ ಪುತ್ರ, ಪುತ್ರಿಯರು ಸೇರಿದಂತೆ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ.

ಮೃತರ ಅಂತ್ಯಸಂಸ್ಕಾರ ಸ್ವಗ್ರಾಮದ ಕೆ.ಎಂ.ದೊಡ್ಡಿಯ ತಮ್ಮ ಜಮೀನಿನಲ್ಲಿ ಸೋಮವಾರ ಬೆಳಿಗ್ಗೆ 11 ಗಂಟೆಗೆ ಜರುಗಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಕ್ಯಾಶ್‌ಲೆಸ್ ಟಿಕೆಟ್

ಎಂದು ಸಂಸ್ಥೆಯ ಅಧಿಕಾರಿಗಳು ಮಾಹಿತಿ ನೀಡಿ ದ್ದಾರೆ. ಕಳೆದ ಜೂನ್‌ನಲ್ಲಿಯೇ ಈ ವ್ಯವಸ್ಥೆ ಜಾರಿಯಾಗ ಬೇಕಿತ್ತು. ಆದರೆ, ಕಾರಣಾಂತರ ಗಳಿಂದ ಸಾಧ್ಯವಾಗಿರಲಿಲ್ಲ. ಆದರೆ ಈಗ ಕಾಲ ಕೂಡಿ ಬಂದಿದ್ದು ಟಿಕೆಟ್ ವಿತರಣಾ ಯಂತ್ರ ಗಳನ್ನು ಪೂರ್ಣ ಪ್ರಮಾಣದಲ್ಲಿ ಬದಲಾಯಿಸಿ ಜಾರಿಗೆ ತರಲಾಗುತ್ತಿದೆ. ಈಗಿರುವ ಟಿಕೆಟ್ ವಿತರಣಾ ಯಂತ್ರಗಳನ್ನು ಬದಲಾಯಿಸಿ, ಇದೇ ಮೊದಲ ಬಾರಿಗೆ ನಿರ್ವಾಹಕರಿಗೆ ಆಂಡ್ರಾಯ್ಡ್ ಸೌಲಭ್ಯದ ಸ್ಮಾರ್ಟ್ ವಿದ್ಯುನ್ಮಾನ ಟಿಕೆಟ್ ಯಂತ್ರ(ಇಟಿಎಂ) ನೀಡಲಾಗುತ್ತಿದೆ. ಈಗಾಗಲೇ 45 ಡಿಪೋಗಳಿಗೆ ಈ ಯಂತ್ರಗಳನ್ನು ಒದಗಿಸಲಾಗಿದೆ. ಅಕ್ಟೋಬರ್ ಅಂತ್ಯಕ್ಕೆ ಎಲ್ಲ 84 ಡಿಪೋಗಳಿಗೆ 10240 ಯಂತ್ರಗಳನ್ನು ನೀಡುವುದಾಗಿ ತಿಳಿಸಿದರು.

ಮೊದಲ ಹಂತದಲ್ಲಿ ಈ ವಿದ್ಯುನ್ಮಾನ ಯಂತ್ರಗಳಲ್ಲಿ ನಗದು ರಹಿತ ಟಿಕೆಟ್ ವ್ಯವಸ್ಥೆಯ ಸಾಫ್ಟ್‌ವೇರ್ ಅಳವಡಿಸಿ, ಅದರ ಕಾರ್ಯ ನಿರ್ವಹಣೆ, ಸಾಧಕ – ಬಾಧಕಗಳನ್ನು ಪರಿಶೀಲಿಸಲಾಗುವುದು. ಆನಂತರ ಎಲ್ಲಾ ಬಸ್‌ಗಳಲ್ಲಿ ಈ ವ್ಯವಸ್ಥೆ ಜಾರಿಗೆ ತರಲಾಗುವುದು. ಈ ಯಂತ್ರಗಳ ಬಳಕೆಗೆ ಸಂಬಂಧಿಸಿದಂತೆ ನಿರ್ವಾಹಕರು, ಸಿಬ್ಬಂದಿಗೆ ತರಬೇತಿ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಡ್ರೋನ್‌ಗಳು; ಮನಸೋತ ಪ್ರೇಕ್ಷಕರು

ಲೇಸರ್ ಶೋ: ಡ್ರೋನ್ ಪ್ರದರ್ಶನದ ನಂತರ ಲೇಸರ್ ಶೋನಿಂದ ನೆರೆದಿದ್ದವರ ಸಂಭ್ರಮ ಇಮ್ಮಡಿಗೊಂಡಿತು. ಕರ್ನಾಟಕ ಸುವರ್ಣ ಮಹೋತ್ಸವ ಸಂಭ್ರಮದ ಹಿನ್ನೆಲೆಯಲ್ಲಿ ರಾಜ್ಯದ ವೈಭವವನ್ನು ಲೇಸರ್ ಶೋ ಮೂಲಕ ಸ್ಮರಿಸಿಕೊಳ್ಳಲಾಯಿತು. ಮೈಸೂರು ಅರಮನೆ, ವಿಜಯನಗರದ ಕಲ್ಲಿನ ರಥ, ಶಿಲಾಬಾಲಕಿ, ಸೋಮನಾಥಪುರ ಚೆನ್ನಕೇಶವ ದೇವಾಲಯ, ಶ್ರವಣ ಬೆಳಗೊಳ ಏಕಶಿಲಾ ಗೊಮ್ಮಟೇಶ್ವರ ಮೂರ್ತಿ, ಮಲೆ ಮಹದೇಶ್ವರ ಸ್ವಾಮಿ ದೇವಾಲಯ, ಗೋಲಗುಮ್ಮಟ, ಜೋಗ ಜಲಪಾತ, ಯಕ್ಷಗಾನ, ಉಳುಮೆ ಮಾಡುತ್ತಿರುವ ರೈತ, ಜ್ಞಾನಪೀಠ ಪುರಸ್ಕೃತ ಸಾಹಿತಿಗಳು, ಸರ್.ಎಂ.ವಿಶ್ವೇಶ್ವರಯ್ಯ, ಡಾ.ರಾಜ್‌ಕುಮಾರ್, ಪುನೀತ್ ರಾಜ್‌ಕುಮಾರ್, ವಿಧಾನಸೌಧ, ರಾಜ್ಯ ಸರ್ಕಾರದ ಗ್ಯಾರಂಟಿ ಕಾರ್ಯಕ್ರಮಗಳು ಲೇಸರ್ ಬೆಳಕಿನಲ್ಲಿ ಮೂಡಿಬಂದವು.

ಮೊದಲ ಪ್ರಯತ್ನ: ಹಿಂದಿನ ವರ್ಷಗಳಲ್ಲಿ ಪಂಜಿನ ಕವಾಯತು ವೇಳೆ ಡ್ರೋನ್ ಪ್ರದರ್ಶನ ನಡೆದಿತ್ತು. ಆದರೆ ಇದೇ ಮೊದಲ ಬಾರಿಗೆ 1500 ಡ್ರೋನ್ ಬಳಸಿ ವಿವಿಧ ವಿನ್ಯಾಸಗಳನ್ನು ರಚಿಸಲಾಗಿತ್ತು. ಸೆಸ್ಕ್ ಹಾಗೂ ಬಾಟ್ ಲ್ಯಾಬ್ ಡೈನಮಿಕ್ ಸಂಸ್ಥೆ ಸಹಯೋಗದೊಂದಿಗೆ ಆಯೋಜಿಸಿದ್ದ ಡ್ರೋನ್ ಪ್ರದರ್ಶನ ರಾತ್ರಿ 8.45ಕ್ಕೆ ಆರಂಭವಾಗಿ 15 ನಿಮಿಷ ನೆರೆದಿದ್ದವರನ್ನು ಸಮ್ಮೋಹನಗೊಳಿಸಿತು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಜ್ಯೋತಿ ಬೆಳಗುವ ಮೂಲಕ ಡ್ರೋನ್ ಶೋಗೆ ಚಾಲನೆ ನೀಡಿದರು. ಈ ವೇಳೆ ಶಾಸಕರಾದ ತನ್ವೀರ್ ಸೇಠ್, ನರೇಂದ್ರ ಸ್ವಾಮಿ, ಸೆಸ್ಕ್ ನಿಗಮದ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕಿ ಜಿ.ಶೀಲಾ, ತಾಂತ್ರಿಕ ವಿಭಾಗದ ನಿರ್ದೇಶಕ ಕೆ.ಎಂ.ಮುನಿಗೋಪಾಲ್ ರಾಜು, ದಸರಾ ದೀಪಾಲಂಕಾರ ಉಪ ಸಮಿತಿ(ಅಧಿಕಾರೇತರ) ಅಧ್ಯಕ್ಷ ಸೈಯದ್ ಇಕ್ಬಾಲ್, ಉಪಾಧ್ಯಕ್ಷರಾದ ಸುಹೇಲ್ ಬೇಗ್, ಕಾಂತರಾಜ್ ಮತ್ತಿತರರು ಉಪಸ್ಥಿತರಿದ್ದರು.

ರಾಜೇಶ್ ಕೃಷ್ಣನ್ ಗಾಯನ ಮೋಡಿ



ಡ್ರೋನ್ ಪ್ರದರ್ಶನಕ್ಕೂ ಮುನ್ನ ನೆರೆದಿದ್ದವರು ಜನಪ್ರಿಯ ಗಾಯಕ ರಾಜೇಶ್ ಕೃಷ್ಣನ್ ಹಾಡಿನ ಮೋಡಿಯಲ್ಲಿ ತೇಲಿದರು. 'ಉಸಿರೇ ಉಸಿರೇ ನೀ ಉಸಿರ ಚೆಲ್ಲಬೇಡ...' 'ಜೊತೆಯಲಿ ಜೊತೆ ಜೊತೆಯಲಿ...', 'ಯಾರೋ ಕಣ್ಣಲ್ಲಿ ಕಣ್ಣನಿಟ್ಟು...', 'ಕುಚಿಕ್ಕು ಕುಚ್ಚಿಕು...', 'ಕೂರಕ್ ಕುಕ್ಕರಹಳ್ಳಿಕೆರೆ ಸೇರಿದಂತೆ ಹಲವು ಗೀತೆಗಳಿಂದ ರಂಜಿಸಿದರು. ನೂರು ಜನ್ಮಕೂ ನೂರಾರು ಜನ್ಮಕೂ..., ಕೇಳದೆ ನಿಮಗೀಗ ದೂರದಲ್ಲಿ ಯಾರೋ..., ಪ್ರೇಮ ಲೋಕದ ಪಾರಿಜಾತವೇ... ಒಂದೇ ಉಸಿರಂತೆ ಇಂದು ನಾನು ನೀನು... ಆಡಿಸಿ ನೋಡು ಬೀಳಿಸಿ ನೋಡು... ಬೊಂಬೆ ಹೇಳುತ್ತೈತೆ ಮತ್ತೆ ಹೇಳುತ್ತೈತೆ ನೀನೆ ರಾಜಕುಮಾರ... ಸಾಲುಗಳನ್ನು ಗುನುಗಿದರು. ಸೆಸ್ಕ್ ಅಧಿಕಾರಿ ಅನಿತಾ ಹಾಗೂ ರಾಜೇಶ್ ಕೃಷ್ಣನ್ ಜೊತೆಗೂಡಿ 'ನಗುವಾ ನಯನಾ ಮಧುರಾ ಮೌನ...' ಗೀತೆ ಪ್ರಸ್ತುತಪಡಿಸಿದರು. ತಂಡದ ಇತರೆ ಗಾಯಕರು ಹಾಗೂ ನೃತ್ಯಗಾರರು ಪ್ರೇಕ್ಷಕರನ್ನೂ ಕುಣಿಸುವಲ್ಲಿ ಯಶಸ್ವಿಯಾದರು.

ಯುವ ದಸರಾ ಸಂಗೀತ, ನೃತ್ಯ ರಸದೌತಣಕ್ಕೆ ಚಾಲನೆ




ಜನರ ಸುರಕ್ಷತೆಯನ್ನು ಕಾಪಾಡುವಲ್ಲಿ ನಮ್ಮ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರವು ಸದಾ ನಿಮ್ಮ ಜೊತೆಯಲ್ಲಿರುತ್ತದೆ ಎಂದು ತಿಳಿಸಿದರು.

ಸೂಕ್ತ ಸ್ಥಳ: ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಚಾಮುಂಡೇಶ್ವರಿ ಹಾಗೂ ಉತ್ತನಹಳ್ಳಿ ತ್ರಿಪುರ ಸುಂದರಿ ದೇವಿಯ ಸನ್ನಿಧಿಯ ಆವರಣದಲ್ಲಿ ಯುವ ದಸರಾ ಕಾರ್ಯಕ್ರಮ ಆಯೋಜಿಸಲಾಗಿದೆ. ಯುವ ದಸರಾಗೆ ಲಕ್ಷ ಲಕ್ಷ ಯುವಕ–ಯುವತಿಯರು, ಹಿರಿಯರು ಬರುತ್ತಿದ್ದಾರೆ. ಖ್ಯಾತ ಸಂಗೀತಗಾರರು ಬರುತ್ತಿದ್ದಾರೆ. ರಾಷ್ಟ್ರದ ಸಂಗೀತ ಕಲೆಯನ್ನು ಉಳಿಸಿ ಬೆಳೆಸಿರುವ ಇಳಯರಾಜ ರಂತಹವರು ಬರುತ್ತಿದ್ದಾರೆ. ಆದ್ದರಿಂದ ಮಹಾರಾಜ ಕಾಲೇಜು ಮೈದಾನ ಚಿಕ್ಕದು, ಈ ಸ್ಥಳವೇ ಸೂಕ್ತವೆಂದು ಇಲ್ಲಿ ಆಯೋಜನೆ ಮಾಡಲಾಗಿದೆ ಎಂದರು.

ಚಾಮರಾಜನಗರ ಕ್ಷೇತ್ರದ ಸಂಸದ ಸುನೀಲ್ ಬೋಸ್, ರಾಜ್ಯ ಗ್ಯಾರೆಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಪುಷ್ಪ ಅಮರನಾಥ್, ಶಾಸಕರಾದ ತನ್ವೀರ್ ಸೇಠ್, ಡಾ.ತಿಮ್ಮಯ್ಯ, ಕೆ.ಹರೀಶ್‌ಗೌಡ, ಅನಿಲ್ ಚಿಕ್ಕಮಾದು, ಸಿ.ಎನ್.ಮಂಜೇಗೌಡ, ಗಣೇಶ್ ಪ್ರಸಾದ್, ರವಿಶಂಕರ್, ಕೆ.ವಿವೇಕಾನಂದ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ, ಡಿಐಜಿ ಬೋರಲಿಂಗಯ್ಯ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಎಸ್‌ಪಿ ಎನ್.ವಿಷ್ಣುವರ್ಧನ್, ಜಿಪಂ ಸಿಇಓ ಕೆ.ಎಂ. ಗಾಯತ್ರಿ ಮತ್ತಿತರರು ಉಪಸ್ಥಿತರಿದ್ದರು.

ಸಂಗೀತ ಮುನ್ನುಡಿ: ಯುವ ದಸರಾ ಮೆಗಾ ಕಾರ್ಯಕ್ರಮಕ್ಕೆ ಮುನ್ನುಡಿ ಎಂಬಂತೆ ಗಾಯಕ ಅಮ್ಮ ರಾಮಚಂದ್ರ ಮತ್ತು ತಂಡ 'ಭೂಮಿ ತಾಯಿಯೇ ನಿನಗೆ ವಂದನೆ' ಎಂದು ವಂದಿಸುತ್ತಾ,



ಗಾಯಕ ವಾಸುಕಿ ವೈಭವ್ ಗಾಯನ



ಜಾನ್ವಿ ರಾಯಲ್ ಮತ್ತು ತಂಡದಿಂದ ನೃತ್ಯ ಪ್ರದರ್ಶನ

'ತಿಂಗಾಳು ಮುಳುಗಿದವೋ ರಂಗೋಲಿ ಬೆಳಗಿದವೋ ತಾಯಿ ಚಾಮುಂಡಿಯ ಪೂಜೆಗೆಂದು ಬಾಳೆ ಬಾಗಿದವು', 'ಚೆಲ್ಲಿದರೂ ಮಲ್ಲಿಗೆಯಾ', 'ಹಾಡಿರಿ ರಾಗಗಳ ನುಡಿಸಿರಿ ತಾಳಗಳ', 'ಮರೆಯೋದುಂಟೆ ಮೈಸೂರು ದೊರೆಯ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯ', ಗುಡಿಸಲ ಜ್ಯೋತಿ ಊರರ ಸುತ್ತಿ', 'ಒಲಿದು ಬಾರಮ್ಮಯ್ಯ ಒಲಿದು ಬಾರೇ ಬೆಟ್ಟಾದ ಚಾಮುಂಡಿ ಒಲಿದು ಬಾರೇ'... ಎಂದು ಹಾಡುತ್ತಾ ನಾಡದೇವಿಯನ್ನು ಸ್ಮರಿಸಿ ಯುವ ದಸರಾಗೆ ಮುನ್ನುಡಿ ಬರೆದರು.

ಇದು ನಮ್ಮ ನಾಡು ನಮ್ಮ ಹಬ್ಬ...

ಇದು ನಮ್ಮ ನಾಡು ನಮ್ಮ ಹಬ್ಬ. ಇದನ್ನು ಹೆಮ್ಮೆಯಿಂದ ಆಚರಿಸೋಣ. ಈ ಹಬ್ಬವು ಶ್ರದ್ಧೆ, ಭಕ್ತಿ, ಧೈರ್ಯವನ್ನು ಸೂಚಿಸುತ್ತದೆ ಮತ್ತು ಕೆಟ್ಟದರ ಮೇಲೆ ಒಳ್ಳೆಯ ಆಲೋಚನೆಯ ವಿಜಯವನ್ನು ಸಂಕೇತಿಸುತ್ತದೆ. ಇಂದಿನ ನಮ್ಮ ಯುವಕರು ನಾಳಿನ ಸಮಾಜವನ್ನು ಮುನ್ನಡೆಸುವವರು. ನಮ್ಮ ಸಂಸ್ಕೃತಿ ಮತ್ತು ನಮ್ಮ ಸಮಾಜವನ್ನು ಕಾಪಾಡುವ ಶಕ್ತಿ ಅವರಲ್ಲಿದೆ ಎಂಬ ಅಭಿಪ್ರಾಯ ನನ್ನದಾಗಿದೆ.

- ಶ್ರೀಮತಿ ಅಶ್ವಿನಿ ಪುನೀತ್ ರಾಜ್‌ಕುಮಾರ್

ಮಹಿಳೆಯರ ಸುರಕ್ಷತೆ ನಮ್ಮೆಲ್ಲರ ಜವಾಬ್ದಾರಿ...

ಮೈಸೂರಿನ ಮತ್ತು ನಾಡಿನ ಸಂಸ್ಕೃತಿಯ ಮೌಲ್ಯವನ್ನು ಎತ್ತಿ ಹಿಡಿಯಲು 80 ಎಕರೆ ವಿಸ್ತೀರ್ಣವುಳ್ಳ ಜಾಗದಲ್ಲಿ ಲಕ್ಷಕ್ಕೂ ಅಧಿಕ ಜನರ ಮನಸುಗಳ ಉಲ್ಲಾಸಗೊಳಿಸಲೆಂದು ಮೊದಲ ಬಾರಿಗೆ 'ಯುವ ದಸರಾ' ಸಂಘಟನೆ ಮಾಡಲಾಗಿದೆ. ಮಹಿಳೆಯರಿಗೆ ಸಹಕರಿಸಿ, ಅವರೆಲ್ಲಾ ಸುರಕ್ಷಿತವಾಗಿ ಮನೆ ಸೇರುವಂತೆ ನೋಡಿಕೊಳ್ಳುವುದು ನಮ್ಮೆಲ್ಲಾ ಯುವಕರು ಮತ್ತು ಪುರುಷರ ಜವಾಬ್ದಾರಿಯಾಗಿದೆ.

- ಡಾ.ಹೆಚ್.ಸಿ.ಮಹದೇವಪ್ಪ, ಜಿಲ್ಲಾ ಉಸ್ತುವಾರಿ ಸಚಿವ

ನಗರ ಮತ್ತು ಸರ್ಕಾರಕ್ಕೆ ಕೀರ್ತಿ ತರುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ...

ರಾಜ್ಯ ಮತ್ತು ರಾಷ್ಟ್ರದಾದ್ಯಂತ ಬರುತ್ತಿರುವ ಕಲಾಭಿಮಾನಿಗಳಿಗೆ ಗೌರವವನ್ನು ಕೊಡಬೇಕು. ಮೈಸೂರು ಹಾಗೂ ಅಕ್ಕ–ಪಕ್ಕದ ಗ್ರಾಮದಲ್ಲಿರುವ ಜನತೆ ಸಂಪೂರ್ಣ ಸಹಕಾರವನ್ನು ನೀಡಬೇಕು. ಮೈಸೂರು ಮಹಾರಾಜರ ಊರಾಗಿದ್ದು, ಅತ್ಯಂತ ಗೌರವಕ್ಕೆ, ಪ್ರೀತಿಗೆ ಪಾತ್ರರಾಗಬೇಕು. ಮೈಸೂರಲ್ಲಿ ಉತ್ತಮ ಸಂಸ್ಕಾರ ಇರುವ ಜನರಿದ್ದಾರೆ. ಶಾಂತಿಯುತ ಜನರಿದ್ದಾರೆ ನಮ್ಮನ್ನು ಬಹಳ ಪ್ರೀತಿಯಿಂದ ನೋಡಿಕೊಂಡರು ಎಂದೇಳುವಂತೆ ಮಾಡಬೇಕು. ಐದು ದಿನಗಳು ಯುವ ದಸರಾ ಯಶಸ್ವಿಯಾಗಿ ನಡೆಸುವ ಜವಾಬ್ದಾರಿ ನಮ್ಮ ಯುವಕರ ಮೇಲಿದೆ. ಮೈಸೂರು ನಗರವನ್ನು ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲಿ ನೋಡಲಾಗುತ್ತಿದ್ದು, ನಗರಕ್ಕೆ ಹಾಗೂ ರಾಜ್ಯ ಸರ್ಕಾರಕ್ಕೆ ಗೌರವ ತರುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

- ಜಿ.ಟಿ.ದೇವೇಗೌಡ, ಶಾಸಕರು, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ

ಜನಸ್ತೋಮ, ಲಾಠಿ ರುಚಿ...!



ಮೊದಲ ಬಾರಿಗೆ ಮೈಸೂರಿನ ಹೊರವಲಯದಲ್ಲಿ ಆಯೋಜನೆಗೊಂಡ ಯುವ ದಸರಾ ಮೆಗಾ ನೃತ್ಯ–ಸಂಗೀತ ಕಾರ್ಯಕ್ರಮಕ್ಕೆ ನಿರೀಕ್ಷೆಗೂ ಮೀರಿ ಜನ ಸಾಗರವೇ ಹರಿದು ಬಂದಿತ್ತು. ರಿಂಗ್ ರಸ್ತೆಯಲ್ಲಿ ಸುಮಾರು 2 ಕಿ.ಮೀ ದೂರದಷ್ಟು ವಾಹನಗಳನ್ನು ಪಾರ್ಕಿಂಗ್ ಮಾಡಲಾಗಿತ್ತು. ಟಿಕೆಟ್ ಖರೀದಿ ಮಾಡಿದವರಿಗಾಗಿ ಮೀಸಲಾಗಿದ್ದ ಸ್ಥಳಗಳಲ್ಲಿ ಚೇರ್‌ಗಳು ಖಾಲಿ ಇದ್ದರೆ, ಉಳಿದೆಲ್ಲಾ ಕಡೆಗಳಲ್ಲಿಯೂ ಜನಜಂಗುಳಿ ನೆರೆದಿತ್ತು. ವಿವಿಪಿ ಗೇಟ್ ಬಳಿ ಕೆಲ ಕಾಲ ನೂಗ್ಗಲು ಉಂಟಾಗಿದ್ದರಿಂದ ಪೊಲೀಸರು ಕೆಲವರಿಗೆ ಲಾಠಿ ರುಚಿಯನ್ನು ತೋರಿಸಿದರು. ಯುವ ದಸರಾ ವೇದಿಕೆ ಸುತ್ತಲೂ ಕಾಂಪೌಂಡ್ ಮಾದರಿಯಲ್ಲಿ ನಿರ್ಮಿಸುವ ಮೂಲಕ ಸೂಕ್ತ ಭದ್ರತಾ ವ್ಯವಸ್ಥೆ ಮಾಡಲಾಗಿತ್ತು. ಯಾವುದೇ ಅಹಿತಕರ ಘಟನೆಗೆ ಅವಕಾಶವಾಗದಂತೆ ಪೊಲೀಸರು ಹದ್ದಿನ ಕಣ್ಣಿಟ್ಟಿದ್ದರು. ಅಲ್ಲದೆ ವೇದಿಕೆ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಚಾಮುಂಡೇಶ್ವರಿ ಕ್ಷೇತ್ರದ ಶಾಸಕರು ಯುವ ಸಮೂಹದಲ್ಲಿ ಶಾಂತಿಯಿಂದ ವರ್ತಿಸಿ, ಮೈಸೂರಿನ ಘನತೆ ಕಾಪಾಡುವಂತೆಯೂ ಮನವಿ ಮಾಡಿದರು.

ಶ್ರೇಯಾ ಘೋಷಾಲ್ ಗಾನ ಸುಧೆಗೆ ಕುಣಿದು ಕುಪ್ಪಳಿಸಿದ ಯುವ ಸಮೂಹ

ಯುವ ಸಮೂಹವೇ ಕುಣಿದು ಕುಪ್ಪಳಿಸುವಂತೆ ಮಾಡಿದರು. ಆರಂಭದಲ್ಲಿ ಜಾನ್ವಿ ರಾಯಲ್ ಮತ್ತು ತಂಡ, ಕೆಜಿಎಫ್ ಚಿತ್ರದ 'ನಾನು ಬಳ್ಳಿಯ ಮಿಂಚು', ರಾಬರ್ಟ್ ಚಿತ್ರದ 'ಬೇಬಿ ಡ್ಯಾನ್ಸ್ ಫ್ಲೋರ್ ರೆಡಿ', ಸುಂಟರಗಾಳಿ ಚಿತ್ರದ 'ಟೈಟಲ್' ಹಾಡಿಗೆ ಭರ್ಜರಿ ನೃತ್ಯದ ಮೂಲಕ ರಂಜಿಸಿದರೆ, ಕನ್ನಡ ಚಿತ್ರರಂಗದ ಟಗರು ಪುಟ್ಟಿ ಎಂದೇ ಖ್ಯಾತಿ ಪಡೆದ ನಟಿ ಮಾನ್ವಿತಾ ಹರೀಶ್ ಮತ್ತು ತಂಡ, ಭೀಮಾ ಚಿತ್ರದ 'ಬ್ಯಾಡ್ ಬಾಯ್ಸ್', ಟಗರು ಚಿತ್ರದ 'ಮೆಂಟಲ್ ಹೋ ಜಾವ್', ಕರಟಕ ಧಮನಕ ಚಿತ್ರದ 'ಹಿತ್ತಲಕ ಕರಿಬೇಡ ಮಾವ' ಹಾಡುಗಳಿಗೆ ಮನಮೋಹಕ ನೃತ್ಯ ಪ್ರದರ್ಶನ ನೀಡುವ ಮೂಲಕ ವರ್ಣರಂಜಿತ ವೇದಿಕೆಯಲ್ಲಿ ನೃತ್ಯ–ಸಂಗೀತ ವೈಭವದ ಝಲಕ್ ಸೃಷ್ಟಿಸಿದರು.



ನಂತರ ಕನ್ನಡದ ಖ್ಯಾತ ಹಿನ್ನಲೆ ಗಾಯಕ ವಾಸುಕಿ ವೈಭವ್ ಮತ್ತು ತಂಡದಿಂದ ಕಿರಿಕ್ ಪಾರ್ಟಿ ಚಿತ್ರದ 'ಕಾಗದದ ದೋಣಿಯಲಿ', 'ಕಾಣದಂತೆ ಮಾಯವಾದನು ನಮ್ಮ ಶಿವ ಕೈಲಾಸ ಸೇರಿಕೊಂಡನು' ಎಂಬ ಹಾಡಿನ ಪುನೀತ್ ರಾಜ್‌ಕುಮಾರ್ ಅವರನ್ನು ಮೈಸೂರು ಜನತೆಯ ಧ್ವನಿಯಲ್ಲಿ ಜೊತೆಗೂಡಿಸಿದರು. ಬಡವ ರಾಸ್ಕಲ್ ಚಿತ್ರದ 'ಕಾಮಾನ್ ಮ್ಯಾನು' ಹಾಡಿನ ಮೂಲಕ ಸ್ನೇಹದ ಶ್ರೀಮಂತಿಕೆ ಪಸರಿಸುವ ಮೂಲಕ ಶಿಳ್ಳೆ–ಚಪ್ಪಾಳೆ ಗಿಟ್ಟಿಸಿದರಲ್ಲದೆ ಮೈಸೂರಿಗರ ಮನಗೆದ್ದರು.

ಶ್ರೇಯಾ ಸುಧೆ: ಬಳಿಕ ಯುವ ದಸರಾ ವೇದಿಕೆಗೆ ಆಗಮಿಸಿದ ಖ್ಯಾತ ಬಾಲಿವುಡ್ ಹಿನ್ನಲೆ ಗಾಯಕಿ ಶ್ರೇಯಾ ಘೋಷಾಲ್, ಆಶಿಕಿ–2 ಹಿಂದಿ ಚಿತ್ರದ 'ಸುನ್ ರಹಾ ಹೈ' ಹಾಡಿನ ಮೂಲಕ ಯುವ ದಸರಾ ಮೆಗಾ ವೇದಿಕೆಗೆ ಹೊಸ ಮೆರಗು ತಂದರು. ಚಕ್ರವರ್ತಿ ಕನ್ನಡ ಚಿತ್ರದ 'ಒಂದು ಮಳೆ ಬಿಲ್ಲು' ಕೊಟ್ಟಿಗೊಬ್ಬ ಚಿತ್ರದ 'ಸಾಲುತಿಲ್ಲವೇ' ಸಂಜು ವೆಡ್ಸ್ ಗೀತಾ ಚಿತ್ರದ 'ಗಗನವೇ ಬಾಗಿ' ಹಾಡುಗಳನ್ನು ಅತ್ಯಂತ ಸುಮಧುರವಾಗಿ ಹಾಡಿ ಯುವ ಮನಸುಗಳಿಗೆ ಮುದ ನೀಡಿದರು.

ಮಕ್ಕಳ ಸೇವೆ ಮಾಡುವುದು ದೇವಿ ಸೇವೆ ಮಾಡಿದಂತೆ

ಮಕ್ಕಳ ದಸರಾ ಕಾರ್ಯಕ್ರಮ ಉದ್ಘಾಟಿಸಿದ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅಭಿಮತ

ಮೈಸೂರು, ಅ.6(ಜಿಎ)–ಮಕ್ಕಳ ಸೇವೆ ಮಾಡುವುದೇ ದೇವಿಯ ಸೇವೆ ಮಾಡಿದಂತೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸಚಿವ ಮಧು ಬಂಗಾರಪ್ಪ ಅಭಿಪ್ರಾಯಪಟ್ಟರು.

ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಮಹಿಳಾ ಮತ್ತು ಮಕ್ಕಳ ಉಪಸಮಿತಿ ವತಿಯಿಂದ ನಗರದ ಕರ್ನಾಟಕ ಕಲಾಮಂದಿರದಲ್ಲಿ ಆಯೋಜಿಸಲಾಗಿದ್ದ ಮಕ್ಕಳ ದಸರಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳಲ್ಲಿ ಅಡಗಿರುವ ನಾನಾ ಪ್ರತಿಭೆಗಳನ್ನು ಗುರುತಿಸಿ, ಹೊರತಂದು ಪ್ರೋತ್ಸಾಹ ನೀಡಲು ಮಕ್ಕಳ ದಸರಾ ಉತ್ತಮ ವೇದಿಕೆಯಾಗಿದ್ದು, ಮಕ್ಕಳಲ್ಲಿ ಸುಪ್ತವಾಗಿ ಅಡಗಿರುವ ಪ್ರತಿಭೆಯನ್ನು ಹೊರತರುವ ನಿಟ್ಟಿನಲ್ಲಿ ಅತ್ಯಂತ ರಚನಾತ್ಮಕ ಮತ್ತು ಕ್ರಿಯಾಶೀಲವಾದ ಮಕ್ಕಳ ದಸರಾ ಆಯೋಜನೆ ಶ್ಲಾಘನೀಯವಾದದು, ದಸರಾ ಉತ್ಸವದ ಸಂದರ್ಭ ಮತ್ತೆಲ್ಲೂ ಕಂಡುಬರದ ಮಕ್ಕಳ ದಸರಾವನ್ನು ಇಲ್ಲಿ ಆಯೋಜಿಸುವ ಮೂಲಕ ಮಕ್ಕಳಿಗೆ ವೇದಿಕೆ ಕಲ್ಪಿಸಿಕೊಡುತ್ತಿರುವುದು ಉತ್ತಮವಾದ ಪ್ರಯತ್ನ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವಿದ್ಯಾರ್ಥಿಗಳಿಗೂ ತಮ್ಮಲ್ಲಿರುವ ಪ್ರತಿಭೆ ಅನಾವರಣಕ್ಕೆ ಇಂತಹ ವೇದಿಕೆ ಅಗತ್ಯವಿದ್ದು, ಎಲ್ಲ ಮಕ್ಕಳಿಗೂ ಸಮಾನ ಅವಕಾಶ ನೀಡಲು ಸರ್ಕಾರದಿಂದ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಶಿಕ್ಷಣದ ಗುಣಮಟ್ಟದಲ್ಲಿ ಕೊರತೆಯಿದ್ದು, ಆ ಭಾಗದಲ್ಲಿ ಹೆಚ್ಚು ಗಮನಹರಿಸುತ್ತಿದ್ದೇವೆ. ಈಗಾಗಲೇ ಶೈಕ್ಷಣಿಕ ಕಾರ್ಯಕ್ರಮಗಳನ್ನು ಕೈಗೊಳ್ಳುವ ಮೂಲಕ ಶಿಕ್ಷಣ ವ್ಯವಸ್ಥೆಯನ್ನು ಉನ್ನತೀಕರಿಸಲು ಪ್ರಯತ್ನಿಸಲಾಗುತ್ತಿದೆ. ಸರ್ಕಾರಿ ಶಾಲೆಗಳಲ್ಲಿ ಅನೇಕ ಕೊರತೆ ಇದೆ. ಆದರೆ ಅವರು ವಿಶ್ವಾಸವನ್ನು ಕಳೆದುಕೊಂಡಿರುವುದಿಲ್ಲ. ಇಂದಿಗೂ ಉತ್ತಮ ಶಿಕ್ಷಕರು ಕಾಣಸಿಗುವುದು ನಮ್ಮ ಸರ್ಕಾರಿ ಶಾಲೆಗಳಲ್ಲಿಯೇ. ಉದ್ಯಮಿ ಅಜೀಮ್ ಪ್ರೇಮ್‌ಜೀ ಅವರ ಕೊಡುಗೆಯಾಗಿ ಶಾಲಾ ಮಕ್ಕಳಿಗೆ ವಾರದಲ್ಲಿ 6 ದಿನ ಮೊಟ್ಟೆ ನೀಡುತ್ತಿದ್ದೇವೆ ಎಂದರು.



ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಮಹಿಳಾ ಮತ್ತು ಮಕ್ಕಳ ಉಪಸಮಿತಿ ವತಿಯಿಂದ ನಗರದ ಕಲಾಮಂದಿರದಲ್ಲಿ ಆಯೋಜಿಸಿದ್ದ ಮಕ್ಕಳ ದಸರಾ ಕಾರ್ಯಕ್ರಮದಲ್ಲಿ ಬಾಲ ಪ್ರತಿಭೆಗಳನ್ನು ಅಭಿನಂದಿಸಲಾಯಿತು. ಶಾಸಕ ಶ್ರೀವತ್ಸ, ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ, ಡಿಡಿಪಿಐ ಡಿ.ಎಸ್.ಜವರೇಗೌಡ ಇನ್ನಿತರರಿದ್ದಾರೆ.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಅವರು ಮಾತನಾಡಿ, ಮಕ್ಕಳು ಟಿ.ವಿ., ಮೊಬೈಲ್‌ಗಳಿಂದ ಹಾಳಾಗುತ್ತಿದ್ದಾರೆಂಬ ಮಾತು ಈಗ ಎಲ್ಲೆಡೆ ಕೇಳಿಬರುತ್ತಿದೆ. ಆದರೆ, ಟಿ.ವಿ. ಮೊಬೈಲ್‌ಗಳಲ್ಲಿ ಒಳಿತು, ಕೆಡಕು ಉಂಟು ಮಾಡುವ ಎರಡು ಅಂಶಗಳಿದ್ದು, ಮಕ್ಕಳು ಒಳ್ಳೆಯ ಅಂಶಗಳತ್ತ ಮಾತ್ರ ಗಮನಹರಿಸಿ ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮಕ್ಕಳಿಂದ ನಿರ್ಮಿತವಾದ ವಿಶಿಷ್ಟ ಮಳಿಗೆಗಳು ಮಕ್ಕಳ ದಸರಾ ಅಂಗವಾಗಿ ಗಣಿತ ಮತ್ತು ವಿಜ್ಞಾನ ಪ್ರಯೋಗಾಲಯ, ಕರ್ನಾಟಕದ ಜನಪದ ಕಲೆಗಳು, ಶಿಕ್ಷಣ ಇಲಾಖೆಯ ಪ್ರೋತ್ಸಾಹದಾಯಕ ಯೋಜನೆಗಳು ಮತ್ತು ಕಾರ್ಯಕ್ರಮಗಳು, ಮೈಸೂರಿನ ರಾಜ ಪರಂಪರೆ, ವಿಜ್ಞಾನ ಮತ್ತು ತಂತ್ರಜ್ಞಾನ, ಮೈಸೂರಿನ ವಿಶೇಷತೆಗಳು, ಕೆ.ಆರ್.ನಗರದ ಸುಗ್ಗಿ ಸಿರಿ ಸಿರಿಧಾನ್ಯಗಳ ಮಹತ್ವ ಪೌಷ್ಟಿಕ ಆಹಾರ, ಪಿರಿಯಾಪಟ್ಟಣ ಶಾಲೆಯ ಕರ್ನಾಟಕದ ಇತಿಹಾಸ, ಎಚ್.ಡಿ. ಕೋಟೆಯ ಸಸ್ಯ ಸಿರಿ ಔಷಧೀಯ ಸಸ್ಯಗಳು, ಕರಕುಶಲ ವಸ್ತುಗಳ ಪ್ರದರ್ಶನ ನಜರ್‌ಬಾದ್, ಅಗಸ್ತ್ಯ ಫೌಂಡೇಶನ್‌ನ ವಿಜ್ಞಾನ ವಸ್ತುಪ್ರದರ್ಶನ ಮಳಿಗೆ ಸೇರಿದಂತೆ 15ಕ್ಕೂ ಹೆಚ್ಚು ಮಳಿಗೆಗಳು ಮಕ್ಕಳ ದಸರಾದಲ್ಲಿ ಮುಖ್ಯ ಆಕರ್ಷಣೆಯಾಗಿದ್ದವು.

ಕಾರ್ಯಕ್ರಮಕ್ಕೆ ವಿಶೇಷ ಅತಿಥಿಗಳಾಗಿ ಆಗಮಿಸಿದ್ದ ಬಾಲಪ್ರತಿಭೆಗಳಾದ ಜೀ ಕನ್ನಡದ ಸೀತಾರಾಮ ಧಾರಾವಾಹಿಯ ಬಾಲನಟಿ ರೀತು ಸಿಂಗ್, ಎಲೈಟ್ ವರ್ಲ್ಡ್ ರೆಕಾರ್ಡ್ ವಿಜೇತ ಹೆಚ್.ಎಸ್. ಮಹೇಶ್ ಕುಮಾರ್, ಹೊಯ್ಸಳ ಶೌರ್ಯ ಪ್ರಶಸ್ತಿ ಪುರಸ್ಕೃತ ಆರ್.ಸಿ.ಗೌಡ, ಪ್ರಧಾನಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕೃತ ರಿಷಿ ಶಿವ ಪ್ರಸನ್ನ ಅವರನ್ನು ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಶಾಸಕ ಶ್ರೀವತ್ಸ, ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ, ಡಿಡಿಪಿಐ ಡಿ.ಎಸ್.ಜವರೇಗೌಡ, ಮಹಿಳಾ ಮತ್ತು ಮಕ್ಕಳ ದಸರಾ ಉಪಸಮಿತಿ ಅಧ್ಯಕ್ಷೆ ಭಾಗ್ಯಲಕ್ಷ್ಮಿ ನಿಂಗರಾಜು, ಮಹಿಳಾ ಮತ್ತು ಮಕ್ಕಳ ದಸರಾ ಉಪಸಮಿತಿಯ ಉಪವಿಶೇಷ ಅಧಿಕಾರಿಗಳು, ಜಂಟಿ ನಿರ್ದೇಶಕಿ ವಿ.ಪ್ರಿಯದರ್ಶಿನಿ ಸೇರಿದಂತೆ ಸದಸ್ಯರು ಉಪಸ್ಥಿತರಿದ್ದರು.

ತೀವ್ರತರ ಟ್ರಾಫಿಕ್ ಜಾಮ್ ; ಸವಾರರು ಕಂಗಾಲು, ಪೊಲೀಸರು ಹೈರಾಣು



ಮೈಸೂರು,ಅ.6(ಪಿಎಂ)– ಒಂದೆಡೆ ಡ್ರೋನ್ ಶೋ, ಮತ್ತೊಂದೆಡೆ ಗಜಪಡೆ ತಾಲೀಮು. ಜೊತೆಗೆ ಈಗಾಗಲೇ ನಗರದಲ್ಲಿ ಪ್ರವಾಸಿಗರು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಭಾನುವಾರ ರಾತ್ರಿ ಸುಮಾರು 8 ಗಂಟೆ ವೇಳೆಯಲ್ಲಿ ತೀವ್ರತರ ಟ್ರಾಫಿಕ್ ಜಾಮ್ ಉಂಟಾಗಿ ವಾಹನ ಸವಾರರು ಕಂಗಾಲಾದರೆ, ದಟ್ಟಣೆ ನಿಯಂತ್ರಿಸುವಲ್ಲಿ ಸಂಚಾರ ಪೊಲೀಸರು ಹೈರಾಣಾದರು.

ಬನ್ನಿಮಂಟಪದ ಪಂಜಿನ ಕವಾಯಿತು ಮೈದಾನದಲ್ಲಿ ರಾತ್ರಿ 8 ಗಂಟೆಗೆ ಡ್ರೋನ್ ಶೋ ಹಮ್ಮಿಕೊಂಡಿದ್ದ ಹಿನ್ನೆಲೆಯಲ್ಲಿ ಸದರಿ ಮೈದಾನದತ್ತ ಭಾರೀ ಸಂಖ್ಯೆಯಲ್ಲಿ ಜನರು ಬರಲಾರಂಭಿಸಿದ್ದರು. ಪರಿಣಾಮ ಸದರಿ ಮೈದಾನಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳಲ್ಲಿ ವಾಹನ ದಟ್ಟಣೆ ಹೆಚ್ಚಾಗಿತ್ತು. ಅಂತೆಯೇ ಬನ್ನಿಮಂಟಪ ಹಾಗೂ ತಿಲಕನಗರ ಭಾಗದ ಸಯ್ಯಾಜಿರಾವ್ ರಸ್ತೆಯಲ್ಲಿ ಕೂಡ ವಾಹನ ದಟ್ಟಣೆ ವ್ಯಾಪಕವಾಗಿತ್ತು.

ಈ ನಡುವೆ ಗಜಪಡೆಯ ತಾಲೀಮು ಸಹ ಮುಸ್ಸಂಜೆಯಲ್ಲಿ ನಡೆದ ಕಾರಣ ಸಹಜವಾಗಿಯೇ ತೀವ್ರತರ ಟ್ರಾಫಿಕ್ ಜಾಮ್ ಉಂಟಾಗಿ ಸವಾರರು ಪರದಾಡಿದರು. ಮತ್ತೊಂದೆಡೆ ವಾಹನಗಳನ್ನು ನಿಯಂತ್ರಿಸುವಲ್ಲಿ ಸಂಚಾರ ಪೊಲೀಸರು ಹೆಣಗಾಡುವ ಪರಿಸ್ಥಿತಿ ಉಂಟಾಗಿತ್ತು ಜೊತೆಗೆ ಭಾನುವಾರ ಆದ ಹಿನ್ನೆಲೆಯೂ ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ವಾಹನಗಳಲ್ಲಿ ರಸ್ತೆಗಿಳಿದಿದ್ದ ಜನ ವಿದ್ಯುತ್ ದೀಪಾಲಂಕಾರ ಕಣ್ತುಂಬಿಕೊಂಡು ಸೆಲ್ಫಿ ಹಾಗೂ ಫೋಟೋ ಮೊರೆ ಹೋಗುವ ಆಕಾಂಕ್ಷೆಯಲ್ಲಿದ್ದರು. ಆದರೆ ವಾಹನ ದಟ್ಟಣೆ ಕಂಡು ನಿರಾಸೆಗೊಂಡರು. ಮತ್ತೊಂದೆಡೆ ಇದೇ ವೇಳೆಯಲ್ಲಿ ಅರಮನೆ ಸಮೀಪದ ಸಯ್ಯಾಜಿರಾವ್ ರಸ್ತೆಯಲ್ಲಿಯೂ ವಾಹನ ದಟ್ಟಣೆ ಉಂಟಾಗಿತ್ತು. ದಸರಾ ಮುಗಿಯುವವರೆಗೆ, ಅದರಲ್ಲೂ ಸಂಜೆ ವೇಳೆಯಲ್ಲಿ ಸಂಚಾರ ದಟ್ಟಣೆ ನಗರದಲ್ಲಿ ಸಹಜವಾಗುವ ಸಾಧ್ಯತೆ ಇದ್ದೇ ಇದೆ.

ದಸರಾ ಕವಿಗೋಷ್ಠಿಯಲ್ಲಿ ಭಾಗವಹಿಸದಿರಲು ಲೇಖಕಿ ಬಾನು ಮುಷ್ತಾಕ್ ನಿರ್ಧಾರ

ಮೈಸೂರು, ಅ.6– ಈ ಬಾರಿಯ



ದಸರಾ ಪ್ರಧಾನ ಕವಿಗೋಷ್ಠಿಯಲ್ಲಿ ಭಾಗವಹಿಸದಿರಲು ಲೇಖಕಿ ಬಾನು ಮುಷ್ತಾಕ್ ನಿರ್ಧರಿಸಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣ ಫೇಸ್ ಬುಕ್ ಖಾತೆಯಲ್ಲಿ ಭಾನುವಾರ ಪೋಸ್ಟ್ ಹಾಕುವ ಮೂಲಕ ತಮ್ಮ ತೀರ್ಮಾನವನ್ನು ತಿಳಿಸಿದ್ದಾರೆ.

ದಸರಾ ಕವಿಗೋಷ್ಠಿಯಲ್ಲಿ ಭಾಗವಹಿಸಲು ಒಪ್ಪಿದ್ದೆ. ಈ ಹಿಂದೆ ದಸರಾ ಕವಿಗೋಷ್ಠಿಯಲ್ಲಿ ಭಾಗವಹಿಸಿದ್ದೆ. ಆದರೆ, ಇತ್ತೀಚಿನ ಕೆಲವು ಸಂವಾದಗಳನ್ನು ಗಮನಿಸಿದಾಗ, ಬೇರೆಯವರಿಗೆ ಅವಕಾಶ ಕೊಡುವುದು ಅಗತ್ಯವೆಂದು ಅನಿಸಿದೆ. ಹೀಗಾಗಿ 2024ರ ದಸರಾ ಕವಿಗೋಷ್ಠಿಯಲ್ಲಿ ಭಾಗವಹಿಸದೇ ಇರಲು ನಿರ್ಧರಿಸಿದ್ದೇನೆ. ನಿಮಗೆ ಉಂಟಾಗಿರುವ ಅನಾನುಕೂಲಕ್ಕೆ ಕ್ಷಮೆ ಇರಲಿ ಎಂದಿದ್ದಾರೆ.

ಕವಿಗೋಷ್ಠಿಯಲ್ಲಿ ಈ ಹಿಂದೆ ಪಾಲ್ಗೊಂಡಿದ್ದವರಿಗೆ ಮತ್ತೆ ಅವಕಾಶ ಕೊಟ್ಟಿರುವುದು, ದಕ್ಷಿಣ ಕರ್ನಾಟಕದವರಿಗೆ ಹೆಚ್ಚಿನ ಆದ್ಯತೆ ನೀಡಿರುವ ಉಪ ಸಮಿತಿ ನಡೆಯ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ತೀವ್ರ ಆಕ್ಷೇಪವಾದ ಹಿನ್ನೆಲೆಯಲ್ಲಿ ಅವರು ಈ ಬಾರಿಯ ದಸರಾ ಕವಿಗೋಷ್ಠಿಯಲ್ಲಿ ಭಾಗವಹಿಸದಿರಲು ನಿರ್ಧರಿಸಿದ್ದಾರೆ ಎನ್ನಲಾಗಿದೆ. ಕವಿಗೋಷ್ಠಿಯಿಂದ ಹಿಂದೆ ಸರಿದವರಲ್ಲಿ ಕವಿ ಆರಿಫ್ ರಾಜಾ ನಂತರ ಬಾನು 2ನೇಯವರಾಗಿದ್ದಾರೆ. ತಾನು ದಸರಾ ಕವಿಗೋಷ್ಠಿಯಲ್ಲಿ ಪಾಲ್ಗೊಳ್ಳದಿರಲು ನಿರ್ಧರಿಸಿರುವುದಾಗಿ ಆರಿಫ್ ರಾಜಾ ಶನಿವಾರ ತಿಳಿಸಿದ್ದರು.

ಬ್ರಾಹ್ಮಣ ಸುವರ್ಣ ಮಹೋತ್ಸವ: ಇಂದು ಪೂರ್ವಭಾವಿ ಸಭೆ

ಮೈಸೂರು,ಅ.6(ಜಿಎ)–ಬೆಂಗಳೂರಿನಲ್ಲಿ ಜ.18, 19ರಂದು ನಡೆಯಲಿರುವ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸುವರ್ಣ ಸಂಭ್ರಮ ಮತ್ತು ರಾಜ್ಯಮಟ್ಟದ ವಿಪ್ರ ಸಮ್ಮೇಳನದ ಅಂಗವಾಗಿ ಅ.7ರಂದು 11 ಗಂಟೆಗೆ ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀರಾಮ ಮಂದಿರದಲ್ಲಿ ಪೂರ್ವಭಾವಿ ಸಭೆ ಆಯೋಜಿಸಲಾಗಿದೆ ಎಂದು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಮತ್ತು ಸಮ್ಮೇಳನದ ಉಪಾಧ್ಯಕ್ಷರೂ ಆದ ಡಿ.ಟಿ.ಪ್ರಕಾಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಲ್ಲಿ 60ಕ್ಕೂ ಹೆಚ್ಚು ಬ್ರಾಹ್ಮಣ ಸಮುದಾಯದ ಸಂಘಟನೆಗಳಿದ್ದು, ಈ ಎಲ್ಲಾ ಸಂಘಟನೆಗಳು ಸಮನ್ವಯತೆ ಕಾಪಾಡಿಕೊಂಡು ಒಗ್ಗೂಡಿಸಿ ಸಮ್ಮೇಳನದ ಕುರಿತು ರಾಜ್ಯಾಧ್ಯಕ್ಷ ಅಶೋಕ ಹಾರನಹಳ್ಳಿ ನೇತೃತ್ವದಲ್ಲಿ ಸಭೆ ನಡೆಯಲಿದೆ ಎಂದರು. ವಿಪ್ರ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸೂಕ್ತ ಸಲಹೆ, ಸೂಚನೆ ನೀಡಬೇಕೆಂದು ಕೋರಿದರು. ಗೋಷ್ಠಿಯಲ್ಲಿ ಮುಖಂಡರಾದ ಎಂ.ಆರ್.ಬಾಲಕೃಷ್ಣ, ಕೆ.ಆರ್.ಸತ್ಯನಾರಾಯಣ್, ಗೋಪಾಲರಾವ್, ಡಾ.ಲಕ್ಷ್ಮಿ ರಾಕೇಶ್ ಭಟ್, ಕೆ.ಎಂ.ನಿಶಾಂತ್, ಅಪೂರ್ವ ಸುರೇಶ್, ಚಕ್ರಪಾಣಿ, ಸುಚಿಂದ್ರ ಇದ್ದರು.

ಅ.14ರವರೆಗೆ ಶ್ರೀಲಕ್ಷ್ಮೀ ವೆಂಕಟರಮಣಸ್ವಾಮಿ ದೇವಸ್ಥಾನದ ಬ್ರಹ್ಮ ರಥೋತ್ಸವ


ಮೈಸೂರು, ಅ.6–ಮೈಸೂರಿನ ವಾಣಿವಿಲಾಸ ಮೊಹಲ್ಲಾದಲ್ಲಿರುವ ಶ್ರೀ ಲಕ್ಷ್ಮೀ ವೆಂಕಟರಮಣಸ್ವಾಮಿಯವರ 50ನೇ ಬ್ರಹ್ಮೋತ್ಸವವನ್ನು ಅ.6ರಿಂದ 14ರವರೆಗೆ ದೇವಸ್ಥಾನದಲ್ಲಿ ಏರ್ಪಡಿಸಲಾಗಿದೆ ಎಂದು ಶ್ರೀ ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಸ್ಥಾನ ಟ್ರಸ್ಟ್ ತಿಳಿಸಿದೆ.

ಶ್ರೀ ಪರಕಾಲ ಮಠದ ಈಗಿನ ಸ್ವಾಮಿಗಳು ಶ್ರೀ ಅಭಿನವ ವಾಗೀಶ ಬ್ರಹ್ಮತಂತ್ರ ಪರಕಾಲ ಸ್ವಾಮಿಗಳು ಹಾಗೂ ದೇವಸ್ಥಾನದ ಟ್ರಸ್ಟಿಗಳು, ಅರ್ಚಕ ಪರಿಚಾರಕ, ನೌಕರ ವರ್ಗದವರ ಸಮ್ಮುಖದಲ್ಲಿ ಪ್ರತಿದಿನ ಬೆಳಗ್ಗೆ ಪೂಜಾ ಕಾರ್ಯಕ್ರಮಗಳು ಹಾಗೂ ಸಂಜೆ ಉತ್ಸವಾದಿಗಳ ಕಾರ್ಯಕ್ರಮಗಳು ಜರುಗಲಿವೆ.

ಅ.5ರಂದು ಬೆಳಗ್ಗೆ ಅನುಜ್ಞೆ, ಪುಣ್ಯಾಹ, ಎಲ್ಲಾ ದೇವರುಗಳಿಗೆ ಅಭಿಷೇಕ ನಡೆಯಲಿದೆ. ಸಂಜೆ ಪುಣ್ಯಾಹವಾಚನ ಸೇರಿದಂತೆ ಹಲವು ಕಾರ್ಯಕ್ರಮಗಳು ಜರುಗಲಿವೆ. ಅ.6ರಂದು ಬೆಳಗ್ಗೆ ಕಲಶಾರಾಧನೆ, ನಿತ್ಯಾ ಹೋಮ, ಸಂಜೆ ಭೇರಿತಾಡನ, ದೇವತಾ ಆವಾಹನೆ, ಅ.7ರಂದು ಬಲಿ ಪ್ರಧಾನ ಪ್ರಾಕಾರೋತ್ಸವ, ಸಂಜೆ ಚಂದ್ರ ಮಂಡಲಾರೋಹಣ ವೈರಮುಡಿ ಉತ್ಸವ, ಮಂಗಳಾರತಿ ನಡೆಯಲಿದೆ. ಅ.12ರಂದು ದಿವ್ಯ ರಥಾರೋಹಣ (ತೇರು)ಜರುಗಲಿದೆ.

ಮಾಜಿ ಶಾಸಕ ಮೊಹಿಯುದ್ದೀನ್ ಬಾವ ಸೋದರ ಮುಮ್ತಾಜ್ ಅಲಿ ನಾಪತ್ತೆ

ಕೂಳೂರು ಸೇತುವೆ ಬಳಿ ಕಾರು ಪತ್ತೆ



ಮಂಗಳೂರು, ಅ.6– ಮಾಜಿ ಶಾಸಕ ಮೊಹಿಯುದ್ದೀನ್ ಬಾವ ಸೋದರ ಮುಮ್ತಾಜ್ ಅಲಿಯ ಕಾರು ಕೂಳೂರು ಸೇತುವೆ ಬಳಿ ಭಾನುವಾರ ಬೆಳಗ್ಗೆ ಪತ್ತೆಯಾಗಿದೆ. ಮುಮ್ತಾಜ್ ನಾಪತ್ತೆಯಾಗಿದ್ದು, ಅವರು ನದಿಗೆ ಬಿದ್ದಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ. ಹೀಗಾಗಿ ನದಿಯಲ್ಲಿ ಶೋಧ ಕಾರ್ಯ ನಡೆಯುತ್ತಿದೆ.

ಕೂಳೂರು ನದಿಯ ಸೇತುವೆ ಬಳಿ ಕಪ್ಪು ಬಣ್ಣದ ಬಿಎಂಡಬ್ಲ್ಯು ಕಾರು ಪತ್ತೆಯಾಗಿದೆ. ಸ್ಥಳಕ್ಕೆ ತೆರಳಿ ಪರಿಶೀಲಿಸಿದಾಗ ಅದು ಮುಮ್ತಾಜ್ ಅಲಿ ಅವರದ್ದು ಎಂದು ಗೊತ್ತಾಗಿದೆ. ಅವರಿಗಾಗಿ ಅಗ್ನಿಶಾಮಕ ಮತ್ತು ತುರ್ತು ಸೇವಾ ತಂಡದವರು ಹಾಗೂ ನಮ್ಮ ಸಿಬ್ಬಂದಿ ಹುಡುಕಾಟ ನಡೆಸುತ್ತಿದ್ದಾರೆ ಎಂದು ಪಣಂಬೂರು ಠಾಣೆ ಪೊಲೀಸರು ತಿಳಿಸಿದ್ದಾರೆ.

ಕಾರು ಸೇತುವೆಯ ಮಧ್ಯಭಾಗದಲ್ಲಿ ನಿಂತಿದೆ. ವಾಹನ ಸಂಚಾರಕ್ಕೆ ಅಡಚಣೆಯಾಗಬಾರದೆಂದು ಬೇರೆಡೆಗೆ ಸ್ಥಳಾಂತರ ಮಾಡಲಾಗಿದೆ. ಕಾರಿನ ಮುಂಭಾಗ ನಜ್ಜುಗುಜ್ಜಾಗಿದ್ದು ಅಪಘಾತಕ್ಕೆ ಈಡಾಗಿದೆ ಎನ್ನಬಹುದು. ಮಂಗಳೂರು ಉತ್ತರ ಭಾಗದ ಮಾಜಿ ಶಾಸಕ ಮೊಹಿಯುದ್ದೀನ್ ಬಾವ, ನಗರ ಪೊಲೀಸ್ ಆಯುಕ್ತ ಅನುಪಮ್ ಅಗರ್ವಾಲ್ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದ್ದಾರೆ. ಮುಮ್ತಾಜ್ ಅಲಿ ಇಂದು ನಸುಕಿನ ಜಾವ 3 ಗಂಟೆಗೆ ಮನೆಯಿಂದ ಹೊರಟಿದ್ದರು. 5 ಗಂಟೆ ವೇಳೆಗೆ ಕೂಳೂರು ಸೇತುವೆ ಬಳಿ ಕಾರು ಮಾತ್ರ ಪತ್ತೆಯಾಗಿದೆ.

ಈ ಬಗ್ಗೆ ಮಾಹಿತಿ ನೀಡಿದ ನಗರ ಪೊಲೀಸ್ ಆಯುಕ್ತ ಅನುಪಮ್ ಅಗರ್ವಾಲ್, ಇಂದು ಮುಂಜಾನೆ ನಮಗೆ ಮಾಹಿತಿ ಬಂದಿದ್ದು, ಕೂಳೂರು ಸೇತುವೆ ಬಳಿ ಉದ್ಯಮಿ ಮುಮ್ತಾಜ್ ಅಲಿ ಅವರ ವಾಹನ ಪತ್ತೆಯಾಗಿದೆ. ಅವರು ಸೇತುವೆಯಿಂದ ಜಿಗಿದಿರಬಹುದು. ಸ್ಥಳೀಯ ಪೊಲೀಸರು ಸ್ಥಳಕ್ಕೆ ತಲುಪಿ ತನಿಖೆ ಆರಂಭಿಸಿದ್ದಾರೆ. ಪ್ರಾಥಮಿಕ ತನಿಖೆಯಂತೆ 3 ಗಂಟೆ ಸುಮಾರಿಗೆ ಅವರು ಮನೆಯಿಂದ ಹೊರಟು 5 ಗಂಟೆ ಸುಮಾರಿಗೆ ಕೂಳೂರು ಸೇತುವೆ ಬಳಿ ಬಂದಿರಬಹುದು ಎಂದು ಅವರ ಪುತ್ರಿ ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಬಂದರು ಕಾವಲು ಪಡೆ ತಂಡಗಳು ನದಿಯಲ್ಲಿ ಶೋಧ ನಡೆಸುತ್ತಿವೆ. ಅವರು ನದಿಗೆ ಹಾರಿದ್ದಾರೆಯೇ ಅಥವಾ ಬೇರೆಡೆಗೆ ಹೋಗಿದ್ದಾರೆಯೇ ಎಂಬ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ ಎಂದು ತಿಳಿಸಿದರು.

ವಿದ್ಯಾರ್ಥಿನಿಲಯ ಪ್ರವೇಶಾತಿಗಾಗಿ ಅರ್ಜಿ

ಮೈಸೂರು,ಅ.6–ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿ(ಸಾಮಾನ್ಯ ಪದವಿ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ 2024–2025ನೇ ಸಾಲಿನ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಪ.ಜಾತಿ/ಪ.ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು https://shp.karnataka.gov.in/bcwd ಅ.30ರೊಳಗೆ ಅರ್ಜಿ ಸಲ್ಲಿಸಬಹುದು. ತಾಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರಗಳಿಗಾಗಿ https://www.bcwd.karnataka.gov.in/ ನೋಡಬಹುದು ಹಾಗೂ ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ ಇ–ಮೇಲ್ bcwdhelpline@ gmail.comನ ಮುಖಾಂತರ ಅಥವಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಥವಾ ತಾಲೂಕು ಅಧಿಕಾರಿಗಳನ್ನು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಸಹಾಯವಾಣಿ: 805077 0004, 8050770005 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಪ್ರವೇಶಾತಿಗೆ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಮೈಸೂರು,ಅ.6–2024–25ನೇ ಸಾಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ವಿದ್ಯಾರ್ಥಿನಿಲಯದಲ್ಲಿ ಪ್ರವೇಶ ಬಯಸುವ ವೃತ್ತಿಪರ ಪದವಿ, ಸ್ನಾತಕೋತ್ತರ ಪದವಿ ಕೋರ್ಸ್‌ನ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅ.30ರವರೆಗೆ ವಿಸ್ತರಿಸಲಾಗಿದೆ. ಆಸಕ್ತರು www.ssp.postmatric.Karnataka.gov.in ಮೂಲಕ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ ದೂ.ಸಂ. 8050770005

ಇ–ಆಡಳಿತ ಜಾರಿಯಾದರೆ ವಿಕಸಿತ ಭಾರತ ಸಾಧ್ಯ

ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಪ್ರೊ.ನಿರಂಜನ ಅಭಿಪ್ರಾಯ

ಮೈಸೂರು, ಅ.6(ಬಿಎಲ್‌ಯು)– ಇಡೀ ಭಾರತ ದೇಶದಲ್ಲಿ ಇ– ಆಡಳಿತ ಪರಿಣಾಮಕಾರಿಯಾಗಿ ಜಾರಿಯಾದರೆ ವಿಕಸಿತ ಭಾರತ ಸಾಧ್ಯವಾಗಲಿದೆ ಎಂದು ರಾಜ್ಯ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಪ್ರೊ.ಎಸ್.ಆರ್.ನಿರಂಜನ ಇಂದಿಲ್ಲಿ ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸಗಂಗೋತ್ರಿಯ ಸೆನೆಟ್ ಸಭಾಂಗಣದಲ್ಲಿ ಮೈಸೂರು ದಸರಾ ಪ್ರಯುಕ್ತ ಸಂವಿಧಾನ ಅಂಗೀಕಾರದ ಅಮೃತ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಪ್ರಭುತ್ವ ಮತ್ತು ಸಂವಿಧಾನದ ಆಶಯ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಬಡತನ ಮುಕ್ತ, ಜನರ ಹಸಿವು ನೀಗಿ ಸಮಾನತೆಯ ಸಮಾಜ ನಿರ್ಮಾಣವಾದಾಗ ಮಾತ್ರ ಸಂವಿಧಾನದ ಆಶಯಗಳು ಈಡೇರುತ್ತವೆ ಎಂದರು.

ಭಾರತ ದೇಶದ 100ನೇ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿಯಾದರೂ



ಮೈಸೂರಿನ ಮಾನಸಗಂಗೋತ್ರಿಯ ಸೆನೆಟ್ ಸಭಾಂಗಣದಲ್ಲಿ ಶನಿವಾರ ದಸರಾ ಪ್ರಯುಕ್ತ ಸಂವಿಧಾನ ಅಂಗೀಕಾರದ ಅಮೃತ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಪ್ರಭುತ್ವ ಮತ್ತು ಸಂವಿಧಾನದ ಆಶಯ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ರಾಷ್ಟ್ರೀಯ ಕಾನೂನು ಶಾಲೆಯ ಕುಲಪತಿ ಪ್ರೊ.ಸುಧೀರ್ ಕೃಷ್ಣಸ್ವಾಮಿ ಮಾತನಾಡಿದರು.

ಪ್ರತಿಯೊಬ್ಬರು ಆರ್ಥಿಕವಾಗಿ ಸಬಲರಾಗಿ, ಸಾಮಾಜಿಕ ಪ್ರಗತಿ ಸಾಧಿಸಬೇಕು ಎಂಬ ಆಶಯ ವ್ಯಕ್ತಪಡಿಸಿದರು.

ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರು ನೀಡಿರುವ ಸಂವಿಧಾನದ ಆಶಯಗಳು ಈಡೇರಬೇಕಾದರೆ ಸಮ ಸಮಾಜ ನಿರ್ಮಾಣವಾಗಬೇಕು, ಎಲ್ಲರಿಗೂ ಸಮಬಾಳು ದೊರೆಯಬೇಕು.

ಭಾರತಕ್ಕೆ ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ಆಹಾರ ಭದ್ರತೆ, ಸಂಪರ್ಕ ವ್ಯವಸ್ಥೆ ಇರಲಿಲ್ಲ. ಆದರೆ ಈಗ ದೇಶದಲ್ಲಿ ಬಹಳಷ್ಟು ಅಭಿವೃದ್ಧಿ ಸಾಧ್ಯವಾಗಿದೆ, ತಂತ್ರಜ್ಞಾನದಲ್ಲಿ ಬೆಳವಣಿಗೆ ಸಾಧಿಸಿದ್ದೇವೆ, ಬಹಳಷ್ಟು ಸುಧಾರಣೆ ಕಂಡಿದ್ದೇವೆ. ಆದರೆ ದೇಶವನ್ನು ಬಲವಾಗಿ ಕಾಡುತ್ತಿರುವ ಬಡತನ ಮಾತ್ರ ಇನ್ನೂ ಮುಕ್ತವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ನವದೆಹಲಿಯ ಹಿರಿಯ ಪತ್ರಕರ್ತ ಮನೋಜ್ ಮಿತ್ತ, ಬ್ರಾಹ್ಮಣೇತರರಿಗೆ ದೇಶದಲ್ಲಿ ಪ್ರಥಮ ಬಾರಿ ಮೀಸಲಾತಿ ಪರಿಚಯ ಆಗಿರುವುದು ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಾಲದಲ್ಲಿ ಎಂಬುದು ಹೆಮ್ಮೆಯ ಸಂಗತಿ ಎಂದು ಹೇಳಿದರು.

ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ, ಬೆಂಗಳೂರಿನ ರಾಷ್ಟ್ರೀಯ ಕಾನೂನು ಶಾಲೆಯ ಕುಲಪತಿ ಪ್ರೊ.ಸುಧೀರ್ ಕೃಷ್ಣಸ್ವಾಮಿ, ಉಪವಿಭಾಗಾಧಿಕಾರಿ ಹೆಚ್.ಬಿ. ವಿಜಯಕುಮಾರ್, ಸಮಾಜ ಕಲ್ಯಾಣ ಇಲಾಖೆಯ ಅಂಬೇಡ್ಕರ್ ಸಂಶೋಧನಾ ಸಂಸ್ಥೆ ಸಲಹೆಗಾರ ಬಸವರಾಜ ದೇವನೂರು, ಮಾನಸ ಗಂಗೋತ್ರಿಯ ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಜೆ.ಸೋಮಶೇಖರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ದೇಶ – ವಿದೇಶ

ಗಾಜಾ ಮಸೀದಿ ಮೇಲೆ ಇಸ್ರೇಲ್ ವೈಮಾನಿಕ ದಾಳಿ: 21 ಮಂದಿ ಸಾವು



ದೇರ್ ಅಲ್–ಬಾಲಾ: ಮಧ್ಯ ಗಾಜಾ ಪ್ರದೇಶದಲ್ಲಿ ಭಾನುವಾರ ಮುಂಜಾನೆ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಕನಿಷ್ಠ 21 ಜನರು ಮೃತಪಟ್ಟಿದ್ದಾರೆ ಎಂದು ಪ್ಯಾಲೇಸ್ತೀನ್ ವೈದ್ಯಕೀಯ ಅಧಿಕಾರಿಗಳು ತಿಳಿಸಿದ್ದಾರೆ. ದೇರ್ ಅಲ್–ಬಲಾಹ್ ಪಟ್ಟಣದ ಅಲ್–ಅಕ್ಸಾ ಹುತಾತ್ಮರ ಆಸ್ಪತ್ರೆಯ ಬಳಿ ಸ್ಥಳಾಂತರಗೊಂಡ ಜನರಿಗೆ ಆಶ್ರಯ ನೀಡುತ್ತಿರುವ ಮಸೀದಿ ಮೇಲೆ ದಾಳಿ ನಡೆಸಲಾಗಿದೆ ಎಂದು ಆಸ್ಪತ್ರೆ ಹೇಳಿಕೆಯಲ್ಲಿ ತಿಳಿಸಿದೆ.

ಮಧ್ಯ ಗಾಜಾದ ದೇರ್ ಅಲ್–ಬಲಾಹ್‌ನಲ್ಲಿರುವ ಅಲ್–ಅಕ್ಸಾ ಹುತಾತ್ಮರ ಆಸ್ಪತ್ರೆಯ ಗೇಟ್‌ನ ಮುಂದೆ ಸ್ಥಳಾಂತರಗೊಂಡ ಜನರಿಗೆ ಆಶ್ರಯ ನೀಡುವ ಮಸೀದಿ ಮೇಲೆ ಇಸ್ರೇಲ್ ಬಾಂಬ್ ದಾಳಿ ನಡೆಸಿದ್ದು, ಸಾವಿನ ಸಂಖ್ಯೆ 21ಕ್ಕೆ ಏರಿಕೆಯಾಗಿದೆ. ಹೆಚ್ಚಿನ ಸಂಖ್ಯೆಯ ಗಾಯಾಳುಗಳು ಕೂಡ ಸೇರಿದ್ದಾರೆ ಎಂದು ಏಜೆನ್ಸಿ ವಕ್ತಾರ ಮಹ್ಮದ್ ಬಾಸ್ಸಲ್ ತಿಳಿಸಿದ್ದಾರೆ. ಮಸೀದಿಯಲ್ಲಿ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಹಮಾಸ್ ಭಯೋತ್ಪಾದಕರ ಮೇಲೆ ದಾಳಿ ನಡೆಸಿದೆ ಎಂದು ಇಸ್ರೇಲ್ ಮಿಲಿಟರಿ ಹೇಳಿಕೆಯಲ್ಲಿ ತಿಳಿಸಿದೆ.

6015 ಮೀಟರ್ ಎತ್ತರದಲ್ಲಿ ಸಿಲುಕಿದ್ದ ಇಬ್ಬರು ವಿದೇಶಿ ಪರ್ವತಾರೋಹಿಗಳ ರಕ್ಷಣೆ



ಡೆಹ್ರಾಡೂನ್: ಉತ್ತರಾಖಂಡ್‌ನ ಚಮೋಲಿ ಜಿಲ್ಲೆಯ ಚೌಖಂಬಾ III ಶಿಖರದ ಮಾರ್ಗದಲ್ಲಿ ಸಿಲುಕಿಕೊಂಡಿದ್ದ ವಿದೇಶಿ ಪರ್ವತಾರೋಹಿಗಳನ್ನು 6,015 ಮೀಟರ್ ಎತ್ತರದ ಪ್ರದೇಶದಿಂದ ಜಂಟಿ ಕಾರ್ಯಾಚರಣೆಯಲ್ಲಿ ಭಾರತೀಯ ವಾಯುಪಡೆ ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್) ರಕ್ಷಿಸಿದೆ.

ರಕ್ಷಣಾ ತಂಡ, ಶನಿವಾರ ತಡರಾತ್ರಿ ಸಿಕ್ಕಿಬಿದ್ದ ಪರ್ವತಾರೋಹಿಗಳನ್ನು ಪತ್ತೆ ಹಚ್ಚಿ ಸ್ಥಳಾಂತರಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆದರೆ ವ್ಯವಸ್ಥಾಪನಾ ನಿರ್ಬಂಧಗಳು ಭಾನುವಾರ ಬೆಳಿಗ್ಗೆ ತನಕ ಜೋಶಿಮಠಕ್ಕೆ ಅವರನ್ನು ಕಳಿಸುವುದನ್ನು ವಿಳಂಬಗೊಳಿಸಿದವು. ಪರ್ವತಾರೋಹಿಗಳಾದ ಯುಎಸ್‌ಎನ ಮಿಸ್ ಮಿಚೆಲ್ ಥೆರೆಸಾ ಮತ್ತು ಯುಕೆನ ಮಿಸ್ ಫಾವ್‌ಗೇನ್ ಮ್ಯಾನರ್ಸ್, ಅವರ ಆರೋಹಣ ಸಮಯದಲ್ಲಿ ಬಂಡೆಗಳ ಕುಸಿತದಿಂದ ಕಾವಲುಗಾರರಾಗಿದ್ದರು, ಇದರ ಪರಿಣಾಮವಾಗಿ ಅವರ ಪರ್ವತಾರೋಹಣ ಗೇರ್ ಮತ್ತು ವಸ್ತುಗಳು ಕಣಿವೆಗೆ ಬಿದ್ದವು. ಚಮೋಲಿ ಜಿಲ್ಲಾ ವಿಪತ್ತು ನಿರ್ವಹಣಾ ಕಚೇರಿಯ ಪ್ರಕಾರ, SDRಈ ತಂಡಗಳು ಶನಿವಾರದಂದು ಶೋಧ ಕಾರ್ಯಾಚರಣೆ ಪ್ರಾರಂಭಿಸಿ, ಭಾನುವಾರ ಬೆಳಗ್ಗೆ ಜೋಶಿಮಠಕ್ಕೆ ಕರೆತರಲಾಯಿತು.

ಟ್ರಂಪ್ ಭಾಷಣದ ವೇಳೆ ಕುಣಿದು ಕುಪ್ಪಳಿಸಿದ ಎಲಾನ್ ಮಸ್ಕ್



ಪೆನ್ಸಿಲ್ವೇನಿಯಾ: ಅಮೆರಿಕ ಅಧ್ಯಕ್ಷೀಯ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಅವರ ಪೆನ್ಸಿಲ್ವೇನಿಯಾ ಪ್ರಚಾರದ ವೇಳೆ ಕೋಟ್ಯಧಿಪತಿ ಉದ್ಯಮಿ ಎಲಾನ್ ಮಸ್ಕ್ ಕುಣಿದು ಕುಪ್ಪಳಿಸುವ ಮೂಲಕ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಗೆ ಬೆಂಬಲ ಪ್ರದರ್ಶಿಸಿದ್ದಾರೆ. ಜುಲೈನಲ್ಲಿ ಪ್ರಚಾರದ ವೇಳೆ ಟ್ರಂಪ್ ಮೇಲೆ ಹತ್ಯೆಯ ದಾಳಿ ನಡೆದ ಬಟ್ಲರ್ ಪ್ರದೇಶದ ಸ್ಥಳದಲ್ಲಿಯೇ ಈ ಪ್ರಚಾರ ಸಭೆ ನಡೆದಿದೆ. ಕಪ್ಪು ಬಣ್ಣದ ಮೇಕ್ ಅಮೆರಿಕಾ ಗ್ರೇಟ್ ಅಗೇನ್ (ಎಂಎಜಿಎ) ಟೋಪಿ ಧರಿಸಿದ್ದ ಮಸ್ಕ್, ಟ್ರಂಪ್ ಅವರು ವೇದಿಕೆ ಮೇಲೆ ಭಾಷಣ ಮಾಡುವಾಗ ಅವರ ಹಿಂಭಾಗದಲ್ಲಿ ಮೇಲೆ ಕೆಳಗೆ ಜಿಗಿದು ಟ್ರಂಪ್ ಬೆಂಬಲಿಗರ ಉತ್ಸಾಹವನ್ನು ಹೆಚ್ಚಿಸಿದರು.

ರಾಲಿ ಉದ್ದೇಶಿಸಿ ಮಾತನಾಡಿದ ಮಸ್ಕ್, ಟ್ರಂಪ್ ಅವರಿಗೆ ಮತ ಹಾಕುವುದಕ್ಕಿಂತ ಮುಖ್ಯವಾದ ಸಂಗತಿ ಬೇರೆ ಯಾವುದೂ ಇಲ್ಲ ಎಂದರು.

ಒಂದು ವೇಳೆ ಟ್ರಂಪ್ ಗೆಲ್ಲದೆ ಹೋದರೆ, ಅಮೆರಿಕಕ್ಕೆ ಇದೇ ಕೊನೆಯ ಚುನಾವಣೆಯಾಗಲಿದೆ. ಡೆಮಾಕ್ರಟಿಕ್ ಪಕ್ಷವು ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಶಸ್ತ್ರಾಸ್ತ್ರ ಹಕ್ಕು ಸೇರಿದಂತೆ ಅಮೆರಿಕನ್ನರ ಹಕ್ಕುಗಳನ್ನು ಕಿತ್ತುಕೊಳ್ಳಲಿದೆ ಎಂದು ಎಲಾನ್ ಮಸ್ಕ್ ಆರೋಪಿಸಿದರು.

ರೈಲ್ವೆ ಹಳಿ ಸ್ಫೋಟ ಯತ್ನ ಪ್ರಕರಣ: 6 ಮಂದಿಗೆ ಜೈಲು ಶಿಕ್ಷೆ



ಪಾಟ್ನಾ: ಬಿಹಾರದ ಪೂರ್ವ ಚಂಪಾರಣ್ ಜಿಲ್ಲೆಯ ಘೋರಸಾಹನ್ ರೈಲು ನಿಲ್ದಾಣದ ಬಳಿ 2016ರಲ್ಲಿ ರೈಲ್ವೆ ಹಳಿಯಲ್ಲಿ ಸುಧಾರಿತ ಸ್ಫೋಟಕ ಸಾಧನ (ಐಇಡಿ) ಇಟ್ಟು ಸ್ಫೋಟಿಸುವ ಯತ್ನ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ಸಂಸ್ಥೆ ವಿಶೇಷ ನ್ಯಾಯಾಲಯವು 6 ಮಂದಿಗೆ ಜೈಲು ಶಿಕ್ಷೆ ಮತ್ತು ದಂಡ ವಿಧಿಸಿದೆ. ಎಲ್ಲಾ ಅಪರಾಧಿಗಳಿಗೆ 5ರಿಂದ 12 ವರ್ಷದವರೆಗೆ ಜೈಲು ಶಿಕ್ಷೆ ವಿಧಿಸಲಾಗಿದೆ ಎಂದು ರಾಷ್ಟ್ರೀಯ ತನಿಖಾ ಸಂಸ್ಥೆ ಹೇಳಿಕೆ ಪ್ರಕಟಿಸಿದೆ. 2016ರ ಸೆ.30ರ ರಾತ್ರಿ ಆರೋಪಿಗಳು ಹಳಿಗಳ ಮೇಲೆ ಪ್ರೆಶರ್ ಕುಕ್ಕರ್ ಐಇಡಿ ಅಡಗಿಸಿಟ್ಟಿದ್ದರು. ನರ್ಕಟಿಯಾಗಂಜ್‌ನಿಂದ ಬರುತ್ತಿದ್ದ ಪ್ಯಾಸೆಂಜರ್ ರೈಲನ್ನು ಸ್ಫೋಟಿಸುವುದು ಅವರ ಯೋಜನೆಯಾಗಿತ್ತು. ಸ್ಥಳೀಯರು ಸಕಾಲದಲ್ಲಿ ಬಾಂಬ್ ಪತ್ತೆ ಹಚ್ಚಿದ ಬಳಿಕ ಅದನ್ನು ನಿಷ್ಕ್ರಿಯಗೊಳಿಸಲಾಗಿತ್ತು. ಉಮಾಶಂಕರ್ ರಾವುತ್ ಅಲಿಯಾಸ್ ರಾಜು ಪಟೇಲ್, ಗಜೇಂದ್ರ ಪಟೇಲ್ ಅಲಿಯಾಸ್ ಗಜೇಂದ್ರ ಠಾಕೂರ್, ರಾಕೇಶ್‌ಕುಮಾರ್ ಯಾದವ್ ಅಲಿಯಾಸ್ ರಾಕೇಶ್, ಮುಖೇಶ್ ಯಾದವ್ ಅಲಿಯಾಸ್ ಮುಕೇಶ್, ಮೋತಿ ಲಾಲ್ ಪಾಸ್ವಾನ್ ಅಲಿಯಾಸ್ ಮೋತಿ, ರಂಜಯ್‌ಕುಮಾರ್ ಶಾ ಅಲಿಯಾಸ್ ರಂಜಯ್ ಪ್ರಕರಣದಲ್ಲಿ ಭಾಗಿಯಾಗಿದ್ದರು.

ಯುಎಇ ರಾಯಭಾರಿ ನಿವಾಸದ ಮೇಲೆ ಸೂಡಾನ್ ಸೇನೆ ದಾಳಿ



ಅಬುಧಾಬಿ(ಯುಎಇ): ಸುಡಾನ್ ರಾಜಧಾನಿ ಖಾರ್ಟೂಮ್‌ನಲ್ಲಿನ ಯುಎಇ ರಾಯಭಾರಿಯ ನಿವಾಸದ ಮೇಲೆ ಸುಡಾನ್ ಸೇನೆ ದಾಳಿ ನಡೆಸಿದ್ದು, ರಾಯಭಾರಿಯ ನಿವಾಸ ಮತ್ತು ಸುತ್ತಮುತ್ತಲಿನ ಕಟ್ಟಡಗಳಿಗೆ ವ್ಯಾಪಕ ಹಾನಿಯಾಗಿದೆ ಎಂದು ಯುಎಇಯ ಭದ್ರತಾ ಮತ್ತು ಮಿಲಿಟರಿ ವ್ಯವಹಾರಗಳ ಸಹಾಯಕ ಸಚಿವ ಸಲೇಂ ಅಲ್ ಜಬೇರಿ ಹೇಳಿದ್ದಾರೆ.

ಈ ದಾಳಿಯು ಅಂತಾರಾಷ್ಟ್ರೀಯ ಸಂಪ್ರದಾಯ ಮತ್ತು ಮಾನದಂಡಗಳು, ವಿಶೇಷವಾಗಿ ರಾಜತಾಂತ್ರಿಕ ಸಂಬಂಧಗಳ ವಿಯೆನ್ನಾ ಸಮಾವೇಶ ಒಪ್ಪಂದದ ನಿಯಮಗಳ ಉಲ್ಲಂಘನೆ ಮಾತ್ರವಲ್ಲದೆ, ರಾಜತಾಂತ್ರಿಕ ಆವರಣದ ಮೇಲೆ ದಾಳಿ ನಡೆಸಿರುವುದು ಮೂಲಭೂತ ತತ್ವದ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಯುಎಇ ಹೇಳಿದೆ.

ರಾಯಭಾರಿಯ ನಿವಾಸದ ಮೇಲೆ ದಾಳಿ ಮಾಡಿರುವುದನ್ನು ಸ್ಪಷ್ಟವಾಗಿ ತೋರಿಸುವ ಚಿತ್ರಗಳು ಮತ್ತು ಪುರಾವೆಗಳು ಲಭ್ಯವಿವೆ ಎಂದು ಒತ್ತಿ ಹೇಳಿದ ಸಚಿವ ಸಲೇಂ ಅಲ್ ಜಬೇರಿ, ಸುಡಾನ್ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮತ್ತು ಅದರ ಸಶಸ್ತ್ರ ಪಡೆಗಳು ಈ ವಿಷಯದಲ್ಲಿ ಸುಳ್ಳು ಹೇಳುತ್ತಿವೆ ಎಂದು ಪ್ರತಿಪಾದಿಸಿದರು.

ಕೊಡಗಿನ ಬೆಳೆಗಾರರಿಗೆ ಅಗತ್ಯ ಸೌಲಭ್ಯ

- ಕೃಷಿ ಸಚಿವ ಚೆಲುವರಾಯಸ್ವಾಮಿ ಭರವಸೆ
- ಮಡಿಕೇರಿ ಜನೋತ್ಸವದಲ್ಲಿ ಕಾಫಿ ದಸರಾಗೆ ಚಾಲನೆ



ಮಡಿಕೇರಿ ಗಾಂಧಿ ಮೈದಾನದಲ್ಲಿ ಕಪ್‌ಗೆ ಕಾಫಿ ಸುರಿಯುವ ಮೂಲಕ ಕಾಫಿ ದಸರಾಗೆ ಸಚಿವರಾದ ಚೆಲುವರಾಯಸ್ವಾಮಿ, ದಿನೇಶ್ ಗುಂಡೂರಾವ್ ಚಾಲನೆ ನೀಡಿದರು.

ಮಡಿಕೇರಿ, ಅ.6–ಕೊಡಗಿನ ಆರ್ಥಿಕತೆ ಬೆನ್ನೆಲುಬಾಗಿರುವ ಕಾಫಿ ಒಳಗೊಂಡಂತೆ ಇತರೆ ಕೃಷಿ ಬೆಳೆ ಸಮಗ್ರ ಅಭಿವೃದ್ಧಿ ಮತ್ತು ಬೆಳೆಗಾರರಿಗೆ ಅಗತ್ಯ ಮೂಲಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರ ಸದಾ ಕೃಷಿಕರೊಂದಿಗೆ ಇರುವುದಾಗಿ ಕೃಷಿ ಸಚಿವ ಚೆಲುವರಾಯಸ್ವಾಮಿ ತಿಳಿಸಿದರು.

ನಗರದ ಗಾಂಧಿ ಮೈದಾನದಲ್ಲಿ ನಡೆಯುತ್ತಿರುವ ಐತಿಹಾಸಿಕ ಮಡಿಕೇರಿ ಜನೋತ್ಸವದಲ್ಲಿ ಇದೇ ಪ್ರಥಮ ಬಾರಿಗೆ ಆಯೋಜಿಸಿರುವ ಕಾಫಿ ದಸರಾಗೆ ಕಪ್‌ಗೆ ಕಾಫಿ ಸುರಿಯುವ ಮೂಲಕ ಚಾಲನೆ ನೀಡಿ ಮಾತನಾಡಿದರು, ಕೃಷಿ ಇಲಾಖೆ ಮತ್ತು ರಾಜ್ಯ ಸರ್ಕಾರದ ಅಧೀನಕ್ಕೆ ಕಾಫಿ ಬೆಳೆ ಒಳಪಡುವುದಿಲ್ಲ. ವಿವಿಧ ಬೆಳೆಗಳೊಂದಿಗೆ ಕಾಫಿ ಬೆಳೆಯುವವರು ಕೂಡ ಕೃಷಿಕರೇ ಆಗಿರುವ ಹಿನ್ನೆಲೆಯಲ್ಲಿ ಅವರಿಗೆ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಅಗತ್ಯ ನೆರವು ಒದಗಿಸುವ ಭರವಸೆ ನೀಡಿದರು.

250 ಕೃಷಿ ಹೊಂಡ: ಜಲಾಶಯ ಆಶ್ರಯಿಸಿ ರಾಜ್ಯದ ವಿವಿಧೆಡೆಗಳಲ್ಲಿ ಭತ್ತವನ್ನು ವ್ಯಾಪಕವಾಗಿ ಬೆಳೆಯಲಾಗುತ್ತಿದೆ. ಹಲವಾರು ಬಾರಿ ಕೃಷಿ

> ಕಾವೇರಿ ನದಿ ಕೊಡಗು ಸೇರಿದಂತೆ ಕೋಟ್ಯಾಂತರ ಜನರ ಜೀವನಾಡಿಯಾಗಿದೆ. ಮಳೆಗಾಲ ಕೊಡಗಿನ ಜನ ಸಂಕಷ್ಟ ಎದುರಿಸುತ್ತಾರೆ. ಇಲ್ಲಿ ಮಳೆಯಾದರೆ ಅದರ ನೀರನ್ನು ಬಳಸಿ ಲಕ್ಷಾಂತರ ಪ್ರದೇಶದಲ್ಲಿ ಕೃಷಿ ಮಾಡಲಾಗುತ್ತದೆ. ಈ ಹಿನ್ನೆಲೆಯಲ್ಲಿ ಕೊಡಗಿನ ಬಗ್ಗೆ ನಮಗೆ ಅಪಾರ ಅಭಿಮಾನವಿದೆ. ಹೀಗಾಗಿ ಕಾವೇರಿ ಕ್ಷೇತ್ರ ಭಾಗಮಂಡಲದಲ್ಲಿ ಅನುಕೂಲಕರ ಸಂದರ್ಭಗಳಲ್ಲಿ 'ಕಾವೇರಿ ಆರತಿ' ನಡೆಸುವ ಚಿಂತನೆ ಸರ್ಕಾರದ್ದಾಗಿದೆ.
>
> –ಚೆಲುವರಾಯಸ್ವಾಮಿ, ಕೃಷಿ ಸಚಿವ.

ಚಟುವಟಿಕೆಗಳ ಆರಂಭಿಕ ಹಂತದಲ್ಲಿ ನೀರಿನ ಅಭಾವದಿಂದ ಕೃಷಿಕರು ಸಂಕಷ್ಟಕ್ಕೆ ಸಿಲುಕಲಿದ್ದಾರೆ. ಕೊಡಗು ಜಿಲ್ಲೆಗೆ 250 ಕೃಷಿ ಹೊಂಡ ನಿರ್ಮಿಸಲು ಅವಕಾಶ ನೀಡಲಾಗುವುದು. ಕಾವೇರಿ ನದಿ ಮೂಲಕ ನಾಡಿನ ಹಲವೆಡೆಗಳಿಗೆ ನೀರುಣಿಸುವ ಕೊಡಗು ಮುಂಗಾರಿನ ಅವಧಿಯಲ್ಲಿ ಅತಿವೃಷ್ಟಿಯಿಂದ ತೀವ್ರ ಸಂಕಷ್ಟಕ್ಕೆ ಒಳಗಾಗುತ್ತದೆ. ಇಂತಹ ಯಾವುದೇ ಸಂದರ್ಭಗಳಲ್ಲಿ ಕೊಡಗಿನ ಜನತೆಯ ಸಂಕಷ್ಟ ನಿವಾರಣೆ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳಲಿದೆ ಎಂದರು.

ಸಮತೋಲನದ ಅಭಿವೃದ್ಧಿಯಾಗಲಿ: ಯಾವುದೇ ಒಂದು ಪ್ರದೇಶ ಆಧುನೀಕತೆ ಬದಲಾವಣೆಯಿಂದ ಹೊರಗಿರಲು ಸಾಧ್ಯವಾಗುವುದಿಲ್ಲ. ಯಾವುದೇ ಬದಲಾವಣೆ ಸಂದರ್ಭ ನಮ್ಮ ಮೂಲ ಸಂಸ್ಕೃತಿ ಕೈ ಬಿಡದೆ ಸಮತೋಲನದ ಅಭಿವೃದ್ಧಿ ಸಾಧಿಸಬೇಕು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು. ಕಾಫಿ ಕೃಷಿ ಮತ್ತು ಉದ್ಯಮ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಇಲ್ಲಿ ಬೆಳೆಯುವ ಕಾಫಿ ಬ್ರಾಂಡ್‌ಗಳನ್ನು ಹುಟ್ಟು ಹಾಕುವ, ಆಂತರಿಕ ಕಾಫಿ ಬಳಕೆ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ರಾಜ್ಯ ಮಟ್ಟದಲ್ಲಿ ಯೋಜನೆ ರೂಪಿಸುವ ಅಗತ್ಯವಿದೆ. ಇಂತಹ ಪ್ರಯತ್ನ ಕಾಫಿ ಬೆಳೆಗಾರರಿಗೆ ಅನುಕೂಲತೆ ಒದಗಿಸಲಿದೆ. ಕೊಡಗು ಜಿಲ್ಲೆಗೆ ಮುಂದಿನ ಬಜೆಟ್‌ನಲ್ಲಿ ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿಶೇಷ ಕೊಡುಗೆ ನೀಡಲಾಗುವುದು ಎಂದರು.

ಮಣ್ಣಿನಿಂದ ಮಾರುಕಟ್ಟೆಗೆ: ಕಾಫಿ ಉತ್ಪಾದನೆಯನ್ನು ಮುಂದಿನ ಒಂದು ದಶಕಗಳ ಅವಧಿಯಲ್ಲಿ ದುಪ್ಪಟ್ಟು ಮತ್ತು ಗುಣಮಟ್ಟ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಮಣ್ಣಿನಿಂದ ಮಾರುಕಟ್ಟೆಯವರೆಗೆ ಎಂಬ ಯೋಜನೆ ರೂಪಿಸಿ, ದೃಢ ಹೆಜ್ಜೆಗಳನ್ನಿರಿಸಿರುವುದಾಗಿ ಕಾಫಿ ಮಂಡಳಿ ಅಧ್ಯಕ್ಷ ದಿನೇಶ್ ದೇವ ವೃಂದ ತಿಳಿಸಿದರು.

ಕೇಂದ್ರ ಸರ್ಕಾರ ಕಾಫಿ ಮಹತ್ವ ಅರಿತಿದ್ದು, ಕಾಫಿ ಉದ್ಯಮ ಅಭಿವೃದ್ಧಿ ನಿಟ್ಟಿನಲ್ಲಿ ಕಾಫಿ ಮಂಡಳಿಗೆ 307 ಕೋಟಿ ರೂ. ಅನುದಾನ ಒದಗಿಸಿದೆ. ಇದರಲ್ಲಿ 19 ಕೋಟಿ ರೂ. ಅನ್ನು ಮಂಡಳಿಯಿಂದ ಕೊಡಗಿನ ಕಾಫಿ ಬೆಳೆಗಾರರಿಗೆ ವಿವಿಧ ಯೋಜನೆಯಡಿ ಸಹಾಯಧನ ರೂಪದಲ್ಲಿ ಒದಗಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

ಪ್ರಸ್ತುತ ಭಾರತೀಯರ ಕಾಫಿ ಸೇವನೆ ಪ್ರಮಾಣ ತಲಾ 30 ಕಪ್‌ಗಳಿದೆ. ಇದನ್ನು ಕನಿಷ್ಠ 60 ಕಪ್‌ಗೆ ಹೆಚ್ಚಿಸಿದಲ್ಲಿ ಕಾಫಿ ಆಂತರಿಕ ಬಳಕೆ ಪ್ರಮಾಣ 2.50 ಲಕ್ಷ ಟನ್‌ನಿಂದ 3.50 ಲಕ್ಷ ಟನ್‌ಗಳಷ್ಟಾಗಬಹುದು. ಇದರಿಂದ ಬೆಳೆಗಾರಿಗೆ ಹೆಚ್ಚಿನ ಪ್ರಯೋಜನ ದೊರಕಿಸಿಕೊಡಲಿದೆ ಎಂದು ಹೇಳಿದರು.

ಸನ್ಮಾನ: ಇದೇ ವೇಳೆ ಮಡಿಕೇರಿ ದಸರಾ ಸಮಿತಿ, ಸಾಂಸ್ಕೃತಿಕ ಸಮಿತಿ ವತಿಯಿಂದ ಸಚಿವರಾದ ಚೆಲುವರಾಯಸ್ವಾಮಿ, ದಿನೇಶ್ ಗುಂಡೂರಾವ್, ಕಾಫಿ ಮಂಡಳಿ ಅಧ್ಯಕ್ಷ ದಿನೇಶ್ ದೇವ ವೃಂದ ಅವರನ್ನು ಸನ್ಮಾನಿಸಲಾಯಿತು. ಜಿಲ್ಲಾಧಿಕಾರಿ ವೆಂಕಟ್ ರಾಜಾ, ಎಸಿ ವಿನಾಯಕ ನರ್ವಾಡೆ, ಮಾಜಿ ಎಂಎಲ್‌ಸಿ ವೀಣಾ ಅಚ್ಚಯ್ಯ, ಕರ್ನಾಟಕ ಪ್ಲಾಂಟರ್ಸ್ ಅಸೋಸಿಯೇಷನ್ ಕಾರ್ಯದರ್ಶಿ ಕೆ.ರಾಜೀವ್, ಕೂರ್ಗ್ ಪ್ಲಾಂಟರ್ಸ್ ಅಸೋಸಿಯೇಷನ್ ಅಧ್ಯಕ್ಷ ನಂದಾ ಬೆಳ್ಯಪ್ಪ, ಮಹಿಳಾ ಕಾಫಿ ಜಾಗೃತಿ ಸಂಘದ ಪ್ರಧಾನ ಕಾರ್ಯದರ್ಶಿ ಅನಿತಾ ನಂದ, ಕಾಫಿ ಮಂಡಳಿ ಸದಸ್ಯ ತಳೂರು ಕಿಶೋರ್ ಕುಮಾರ್, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಧರ್ಮಜ ಉತ್ತಪ್ಪ, ಉಪಾಸಿಯ ಮಾಜಿ ಅಧ್ಯಕ್ಷ ವಿನೋದ್ ಶಿವಪ್ಪ, ದಸರಾ ಸಮಿತಿ ಪ್ರಧಾನ ಕಾರ್ಯದರ್ಶಿ ಬಿ.ವೈರಾಜೇಶ್ ಯಲ್ಲಪ್ಪ, ಅಮೇರಿಕದ ಅಕ್ಕ ಸಂಘಟನೆ ಪ್ರಮುಖ ಬಸವರಾಜ ಗೌಡ ಉಪಸ್ಥಿತರಿದ್ದರು.

34 ಮಳಿಗೆಗಳಲ್ಲಿ ಮಾಹಿತಿ

ಕಾಫಿ ಕೃಷಿ–ಉದ್ಯಮದಲ್ಲಿ ಆಗುತ್ತಿರುವ ಬದಲಾವಣೆ, ಸೌಲಭ್ಯಗಳ ಬಗ್ಗೆ ಜಿಲ್ಲೆಯ ಬೆಳೆಗಾರರ ಸಮೂಹಕ್ಕೆ ಮಾಹಿತಿ ಒಳಗೊಂಡಂತೆ ಅರಿವು ಮೂಡಿಸುವ ನಿಟ್ಟಿನಲ್ಲಿ ಈ ಬಾರಿಯ ಮಡಿಕೇರಿ ದಸರಾದಲ್ಲಿ ಕಾಫಿ ದಸರಾಕ್ಕೆ ನಗರದ ಗಾಂಧಿ ಮೈದಾನದಲ್ಲಿ ಚಾಲನೆ ನೀಡಲಾಯಿತು.

ಶಾಸಕ ಡಾ.ಮಂತರ್‌ಗೌಡ ಚಿಂತನೆಯಂತೆ ಇದೇ ಮೊದಲ ಬಾರಿಗೆ ಎರಡು ದಿನ ಕಾಫಿ ದಸರಾ ಆಯೋಜಿಸಲಾಗಿದ್ದು, ವಿವಿಧ ಕಾಫಿ ಉದ್ದಿಮೆ, ಇಲಾಖೆಗಳ 34 ಮಳಿಗೆಗಳು ಜಿಲ್ಲೆಯ ಕೃಷಿಕರ ಸಮೂಹಕ್ಕೆ ಅಗತ್ಯ ಮಾಹಿತಿ ಒದಗಿಸಿರುವುದು ವಿಶೇಷವಾಗಿದೆ. ವಿವಿಧ ಸಂಸ್ಥೆಗಳು ಮಳಿಗೆಗಳನ್ನು ತೆರೆದು ಕಾಫಿ ಸೇರಿದಂತೆ ವಿವಿಧ ಕೃಷಿಗೆ ಪೂರಕವಾದ ಸಾಮಗ್ರಿ ಮತ್ತು ಮಾಹಿತಿಯನ್ನು ಒದಗಿಸಲಾಗುತ್ತಿದೆ.

ಕೃಷಿ ಭೂಮಿ ಪರಿವರ್ತನೆ ಬೇಡ

ಕಾಫಿ ಬೆಳೆಗಾರರು ಸಾಕಷ್ಟು ಸಂಕಷ್ಟದಲ್ಲಿದ್ದು, ಅವರಿಗೆ ನೆರವಾಗುವ ಕಾರ್ಯ ನಡೆಯಬೇಕಾಗಿದೆ. ಕೊಡಗಿನ ಕೃಷಿ ಸಂಸ್ಕೃತಿ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಭತ್ತದ ಗದ್ದೆಗಳ ಭೂ ಪರಿವರ್ತನೆಗೆ ಅವಕಾಶ ನೀಡಬೇಡಿ ಎಂದು ಶಾಸಕ ಡಾ.ಮಂತರ್‌ಗೌಡ ಮಾತನಾಡಿ ಕೃಷಿ ಸಚಿವರಲ್ಲಿ ವಿನಂತಿಸಿದರು.

ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಮಾತನಾಡಿ, ಮಡಿಕೇರಿ ದಸರಾದಲ್ಲಿ ಕಾಫಿ ಕೃಷಿಗೆ ಆದ್ಯತೆ ನೀಡಿ ಕಾರ್ಯಕ್ರಮ ಆಯೋಜಿಸುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಮುಂದಿನ ವರ್ಷಗಳಲ್ಲೂ ದಸರಾ ಉತ್ಸವ ಸಂದರ್ಭ ಕಾಫಿಗೆ ಹೆಚ್ಚಿನ ಒತ್ತು ನೀಡುವ ಮೂಲಕ ಕಾಫಿ ಮಹತ್ವವನ್ನು ನಾಡಿನುದ್ದಕ್ಕೂ ಪಸರಿಸುವ ಕೆಲಸವಾಗಲಿ ಎಂದು ಹಾರೈಸಿದರು.



ಕಾಫಿ ದಸರಾ ಮಳಿಗೆಗಳಲ್ಲಿ ಕಾಫಿ ಬೆಳೆ ಬಗ್ಗೆ ಮಾಹಿತಿ ನೀಡುತ್ತಿರುವುದು.

ಭೂ ಸುಧಾರಣಾ ಕಾಯ್ದೆ ತಿದ್ದುಪಡಿಯಿಂದ ಕೊಡವ ಲ್ಯಾಂಡ್ ನಾಶ

ಮಡಿಕೇರಿ, ಅ.6–ಕರ್ನಾಟಕ ಭೂ ಸುಧಾರಣಾ ಕಾಯ್ದೆ ತಿದ್ದುಪಡಿಯಿಂದ ಕೊಡವ ಲ್ಯಾಂಡ್ ಸಂಪೂರ್ಣ ನಾಶವಾಗುತ್ತಿದೆ ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ಎನ್.ಯು.ನಾಚಪ್ಪ ಆರೋಪಿಸಿದರು.

ಕೊಡಗಿನ ವಿವಿಧೆಡೆ ನಡೆಯುತ್ತಿರುವ ಬೃಹತ್ ಭೂ ಪರಿವರ್ತನೆ ಮತ್ತು ಭೂ ವಿಲೇವಾರಿ ಸ್ಥಗಿತಗೊಳಿಸಬೇಕೆಂದು ಒತ್ತಾಯಿಸಿ ಸಿಎನ್‌ಸಿ ವತಿಯಿಂದ ತಿತಿಮತಿಯಲ್ಲಿ ನಡೆದ ಜನಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೊಡಗಿನಲ್ಲಿ ಪ್ರವಾಸೋದ್ಯಮವನ್ನು ಬೂಸ್ಟ್ ಮಾಡುವುದಾಗಿ ಜಿಲ್ಲಾಡಳಿತ ಹೇಳಿಕೆ ನೀಡುತ್ತಿದೆ. ಪ್ರವಾಸೋದ್ಯಮದ ಬೆಳವಣಿಗೆ ಎಂದರೆ ಹಸಿರ ಬೆಟ್ಟಗುಡ್ಡಗಳನ್ನು ಕಡಿದು ಜಲನಾಳಗಳನ್ನು ನಾಶಪಡಿಸುವುದೇ ಎನ್ನುವುದನ್ನು ಶ್ವೇತಪತ್ರದ ಮೂಲಕ ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದರು.

ರಾಜಕಾರಣಿಗಳು ಮತಬ್ಯಾಂಕ್‌ಗಾಗಿ ಅಕ್ರಮ ಬಾಂಗ್ಲಾ ವಲಸಿಗರಿಗೆ ಆಶ್ರಯ ನೀಡುತ್ತಿದ್ದಾರೆ. ನಕಲಿ ಗುರುತಿನ ಚೀಟಿ ಮತ್ತು ಆಧಾರ್ ಕಾರ್ಡ್ ಮಾಡಿಕೊಡಲಾಗುತ್ತಿದೆ. ಅಲ್ಲದೆ, ಶೋಷಿತರು ಎನ್ನುವ ಹಣೆಪಟ್ಟಿ ಕಟ್ಟಿ ಬಿರುನಾಣಿ ಮತ್ತು ಹೈಸೊಡ್ಲೂರು ಭಾಗದಲ್ಲಿ ಅಕ್ರಮ ಸಕ್ರಮದಡಿ ನೆಲೆ ಕಲ್ಪಿಸಲು ಹೊಂಚು ಹಾಕುತ್ತಿದ್ದಾರೆ. ಕೊಡವರೆಲ್ಲರೂ ಒಗ್ಗಟ್ಟಾಗಿ ಹೋರಾಟ ನಡೆಸಿದಾಗ ಮಾತ್ರ ಇದೆಲ್ಲವನ್ನು ತಡೆಯಲು ಸಾಧ್ಯ ಎಂದರು. ಇದೇ ವೇಳೆ ಸಿಎನ್‌ಸಿ ಪ್ರಮುಖರು ಹಾಗೂ ಗ್ರಾಮಸ್ಥರು ಭೂ ಪರಿವರ್ತನೆ ಮತ್ತು ಭೂ ವಿಲೇವಾರಿ ವಿರುದ್ಧ ನಿರ್ಣಯ ಕೈಗೊಂಡು ಪ್ರತಿಜ್ಞಾವಿಧಿ ಸ್ವೀಕರಿಸಿದರು. ಮಾಂಗೇರ ಪದ್ಮಿನಿ, ಚಿಂಡಮಾಡ ಸರಿತಾ, ಕೂತಂಡ ವಾಣಿ, ಬೊಳ್ತಂಡ ಮೀನಾ, ಕಳ್ಳಿಚಂಡ ಪವಿತಾ, ಗಾಂಡಂಗಡ ಸುಂದರಿ, ಕೊಚ್ಚೆರ ಸ್ವಾತಿ, ಪಾಲೆಂಗಡ ಗಂಗಮ್ಮ, ಚೆಕ್ಕೇರ ಕೃತಿಕಾ, ಮದ್ರೀರ ಕೃತಿಕಾ, ಚೆಪ್ಪುಡಿರ ಕಾರ್ಯಪ್ಪ, ಬೊಳ್ಳಿಮಾಡ ವಸಂತ ನಂಜಪ್ಪ, ಚೆಪ್ಪುಡಿರ ಮಾಚು, ಬೊಳ್ತಂಡ ಪ್ರಕಾಶ್, ಚಂಬಂಡ ಜನತ್, ಚಟ್ಟಂಗಡ ಸಜನ್ ಸೋಮಣ್ಣ, ನಾಯಕಂಡ ರಮೇಶ್ ಮತ್ತಿತರರು ಪಾಲ್ಗೊಂಡಿದ್ದರು.



ತಿತಿಮತಿಯಲ್ಲಿ ಭೂ ಪರಿವರ್ತನೆ ಮತ್ತು ಭೂ ವಿಲೇವಾರಿ ವಿರುದ್ಧ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ನೇತೃತ್ವದಲ್ಲಿ ಜನಜಾಗೃತಿ ಮೂಡಿಸಲಾಯಿತು.

ವಾಹನ ಡಿಕ್ಕಿ: ಪ್ರವಾಸಿ ವಿದ್ಯಾರ್ಥಿ ಸಾವು

ಕುಶಾಲನಗರ: ಓಮಿನಿ ಡಿಕ್ಕಿ ಹೊಡೆದ ಪರಿಣಾಮ ಪ್ರವಾಸಕ್ಕೆ ಬಂದಿದ್ದ ತಮಿಳುನಾಡು ಮೂಲದ ಇಂಜಿನಿಯರಿಂಗ್ ವಿದ್ಯಾರ್ಥಿ ಮೃತಪಟ್ಟ ಘಟನೆ ತಾಲೂಕಿನ ಗುಡ್ಡೆಹೊಸೂರು ಬಳಿಯ ಮೈಸೂರು–ಮಡಿಕೇರಿ ಹೆದ್ದಾರಿಯಲ್ಲಿ ಶನಿವಾರ ರಾತ್ರಿ ನಡೆದಿದೆ.

ತಮಿಳುನಾಡಿನ ನಾಮಕಲ್ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿ ಅಗಸ್ಟಿನ್ ದಾಸ್(19) ಮೃತಪಟ್ಟಿದ್ದು, ಮತ್ತೋರ್ವ ವಿದ್ಯಾರ್ಥಿ ರವಿಕುಮಾರ್‌ಗೆ ಗಾಯವಾಗಿದೆ. ನಾಮಕಲ್ ಇಂಜಿನಿಯರಿಂಗ್ ಕಾಲೇಜಿನಿಂದ ಕೊಡಗಿಗೆ ಪ್ರವಾಸಕ್ಕೆ ಬಂದಿದ್ದ 70 ವಿದ್ಯಾರ್ಥಿಗಳಿದ್ದ ಬಸ್ ಅನ್ನು ಗುಡ್ಡೆಹೊಸೂರು ಮೆಗ್ನಿಫಿಕ್ ಹೋಟೆಲ್ ಬಳಿ ನಿಲ್ಲಿಸಲಾಗಿತ್ತು. ಈ ವೇಳೆ ರಸ್ತೆ ದಾಟುತ್ತಿದ್ದ ಈ ಇಬ್ಬರು ವಿದ್ಯಾರ್ಥಿಗಳಿಗೆ ಮಡಿಕೇರಿ ಕಡೆಗೆ ಹೋಗುತ್ತಿದ್ದ ಓಮಿನಿ ಡಿಕ್ಕಿಯಾಗಿದೆ. ಪರಿಣಾಮ ಗಂಭೀರ ಗಾಯಗೊಂಡ ಅಗಸ್ಟಿನ್ ದಾಸ್ (19) ಮೃತಪಟ್ಟಿದ್ದು, ಗಾಯಗೊಂಡ ರವಿಕುಮಾರ್‌ನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಸ್ಥಳ ಪರಿಶೀಲಿಸಿದ ಕುಶಾಲನಗರ ಸಂಚಾರ ಠಾಣೆ ಪೊಲೀಸರು, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಅ.13, ವೀರಶೈವ ಲಿಂಗಾಯತ ಕ್ರಿಕೆಟ್ ಪಂದ್ಯಾವಳಿ



ವಿರಾಜಪೇಟೆ: ಇಲ್ಲಿನ ಮಾಯಮುಡಿ ಮೈದಾನದಲ್ಲಿ ಅ.13ರಂದು ವೀರಶೈವ ಲಿಂಗಾಯತ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಪಟ್ಟಣದ ವೀರಶೈವ–ಲಿಂಗಾಯತ ಮಹಾಸಭಾ ಕಚೇರಿಯಲ್ಲಿ ನಡೆದ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ವಿರಾಜಪೇಟೆ ಹಾಗೂ ಪೊನ್ನಂಪೇಟೆ ತಾಲೂಕು ಘಟಕದ ಸಭೆಯಲ್ಲಿ ಸಮಾಜದ ಗೌರವಾಧ್ಯಕ್ಷ ಅರಮೇರಿ ಅಳಮಚೇರಿ ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ, ಸಮಾಜದವರನ್ನು ಪರಸ್ಪರ ಒಗ್ಗೂಡಿಸಲು ಹಾಗೂ ಯುವ ಜನಾಂಗಕ್ಕೆ ಕ್ರೀಡೆಯಲ್ಲಿ ಪ್ರೋತ್ಸಾಹ ನೀಡುವ ಸಲುವಾಗಿ ಪಂದ್ಯಾವಳಿ ಆಯೋಜಿಸಲಾಗುತ್ತಿದೆ ಎಂದರು.

ವಿರಾಜಪೇಟೆ ಹಾಗೂ ಪೊನ್ನಂಪೇಟೆ ತಾಲೂಕು ಘಟಕದ ಅಧ್ಯಕ್ಷ ಎನ್.ಎಂ.ರಾಜೇಶ್ ಮಾತನಾಡಿ, ಕ್ರೀಡಾಕೂಟದಲ್ಲಿ ಮಹಾಸಭಾ ರಾಜ್ಯ ಸಮಿತಿ ಮುಖಂಡರನ್ನು ಸನ್ಮಾನಿಸಲಾಗುವುದು ಎಂದರು.

ಸಭೆಯಲ್ಲಿ ಉಪಾಧ್ಯಕ್ಷ ರಘು ಶ್ರೀಕಂಠಪ್ಪ, ಕಾರ್ಯದರ್ಶಿ ವೇದ ಜಯರಾಜ್, ಖಜಾಂಚಿ ಲೋಕೇಶ್, ನಿರ್ದೇಶಕರಾದ ಮಹದೇವಪ್ಪ ವಿನಯ್, ಮಹೇಶ್, ನಾಗಮ್ಮ ಇತರರು ಉಪಸ್ಥಿತರಿದ್ದರು.

ಆರ್‌ಎಸ್‌ಎಸ್‌ನಿಂದ ವಿಜಯದಶಮಿ ಪಥಸಂಚಲನ



ಚಾಮರಾಜನಗರದಲ್ಲಿ ಆರ್‌ಎಸ್‌ಎಸ್ ಕಾರ್ಯಕರ್ತರು ವಿಜಯದಶಮಿ ಪಥಸಂಚಲನ ನಡೆಸಿದರು.

ಚಾಮರಾಜನಗರ, ಅ.6–ನಗರದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ (ಆರ್‌ಎಸ್‌ಎಸ್)ಸಂಘದಿಂದ ವಿಜಯದಶಮಿ ಪಥಸಂಚಲನ ನಡೆಸಲಾಯಿತು.

ನಗರದ ಮಾರಮ್ಮ ದೇವಸ್ಥಾನ ಮುಂಭಾಗದಿಂದ ಹೊರಟ ಮೆರವಣಿಗೆ ರಥ ಬೀದಿ, ಮಹಾವೀರ ವೃತ್ತ, ದೊಡ್ಡಂಗಡಿ ಬೀದಿ, ವಾಣಿಯಾರ್ ರಸ್ತೆ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ರಸ್ತೆ, ಭುವನೇಶ್ವರಿ ವೃತ್ತ, ಸಂತೇಮರಹಳ್ಳಿ ವೃತ್ತ, ಚಿಕ್ಕಂಗಡಿ ಬೀದಿ ಮಾರ್ಗವಾಗಿ ಮತ್ತೆ ಮಾರಮ್ಮ ಗುಡಿಯಲ್ಲಿ ಅಂತ್ಯಗೊಂಡಿತ್ತು.

ಭಾರತಾಂಬೆ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದ ಬಳಿಕ ಘನವೇಷಧಾರಿಗಳು, ಶಿಸ್ತು ಬದ್ಧವಾಗಿ ಮೆರವಣಿಗೆಯಲ್ಲಿ ಸಾಗಿದರು. ಪ್ರಮುಖ ವೃತ್ತಗಳಲ್ಲಿ ಸಾರ್ವಜನಿಕರು ಘನವೇಷಧಾರಿಗಳಿಗೆ ಪುಷ್ಪವೃಷ್ಟಿ ಮಾಡಿದರು.

ಸಂಜೆ 4.30ಕ್ಕೆ ಆರಂಭವಾದ ಮೆರವಣಿಗೆ ಒಂದು ಗಂಟೆಗೂ ಹೆಚ್ಚು ಕಾಲ ನಡೆಯಿತು. ವಿಜದಶಮಿ ನಡೆಗೆ ವಿಜಯ ದಕಡೆಗೆ ಎಂಬ ಘೋಷಣೆಯೊಂದಿಗೆ ಪಥಸಂಚಲನ ನಡೆಸಲಾಯಿತು. ಮೆರವಣಿಗೆಯಲ್ಲಿ ಆರ್‌ಎಸ್‌ಎಸ್ ವಿಭಾಗೀಯ ಕಾರ್ಯವಾಹ ಮಹೇಶ್, ಜಿಲ್ಲಾ ಕಾರ್ಯವಾಹ ಚಂದ್ರಪ್ಪ, ಶಿವಕುಮಾರ್, ಸಂಘ ಚಾಲಕ ಕೆ.ವಿ.ರಾಜಣ್ಣ, ನಗರಸಭೆ ಅಧ್ಯಕ್ಷ ಸುರೇಶ್ ನಾಯಕ, ಕಾಡಾ ಮಾಜಿ ಅಧ್ಯಕ್ಷ ನಿಜಗುಣ ರಾಜು, ಚುಡಾ ಮಾಜಿ ಅಧ್ಯಕ್ಷರಾದ ಕುಲಗಾಣ ಶಾಂತಮೂರ್ತಿ, ಎಸ್.ಬಾಲಸುಬ್ರಮಣ್ಯ, ಕಾಡಹಳ್ಳಿ ಕುಮಾರ್, ಚಿಕ್ಕರಾಜು, ಶಿವಣ್ಣ, ಶಿವಕುಮಾರಸ್ವಾಮಿ, ಶ್ರೀಕಾಂತ್ ಮೊದಲಾದವರು ಇದ್ದರು. ಡಿವೈಎಸ್ಪಿ ಲಕ್ಷ್ಮಯ್ಯ ನೇತೃತ್ವದಲ್ಲಿ ಪೊಲೀಸ್ ಬಿಗಿ ಬಂದೋಬಸ್ತ್ ನಿಯೋಜಿಸಲಾಗಿತ್ತು.

ಇಂದಿನಿಂದ ಚಾಮರಾಜನಗರ ದಸರಾ

- ಮೂರು ದಿನ ವಿಜೃಂಭಣೆಯ ಕಾರ್ಯಕ್ರಮ
- ಆಚರಣೆಗೆ ಜಿಲ್ಲಾಡಳಿತದಿಂದ ಸಿದ್ಧತೆ

ಚಾಮರಾಜನಗರ, ಅ.6–ಮೈಸೂರು ದಸರಾ ಮಹೋತ್ಸವ ಭಾಗವಾಗಿ ಇಂದಿನಿಂದ(ಅ.7) ಮೂರು ದಿನ ಚಾಮರಾಜನಗರದಲ್ಲೂ ವಿಜೃಂಭಣೆಯಿಂದ ದಸರಾ ಆಚರಿಸಲು ಜಿಲ್ಲಾಡಳಿತ ಸಿದ್ಧತೆ ನಡೆಸಿದೆ.


ನಗರದ ಜೆ.ಹೆಚ್.ಪಟೇಲ್ ಸಭಾಂಗಣ, ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗ ಮಂದಿರ, ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ಹಾಗೂ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಮುಂಭಾಗದ ಮುಖ್ಯ ವೇದಿಕೆಯಲ್ಲಿ ವಿವಿಧ ಕಾರ್ಯಕ್ರಮ ಆಯೋಜನೆಗೆ ತಯಾರಿ ನಡೆಸಲಾಗಿದೆ. ಕಲಾ ತಂಡಗಳ ಮೆರವಣಿಗೆ, ರೈತ ದಸರಾ, ಮಹಿಳಾ ದಸರಾ, ಕವಿಗೋಷ್ಠಿ, ಫಲಪುಷ್ಪ ಪ್ರದರ್ಶನ, ಚಿತ್ರಕಲಾ ಪ್ರದರ್ಶನ ಸೇರಿದಂತೆ ಸ್ಥಳೀಯ ಕಲಾವಿದರು ಹಾಗೂ ಬೆಂಗಳೂರಿನ ವಿವಿಧ ಕಲಾವಿದರ ಪ್ರದರ್ಶನ ದಸರಾ ಸಂಭ್ರಮ ಹೆಚ್ಚಿಸಲಿದೆ.

ಚಾಮರಾಜೇಶ್ವರ ದೇಗುಲದಲ್ಲಿ ಚಾಲನೆ: ಸೋಮವಾರ ಮಧ್ಯಾಹ್ನ 12.15ಕ್ಕೆ ಚಾಮರಾಜೇಶ್ವರಸ್ವಾಮಿ ದೇವಸ್ಥಾನದಲ್ಲಿ ಪೂಜಾ ಕೈಂಕರ್ಯ ಮೂಲಕ ದಸರಾ ಮಹೋತ್ಸವಕ್ಕೆ ಚಾಲನೆ ದೊರೆಯಲಿದೆ. ನಂತರ ದೇವಸ್ಥಾನ ಉದ್ಯಾನದ ನಾಡದೇವತೆ ಭುವನೇಶ್ವರಿ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಗುವುದು. ಮಧ್ಯಾಹ್ನ 12.30ಕ್ಕೆ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನದ ಉದ್ಯಾನದಲ್ಲಿ ಚಿತ್ರ ಸಂತೆ, 12.50ಕ್ಕೆ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಆವರಣದಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಉತ್ಪನ್ನ ಪ್ರದರ್ಶನ ಮತ್ತು ಮಾರಾಟ ಮಳಿಗೆ ಹಾಗೂ 12.45ಕ್ಕೆ ಮಹಿಳಾ ದಸರಾ ಕಾರ್ಯಕ್ರಮ ಉದ್ಘಾಟಿಸಲಾಗುವುದು. ಮಧ್ಯಾಹ್ನ 1 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿ ಫಲಪುಷ್ಪ ಪ್ರದರ್ಶನಕ್ಕೆ ಚಾಲನೆ ನೀಡಲಾಗುವುದು. 1.15ಕ್ಕೆ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಕವಿಗೋಷ್ಠಿ ನಡೆಯಲಿದೆ. 1.45ಕ್ಕೆ ಜಿಲ್ಲಾಡಳಿತ ಭವನದಿಂದ ಚಾಮರಾಜೇಶ್ವರಸ್ವಾಮಿ ದೇವಸ್ಥಾನದವರೆಗೆ ಕಲಾತಂಡಗಳೊಂದಿಗೆ ಮೆರವಣಿಗೆ ನಡೆಯಲಿದೆ.

ಮಧ್ಯಾಹ್ನ 3.15ಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಗ್ರಾಮೀಣ ಕ್ರೀಡಾಕೂಟ, 3.45ಕ್ಕೆ ನಗರದ ಸಿಂಹ ಚಿತ್ರಮಂದಿರದಲ್ಲಿ ಚಲನಚಿತ್ರೋತ್ಸವಕ್ಕೆ ಚಾಲನೆ ನಿಡಲಾಗುವುದು. ಸಂಜೆ 6 ಗಂಟೆಗೆ ನಗರದ ಜನನ ಮಂಟಪದಲ್ಲಿ ಖಾಸಗಿ ದರ್ಬಾರ್ ನಡೆಯಲಿದೆ. ಸಂಜೆ 6.30ಕ್ಕೆ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಆವರಣ ಮುಖ್ಯ ವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ರಾತ್ರಿ 7.30ಕ್ಕೆ ಯುವ ದಸರಾ ಕಾರ್ಯಕ್ರಮ ಉದ್ಘಾಟನೆ ನಡೆಯಲಿದೆ.

ಸಾಂಸ್ಕೃತಿಕ ವೈವಿಧ್ಯ: ಜಿಲ್ಲಾ ದಸರಾದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರಮುಖ ಆಕರ್ಷಣೆಯಾಗಿದ್ದು, ಮೂರು ದಿನ ಪ್ರತಿದಿನ ಬೆಳಗ್ಗೆಯಿಂದ ಸಂಜೆ 6 ಗಂಟೆವರೆಗೆ ನಗರದ ಜೆಹೆಚ್‌ಪಟೇಲ್ ಸಭಾಂಗಣ ಹಾಗೂ ವರನಟ ಡಾ.ರಾಜ್ ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿವೆ. ಸಂಜೆ 4 ರಿಂದ ರಾತ್ರಿ 9.45ರವರೆಗೆ ಚಾಮರಾಜೇಶ್ವರ ದೇವಸ್ಥಾನ ಆವರಣದ ಮುಖ್ಯ ವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿವೆ.

ಸೆ.8ರಂದು ಬೆಳಗ್ಗೆ 6.30ಕ್ಕೆ ಚಾಮರಾಜೇಶ್ವರ ದೇವಸ್ಥಾನ ಆವರಣದಲ್ಲಿ ಮ್ಯಾರಥಾನ್, ನಂತರ ಸಾಂಸ್ಕೃತಿ ಕಾರ್ಯಕ್ರಮ ನಡೆಯಲಿದೆ. 9ರಂದು ಬೆಳಗ್ಗೆ 6.30ಕ್ಕೆ ಚಾಮರಾಜೇಶ್ವರ ದೇವಸ್ಥಾನ ಆವರಣದಿಂದ ಜಿಲ್ಲಾಡಳಿತ ಭವನದ ವರೆಗೆ ಪಾರಂಪರಿಕ ನಡಿಗೆ, 9.30ಕ್ಕೆ ಚಾಮರಾಜೇಶ್ವರ ದೇವಸ್ಥಾನದಿಂದ ಅಂಬೇಡ್ಕರ್ ಭವನದವರೆಗೆ ರೈತ ದಸರಾ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. 11 ಗಂಟೆಗೆ ಅಂಬೇಡ್ಕರ್ ಭವನದಲ್ಲಿ ರೈತ ದಸರಾ ನಡೆಯಲಿದೆ.



ಚಾಮರಾಜನಗರ ದಸರಾ ಮಹೋತ್ಸವದ ವಿದ್ಯುತ್ ದೀಪಾಲಂಕರದ ಮೆರಗು.

ಇಂದಿರಾ ಗಾಂಧಿ ಕಾಲೋನಿಗೆ ನುಗ್ಗಿದ ಕೆರೆ ನೀರು

ಕೊಳ್ಳೇಗಾಲ, ಅ.6– ಧಾರಾಕಾರ ಮಳೆಯಿಂದ ಪಟ್ಟಣದ ಕೊಂಗಲಕೆರೆ ಕೋಡಿ ಬಿದ್ದ ಪರಿಣಾಮ ಕುಪ್ಪಮ್ಮ ಕಾಲುವೆ ತುಂಬಿ ಹರಿದು ಹಲವು ಮನೆಗಳಿಗೆ ನೀರು ನುಗ್ಗಿದ್ದು, ಮನೆಯೊಂದರ ಗೋಡೆ ಕುಸಿದಿದೆ.

ಭಾನುವಾರ ಕೋಡಿ ಬಿದ್ದು ಕುಪ್ಪಮ್ಮ ಕಾಲುವೆ ತುಂಬಿ ಹರಿದಿದೆ. ಇದರಿಂದ ಹಲವು ಮನೆಗಳು ಜಲಾವೃತ್ತವಾಗಿವೆ. ಅಲ್ಲದೆ, ಮನೆಗಳಿಗೆ ಕೆರೆ ಹಾಗೂ ಮಳೆ ನೀರು ನುಗ್ಗಿದ್ದರಿಂದ ನಿವಾಸಿಗಳು ಸ್ಥಳೀಯ ಜನಪ್ರತಿನಿಧಿಗಳು ಹಾಗೂ ನಗರಸಭೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಇಂದಿರಾಗಾಂಧಿ ಕಾಲೋನಿಯ ರಾಜಮ್ಮ ಅವರ ಮನೆ ಗೋಡೆ ಕುಸಿದಿದ್ದು, ಬಡಾವಣೆ ರಸ್ತೆಗಳು ಸಂಪೂರ್ಣ ಜಲಾವೃತ್ತಗೊಂಡಿದ್ದವು. ಮಳೆ ಹಾನಿ ಸ್ಥಳಗಳಿಗೆ ಭೇಟಿ ನೀಡಿ, ಪರಿಶೀಲಿಸಿದ 11ನೇ ವಾರ್ಡ್ ಸದಸ್ಯ ಮನೋಹರ್, ಹಾನಿಗೊಳಗಾದ ಮನೆಗಳ ಮಾಲೀಕರಿಗೆ ಸೂಕ್ತ ಪರಿಹಾರ ಒದಗಿಸಲು ಶಾಸಕ ಕೃಷ್ಣಮೂರ್ತಿ ಅವರನ್ನು ಸೋಮವಾರ ಭೇಟಿ ಮಾಡಲಾಗುವುದು ಎಂದರು.



ಕೊಂಗಲಕೆರೆ ಕೋಡಿ ಬಿದ್ದು ಕೊಳ್ಳೇಗಾಲದ ಇಂದಿರಾಗಾಂಧಿ ಕಾಲೋನಿಗೆ ನೀರು ನುಗ್ಗಿರುವುದು.

ಚಾಮುಲ್‌ನಿಂದ ಪರಿಹಾರ ಚೆಕ್ ವಿತರಣೆ...



ಗುಂಡ್ಲುಪೇಟೆ ಚಾಮುಲ್ ಉಪ ಕಚೇರಿಯಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಚಾಮರಾಜನಗರ ಜಿಲ್ಲಾ ಹಾಲು ಒಕ್ಕೂಟ ಹಾಗೂ ಚಾಮುಲ್ ರೈತ ಕಲ್ಯಾಣ ಟ್ರಸ್ಟ್ ವತಿಯಿಂದ ಮರಣ ಹೊಂದಿದ ಹಾಲು ಉತ್ಪಾದಕರ ಕುಟುಂಬದ ಸದಸ್ಯರಿಗೆ ಪರಿಹಾರ ಚೆಕ್ ವಿತರಿಸಲಾಯಿತು. ಚಾಮುಲ್ ನಿರ್ದೇಶಕರಾದ ಹೆಚ್.ಎಸ್.ನಂಜುಂಡ ಪ್ರಸಾದ್ ಮತ್ತು ಎಂ.ಪಿ.ಸುನಿಲ್, ಸಹಾಯಕ ವ್ಯವಸ್ಥಾಪಕ ಜಿ.ಪ್ರಭು, ವಿಸ್ತರಣಾಧಿಕಾರಿಗಳಾದ ಹೆಚ್.ಪ್ರಕಾಶ್, ಸಿದ್ದಲಿಂಗೇಶ್, ರಂಜಿತಾ, ಮುದ್ದಪ್ಪ, ಉದಯ್, ಮಂಜೇಶ್ ಇದ್ದರು.

ವನ್ಯಜೀವಿ ಸಂರಕ್ಷಣೆಗಾಗಿ ಸೈಕ್ಲೋಥಾನ್



ಯಳಂದೂರು: ವನ್ಯಜೀವಿ ಸಪ್ತಾಹ ಅಂಗವಾಗಿ ಕೊಳ್ಳೇಗಾಲದಿಂದ ಯಳಂದೂರುವರೆಗೆ ಪರಿಸರ ಸ್ನೇಹಿ ಸೈಕಲ್ ಬಳಕೆ, ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸಲು ಭಾನುವಾರ ಸೈಕ್ಲೋಥಾನ್ ಏರ್ಪಡಿಸಲಾಗಿತ್ತು.

ಬಿಆರ್‌ಟಿ ಹುಲಿ ರಕ್ಷಿತ ಅರಣ್ಯ ಪ್ರದೇಶ ಹಾಗೂ ಕೊಳ್ಳೇಗಾಲ ವನ್ಯಜೀವಿ ವಲಯ ವತಿಯಿಂದ ಆಯೋಜಿಸಿದ್ದ ಸೈಕಲ್ ಜಾಥಾಗೆ ಅರಣ್ಯ ಉಪ ಸಂರಕ್ಷಣಾಧಿಕಾರಿ ಶ್ರೀಪತಿ ಹಾಗೂ ಯಳಂದೂರು ವನ್ಯಜೀವಿ ಉಪ ವಿಭಾಗ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಾದ ಪ್ರಭಾಕರ್, ಅಕ್ಷಯ್, ಅಶೋಕ್ ಚಾಲನೆ ನೀಡಿದರು.

ನಂತರ ಸೈಕಲ್ ಜಾಥಾ ಅರಣ್ಯ ಕಚೇರಿಯಿಂದ ಉತ್ತಂಬಳ್ಳಿ, ಮಾಂಬಳ್ಳಿ, ಅಗರ, ಮದ್ದೂರು ಮಾರ್ಗವಾಗಿ ಯಳಂದೂರು ತಲುಪಿ ವಾಪಸ್ ಕೊಳ್ಳೇಗಾಲಕ್ಕೆ ತೆರಳಿತು.

ಜಾಥಾದಲ್ಲಿ ಕೊಳ್ಳೇಗಾಲ ವಾಸವಿ ಪ್ರಥಮ ದರ್ಜೆ ಕಾಲೇಜಿನ ದೈಹಿಕ ಶಿಕ್ಷಣ ಶಿಕ್ಷಕ ಗಣೇಶ್, ಕೊಳ್ಳೇಗಾಲ ವಲಯ ವಾಸು, ಡಿಆರ್‌ಎಫ್‌ಓ ಅನಂತರಾಮ್, ಭಾನುಪ್ರಕಾಶ್, ಪ್ರಭುಸ್ವಾಮಿ, ರಘುರಾಮ್, ಕಟ್ನವಾಡಿ ಮಹೇಶ್, ಸಿಬ್ಬಂದಿ, ಶಾಲಾ–ಕಾಲೇಜು ಶಿಕ್ಷಕರು, ವಿದ್ಯಾರ್ಥಿಗಳು ಸೇರಿದಂತೆ 87 ಪರಿಸರ ಪ್ರೇಮಿಗಳು ಭಾಗವಹಿಸಿದ್ದರು.

ಬೈಕ್ ಡಿಕ್ಕಿ: ಪಾದಚಾರಿ ಮಹಿಳೆ ಸಾವು

ಬೇಗೂರು, ಅ.6–ಬೈಕ್ ಡಿಕ್ಕಿ ಹೊಡೆದ ಪರಿಣಾಮ ಪಾದಚಾರಿ ಮಹಿಳೆ ಮೃತಪಟ್ಟಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಮದ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದಿದೆ.

ಗ್ರಾಮದ ಸಣ್ಣಮ್ಮ (60) ಮೃತಪಟ್ಟಿದ್ದು, ಈಕೆ ಗ್ರಾಮದ ಹಳೇ ಪೊಲೀಸ್ ಠಾಣೆ ಬಳಿ ರಸ್ತೆ ದಾಟುತ್ತಿದ್ದರು. ಈ ವೇಳೆ ಮೈಸೂರು ಕಡೆಯಿಂದ ಬಂದ ಬೈಕ್ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರವಾಗಿ ಗಾಯಗೊಂಡಿದ್ದರು. ತಕ್ಷಣ ಬೇಗೂರು ಸರ್ಕಾರಿ ಆಸ್ಪತ್ರೆಗೆ ದಾಖಸಲಾಗಿತ್ತು, ಆದರೆ, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

ಬೈಕ್ ಸವಾರ ಪರಾರಿಯಾಗಿದ್ದು, ಈ ಸಂಬಂಧ ಬೇಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಸಣ್ಣಮ್ಮ

ಸುರಯ್ಯ ಜಬೀನ್ ನಿಧನ



ಕೊಳ್ಳೇಗಾಲ: ಪಟ್ಟಣದ ಅಮೀನಾ ಟಿಂಬರ್ಸ್ ಮಾಲೀಕ ದಿವಂಗತ ಸೈಯದ್ ಮಹಮ್ಮದ್ ಅವರ ಪತ್ನಿ ಹಾಗೂ ಬಸವೇಶ್ವರ ನಗರ ಬಡಾವಣೆ ನಿವಾಸಿ ಸುರಯ್ಯ ಜಬೀನ್ (80) ಭಾನುವಾರ ನಿಧನರಾದರು. ಮೃತರಿಗೆ ಪುತ್ರ, ಐವರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಸೋಮವಾರ ಮಧ್ಯಾಹ್ನ 1.30ಕ್ಕೆ ಪಟ್ಟಣದ ಈದ್ಗಾ ಮೊಹಲ್ಲಾದ ಅಮೀನಾ ಮಸೀದಿ ಪಕ್ಕದ ಮುಸ್ಲಿಂ ಸಮುದಾಯ ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ.

ಮೊದಲ ಟಿ–20:
ಭಾರತ ಶುಭಾರಂಭ



ಗ್ವಾಲಿಯರ್, ಅ.6– ಅರ್ಷದೀಪ್ ಸಿಂಗ್, ವರುಣ್ ಚಕ್ರವರ್ತಿ ಸೇರಿದಂತೆ ಬೌಲರ್‌ಗಳ ಮಾರಕ ಬೌಲಿಂಗ್ ದಾಳಿ ಹಾಗೂ ಸಂಘಟಿತ ಬ್ಯಾಟಿಂಗ್ ಪ್ರದರ್ಶನದ ನೆರವಿನಿಂದ ಭಾರತ, ಬಾಂಗ್ಲಾದೇಶ ವಿರುದ್ಧ 7 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ 3 ಪಂದ್ಯಗಳ ಟಿ20 ಸರಣಿಯಲ್ಲಿ 1–0 ಅಂತರದ ಮುನ್ನಡೆ ಗಳಿಸಿ ಶುಭಾರಂಭ ಮಾಡಿದೆ.

ಇಲ್ಲಿನ ಶ್ರೀಮಂತ್ ಮಾಧವರಾವ್ ಸಿಂಧಿಯಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಬಾಂಗ್ಲಾದೇಶ 19.5 ಓವರ್‌ಗಳಲ್ಲಿ 127 ರನ್‌ಗಳಿಗೆ ಆಲೌಟ್ ಆಯಿತು. ಅಲ್ಪ ಮೊತ್ತದ ಗುರಿ ಪಡೆದ ಭಾರತ ಕೇವಲ 11.5 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 132 ರನ್ ಗಳಿಸಿ ಗೆಲುವಿನ ನಗೆ ಬೀರಿತು.

ಸುಲಭ ಮೊತ್ತದ ಗುರಿ ಬೆನ್ನಟ್ಟಿದ ಭಾರತದ ಪರ ಬ್ಯಾಟರ್‌ಗಳು ಆರಂಭದಿಂದಲೇ ಅಬ್ಬರಿಸಿದರು. ಸಂಜು ಸ್ಯಾಮ್ಸನ್ ಹಾಗೂ ಅಭಿಷೇಕ್ ಶರ್ಮಾ ಜೋಡಿ ಮೊದಲ ವಿಕೆಟ್‌ಗೆ 2 ಓವರ್‌ಗಳಲ್ಲಿ 25 ರನ್ ಚಚ್ಚಿತ್ತು. ಆದರೆ ಈ ವೇಳೆ 16 ರನ್ ಗಳಿಸಿದ್ದ ಅಭಿಷೇಕ್ ಶರ್ಮಾ ರನೌಟ್‌ಗೆ ಬಲಿಯಾದರು.

ನಂತರ ಬಂದ ಸಂಜು ಸ್ಯಾಮ್ಸನ್, ನಾಯಕ ಸೂರ್ಯಕುಮಾರ್ ಯಾದವ್, ಹಾರ್ದಿಕ್ ಪಾಂಡ್ಯ ಭರ್ಜರಿ ಸಿಕ್ಸರ್, ಬೌಂಡರಿಗಳ ಸುರಿಮಳೆ ಸುರಿಸಿ ಗೆಲುವಿನ ಹಾದಿ ಸುಗಮವಾಗಿಸಿದರು. 2 ಹಾರ್ದಿಕ್ ಪಾಂಡ್ಯ ಕೇವಲ 16 ಎಸೆತಗಳಲ್ಲಿ 39 ರನ್ (5 ಬೌಂಡರಿ, 2 ಸಿಕ್ಸರ್) ಚಚ್ಚಿದರೆ, ಸೂರ್ಯಕುಮಾರ್ ಯಾದವ್ 14 ಎಸೆತಗಳಲ್ಲಿ 29 ರನ್, ಸಂಜು ಸ್ಯಾಮ್ಸನ್ 19 ಎಸೆತಗಳಲ್ಲಿ 29 ರನ್, ನಿತೀಶ್ ಕುಮಾರ್ ರೆಡ್ಡಿ 16 ರನ್ ಗಳಿಸಿ ಮಿಂಚಿದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಬಾಂಗ್ಲಾದೇಶ ಭಾರತದ ಬೌಲರ್‌ಗಳ ದಾಳಿಗೆ ಧೂಳಿಪಟವಾಯಿತು. ಮೊದಲ ಓವರ್‌ನಿಂದಲೇ ಬಾಂಗ್ಲಾ ಪೆವಿಲಿಯನ್ ಪರೇಡ್ ನಡೆಸಿತು. ವೇಗಿ ಅರ್ಷ್‌ದೀಪ್ ಸಿಂಗ್, ಮಯಾಂಕ್ ಯಾದವ್, ಸ್ಪಿನ್ನರ್ ವರುಣ್ ಚಕ್ರವರ್ತಿ ಬಾಂಗ್ಲಾ ಬ್ಯಾಟರ್‌ಗಳ ವಿರುದ್ಧ ಹಿಡಿತ ಸಾಧಿಸುವಲ್ಲಿ ಯಶಸ್ವಿಯಾದರು. ನಾಯಕ ಜನ್ಮುಲ್ಲಾ ಹೊಸೈನ್ ಸ್ಯಾಂಟೋ ಹಾಗೂ ಮೆಹಿದಿ ಹಸನ್ ಮಿರಾಜ್ ಹೊರತುಪಡಿಸಿದರೆ ಉಳಿದ ಆಟಗಾರರು ಸಂಪೂರ್ಣ ಮಕಾಡೆ ಮಲಗಿದರು. ಬಾಂಗ್ಲಾ ಪರ ಮೆಹಿದಿ ಹಸನ್ ಮಿರಾಜ್ 32 ಎಸೆತಗಳಲ್ಲಿ 35 ರನ್ ಗಳಿಸಿದರೆ, ಸ್ಯಾಂಟೋ 25 ಎಸೆತಗಳಲ್ಲಿ 27 ರನ್ ಬಾರಿಸಿದರು. ಉಳಿದ ಆಟಗಾರರು ಅಲ್ಪಮೊತ್ತಕ್ಕೆ ಪೆವಿಲಿಯನ್ ಸೇರಿದರು.

ಭಾರತದ ಪರ ಅರ್ಷ್‌ದೀಪ್ ಸಿಂಗ್, ವರುಣ್ ಚಕ್ರವರ್ತಿ ತಲಾ 3, ಹಾರ್ದಿಕ್ ಪಾಂಡ್ಯ, ಮಯಾಂಕ್ ಯಾದವ್, ವಾಷಿಂಗ್ಟನ್ ಸುಂದರ್ ತಲಾ ಒಂದೊಂದು ವಿಕೆಟ್ ಪಡೆದು ಮಿಂಚಿದರು.

ದಾಖಲೆ ಬರೆದ ಮಯಾಂಕ್: ಟೀಂ ಇಂಡಿಯಾಗೆ ಪದಾರ್ಪಣೆ ಮಾಡಿದ ಮೊದಲ ಪಂದ್ಯದಲ್ಲೇ ಮಯಾಂಕ್ ದಾಖಲೆಯ ಪುಟ ತೆರೆದಿದ್ದಾರೆ. ಅಂತಾರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ಪವರ್ ಪ್ಲೇನಲ್ಲಿ ಮೇಡಿನ್ ಓವರ್ ಮಾಡಿ ದಾಖಲೆ ಪುಟ ಸೇರಿದ್ದಾರೆ.

ಅಂಬೇಡ್ಕರ್ ಅವರ 133ನೇ ಜಯಂತಿ ಪ್ರಯುಕ್ತ
ಜಿಲ್ಲಾ ಮಟ್ಟದ ವಾಲಿಬಾಲ್ ಪಂದ್ಯಾವಳಿ



ಕಾರ್ಯಕ್ರಮದಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಮೈಸೂರು, ಅ.6– ಬಾಬಾ ಸಾಹೇಬ್ ಅಂಬೇಡ್ಕರ್ ಅವರ 133ನೇ ಜಯಂತಿ ಪ್ರಯುಕ್ತ ವಿಶ್ವಜ್ಞಾನಿ ಎಜುಕೇಶನ್ ಅಂಡ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಮೈಸೂರಿನ ವಿಶ್ವವಿದ್ಯಾನಿಲಯದ ಸ್ಪೋರ್ಟ್ಸ್ ಪೆವಿಲಿಯನ್ ಗ್ರೌಂಡ್‌ನಲ್ಲಿ ಪ್ರೌಢಶಾಲಾ ಮಕ್ಕಳಿಗೆ ಜಿಲ್ಲಾ ಮಟ್ಟದ ವಾಲಿಬಾಲ್ ಪಂದ್ಯಾವಳಿ (ವಿಶ್ವಜ್ಞಾನಿ ಕಪ್–2024) ಆಯೋಜಿಸಲಾಗಿತ್ತು.

ಬಾಲಕರ ವಿಭಾಗದಲ್ಲಿ ಪ್ರಥಮ ಬಹುಮಾನ ಪೊಲೀಸ್ ಪಬ್ಲಿಕ್ ಶಾಲೆ, ದ್ವಿತೀಯ ಬಹುಮಾನ ಕುಕ್ಕರಹಳ್ಳಿ ಸರ್ಕಾರಿ ಪ್ರೌಢಶಾಲೆ, ಬಾಲಕಿಯರ ವಿಭಾಗದಲ್ಲಿ ಪ್ರಥಮ ಬಹುಮಾನ ಸರ್ಕಾರಿ ಬೃಂದಾವನ ಶಾಲೆ, ದ್ವಿತೀಯ ಬಹುಮಾನ ಯರಗನಹಳ್ಳಿ ಪ್ರೌಢಶಾಲೆ ಪಡೆಯಿತು.

ಕಾರ್ಯಕ್ರಮದಲ್ಲಿ ಸಂವಿಧಾನ ಸಂರಕ್ಷಣಾ ಸಮಿತಿ ಅಧ್ಯಕ್ಷ ಎನ್.ಭಾಸ್ಕರ್, ವಿಜೇತರಿಗೆ ಟ್ರೋಫಿ ಹಾಗೂ ಬಹುಮಾನ ವಿತರಿಸಿದರು. ಇದೇ ವೇಳೆ ರಾಷ್ಟ್ರಮಟ್ಟದ ವಾಲಿಬಾಲ್ ಪಟು ಧರ್ಮೇಶ್ ಅವರನ್ನು ಸನ್ಮಾನಿಸಲಾಯಿತು. ಮೈಸೂರು ಜಿಲ್ಲಾ ಅಪರ ಸರ್ಕಾರಿ ವಕೀಲ ತಿಮ್ಮಯ್ಯ, ಕಾನೂನು ಘಟಕದ ರಾಜ್ಯ ಕಾರ್ಯದರ್ಶಿ, ವಕೀಲ ಎ.ಆರ್.ಕಾಂತರಾಜ್, ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಮಹೇಶ್ ಕುಮಾರ್, ಮುಖಂಡರಾದ ಪ್ರಭು, ದೇವಪ್ಪ ನಾಯಕ, ಜವರಪ್ಪ, ಸಹಾಯಕ ಪ್ರಾಧ್ಯಾಪಕ ಟಿ.ಎಸ್.ತಿರುಮಲೇಶ್, ಡಾ.ಬಿ.ಕೆ.ಜ್ಞಾನಪ್ರಕಾಶ್ ಉಪಸ್ಥಿತರಿದ್ದರು.

ಮನೆಮನೆ ಗೊಂಬೆ ಕೂರಿಸುವ ಸ್ಪರ್ಧೆ ಪೋಸ್ಟರ್ ಬಿಡುಗಡೆ



ಮೈಸೂರು ಶ್ರೀ ದುರ್ಗಾ ಫೌಂಡೇಶನ್ ವತಿಯಿಂದ ನಾಡಹಬ್ಬ ಮೈಸೂರು ದಸರಾ ಮನೆಮನೆ ಗೊಂಬೆ ಕೂರಿಸುವ ಸ್ಪರ್ಧೆಯ ಪೋಸ್ಟರನ್ನು ಅರಣ್ಯ ಸಚಿವ ಈಶ್ವರ್ ಖಂಡ್ರೆ, ಶಿಕ್ಷಣ ಸಚಿವ ಮಧು ಬಂಗಾರಪ್ಪ ಬಿಡುಗಡೆಗೊಳಿಸಿದರು. ರೇಖಾ ಶ್ರೀನಿವಾಸ್, ವಿಧಾನ ಪರಿಷತ್ ಸದಸ್ಯ ಬಲ್ಕಿಷ್ ಬಾನು , ಶಾಸಕ ಜಿ.ಎಸ್ ಶ್ರೀನಿವಾಸ್, ವೈದ್ಯಾಧಿಕಾರಿಗಳಾದ ಶ್ರೀನಿವಾಸ್ ಆಚಾರ್ಯ, ಅಶ್ವಿನಿ ಗೌಡ, ರೇಣುಕಾ ಹೊರಕೇರಿ, ಯಶವಂತ್ ಇತರರಿದ್ದರು

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮೈಸೂರು ಮಿತ್ರ 45 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಶ್ರದ್ಧೆ ಇದ್ದರೆ ಸಾಧನೆ ಸಾಧ್ಯ: ಡಾ. ನಾಗರಾಜ್



ರೋಟರಿ ಸಾಂಸ್ಕೃತಿಕ ಸುಗ್ಗಿ ಸಂಭ್ರಮ ಕಾರ್ಯಕ್ರಮ ನಡೆಯಿತು.

ಹುಣಸೂರು, ಅ.6– ನಾವು ಮಾಡುವ ಕೆಲಸದಲ್ಲಿ ಶ್ರದ್ಧೆ ಇದ್ದರೆ ಯಾವ ಸಾಧನೆಯೂ ಅಸಾಧ್ಯವಲ್ಲ ಎಂದು ರೊ. ಡಾ.ನಾಗರಾಜ್ ತಿಳಿಸಿದರು.

ನಗರದ ರೋಟರಿ ಭವನದಲ್ಲಿ ನಡೆದ ಜಿಲ್ಲಾ ರೋಟರಿ ಸಾಂಸ್ಕೃತಿಕ ಸುಗ್ಗಿ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರೋಟರಿ ಸಂಸ್ಥೆ ಇಲ್ಲದವರ ಬದುಕಿಗೆ, ನೆರವಾಗುವುದರ ಜತೆಗೆ. ಸಾಧನೆಗೈದವರ ಗುರುತಿಸುವ ಮೂಲಕ ಸಮಾಜಕ್ಕೆ ಮಾದರಿಯಾಗಿದೆ ಎಂದರು. ಸಹಾಯಕ ಗವರ್ನರ್ ಆನಂದ್ ಆರ್. ಮಾತನಾಡಿ, ರೋಟರಿ ಸಂಸ್ಥೆ ಸಮಾಜ ಮುಖಿ ಕೆಲಸ ಮಾಡುವ ಮುಖೇನ ಒಬ್ಬರನ್ನೊಬ್ಬರನ್ನು ಒಂದು ಗೂಡಿಸುವ ನಿಟ್ಟಿನಲ್ಲಿ ಬೆಸುಗೆ ಹಾಕುವ. ಸ್ನೇಹ ಸೇತುವೆಯಾಗಿ ಅಂತರರಾಷ್ಟ್ರೀಯ ಮಟ್ಟಕ್ಕೇರಿದೆ ಎಂದರು.

ಪಿರಿಯಾಪಟ್ಟಣ ರೊ. ವಲಯ ಸೇನಾನಿ ರಾಜೇಗೌಡ ಮಾತನಾಡಿ, ಇಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು. ಜಿಲ್ಲಾ ಮಟ್ಟದಲ್ಲಿ ನಡೆಯುವುದರಿಂದ, ರೋಟರಿ ಕುಟುಂಬದಲ್ಲೂ ಪ್ರತಿಭೆಗಳು ಸಮಾಜಕ್ಕೆ ಪರಿಚಯವಾಗಿ, ರಾಜ್ಯಮಟ್ಟದಲ್ಲಿ ಬೆಳೆಯಲು ಸಹಕಾರಿಯಾಗಲಿದೆ ಎಂದರು.

ಕಾರ್ಯಕ್ರಮದಲ್ಲಿ ರೋಟರಿ ಅಧ್ಯಕ್ಷ ಪ್ರಸನ್ನ ಕೆ.ಪಿ., ಕಾರ್ಯದರ್ಶಿ ಹೆಚ್. ಆರ್.ಕೃಷ್ಣಕುಮಾರ್, ವಲಯ ಸೇನಾನಿ ಪಿ.ಪಾಂಡುಕುಮಾರ್, ಸಾಂಸ್ಕೃತಿಕ ರಾಯಬಾರಿ ಸುನಿತಾ ಮಹೇಶ್, ಸಾಂಸ್ಕೃತಿಕ ಛೇರ್ಮನ್ ಡಾ.ಬಸವರಾಜ್, ರೋಟರಿ ಹಿರಿಯ ಸದಸ್ಯರಾದ, ಧರ್ಮಾಪುರ ನಾರಾಯಣ್, ಡಾ.ವೃಷ್ಬೇಂದ್ರ ಸ್ವಾಮಿ, ನಿಕಟಪೂರ್ವ ಅಧ್ಯಕ್ಷ ಚನ್ನಕೇಶವ, ಗಿರೀಶ್, ಧರ್ಮಾಪುರ ಶ್ಯಾಮಣ್ಣ, ರೊ. ಮಹೇಶ್ ಕುಶಾಲ್ ನಗರ, ಮಡಿಕೇರಿ ಮಹೇಶ್, ಉಲ್ಲಾಸ್, ಶಶಿ ಕುಮಾರ್ ಇದ್ದರು.

ಇಂದಿನಿಂದ ಕಟ್ಟೆಮಳಲವಾಡಿ ತಂಬಾಕು ಮಾರುಕಟ್ಟೆಯಲ್ಲಿ ಹರಾಜು ಪ್ರಕ್ರಿಯೆ ಆರಂಭ

ಹಿರೀಕ್ಯಾತನಹಳ್ಳಿ, ಅ.6– ಹುಣಸೂರು ತಾಲೂಕಿನ ಕಟ್ಟೆಮಳಲವಾಡಿ ಗ್ರಾಮದ ಡಿ. ದೇವರಾಜ ಅರಸು ತಂಬಾಕು ಹರಾಜು ಮಾರುಕಟ್ಟೆಯ ಮೂರು ಫ್ಲಾಟ್ ಫಾರಂಗಳ ಮಾರು ಕಟ್ಟೆಗಳು ನಾಳೆ (ಅ.7)ಯಿಂದ ಪ್ರಾರಂಭವಾಗಲಿದ್ದು, ಬೆಳಗ್ಗೆ 9ಕ್ಕೆ ಹರಾಜು ಪ್ರಕ್ರಿಯೆಗೆ ಜನಪ್ರತಿನಿಧಿಗಳು ಚಾಲನೆ ನೀಡಲಿದ್ದಾರೆ ಎಂದು ಹರಾಜು ಅಧೀಕ್ಷಕರು ತಿಳಿಸಿದ್ದಾರೆ.



ಕಟ್ಟೆಮಳಲವಾಡಿ ಗ್ರಾಮದ ಡಿ ದೇವರಾಜ ಅರಸು ತಂಬಾಕು ಹರಾಜು ಮಾರುಕಟ್ಟೆಯಲ್ಲಿ ತಂಬಾಕು ಬೇಲ್‌ಗಳು (ಸಂಗ್ರಹ ಚಿತ್ರ)

ಕೆ.ಆರ್.ನಗರದಲ್ಲಿ ನಾಲ್ವಡಿ ಸಾಹಿತ್ಯ ಭವನ ನಿರ್ಮಾಣಕ್ಕೆ ಕ್ರಮ

ಅಭಿನಂದನಾ ಸಮಾರಂಭದಲ್ಲಿ ನಿವೇಶನ ಗುರುತಿಸಲು ಶಾಸಕ ರವಿಶಂಕರ್ ಸೂಚನೆ



ಕೆ.ಆರ್.ನಗರ ಪಟ್ಟಣದ ಸರ್ಕಾರಿ ನೌಕರರ ಭವನದಲ್ಲಿ ತಾಲೂಕು ಕಸಾಪ ವತಿಯಿಂದ ನಡೆದ ಗಣ್ಯರ ಅಭಿನಂದನಾ ಸಮಾರಂಭದಲ್ಲಿ ಶಾಸಕ ಡಿ.ರವಿಶಂಕರ್ ಅವರನ್ನು ಸನ್ಮಾನಿಸಲಾಯಿತು.

ಕೆ.ಆರ್.ನಗರ, ಅ.6– ನಾಡು, ನುಡಿ ಮತ್ತು ಭಾಷೆಯ ವಿಚಾರ ಬಂದಾಗ ಸರ್ವರೂ ಒಂದಾಗಿ ಹೆಗಲುಕೊಟ್ಟು ಕೆಲಸ ಮಾಡಬೇಕು ಎಂದು ಶಾಸಕ ಡಿ.ರವಿಶಂಕರ್ ಕರೆ ನೀಡಿದರು.

ಪಟ್ಟಣದ ಸರ್ಕಾರಿ ನೌಕರರ ಭವನದಲ್ಲಿ ತಾಲೂಕು ಕಸಾಪ ವತಿಯಿಂದ ನಡೆದ ಗಣ್ಯರ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬ ಕನ್ನಡಿಗನೂ ಭಾಷಾ ಪ್ರೇಮವನ್ನು ಬೆಳೆಸಿಕೊಂಡು ಅದನ್ನು ಉಳಿಸಿ ಬೆಳೆಸಬೇಕು ಎಂದು ತಿಳಿಸಿದರು.

ಪಟ್ಟಣದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರಿನ ಸಾಹಿತ್ಯ ಭವನ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳುವ ಭರವಸೆ ನೀಡಿದ ಶಾಸಕರು ಇದಕ್ಕೆ ಅಗತ್ಯವಿರುವ ನಿವೇಶನವನ್ನು ಗುರುತಿಸುವಂತೆ ಪುರಸಭೆ ಅಧಿಕಾರಿಗಳಿಗೆ ಸೂಚನೆ ನೀಡಿ ಕಸಾಪ ಪದಾಧಿಕಾರಿಗಳು ಈ ವಿಚಾರದಲ್ಲಿ ನನ್ನೊಂದಿಗೆ ಸಹಕಾರ ನೀಡಬೇಕು ಎಂದರು. ಸಾಹಿತ್ಯ ಕ್ಷೇತ್ರಕ್ಕೆ ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಸಿಪಿಕೆ, ಎಚ್ಚೆಸ್ಕೆ ಸೇರಿದಂತೆ ಹತ್ತಾರು ದಿಗ್ಗಜ ಸಾಹಿತಿಗಳು ತಮ್ಮದೇ ಆದ ಕೊಡುಗೆ ನೀಡಿ ಭಾಷೆಯ ಬೆಳೆವಣಿಗೆಗೆ ಸಾಹಿತ್ಯ ಕೃಷಿ ಮೂಲಕ ಉತ್ತಮ ಕೆಲಸ ಮಾಡಿದ್ದು ಅವರ ಹೆಸರುಗಳನ್ನು ಹುಟ್ಟೂರಿನ ಮುಖ್ಯ ವೃತ್ತಗಳಿಗೆ ನಾಮಕರಣ ಮಾಡಲು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ತಾಲೂಕು ಕಸಾಪ ಅಧ್ಯಕ್ಷ ಡಿಂಡಿಮ ಶಂಕರ್ ಮಾತನಾಡಿ, ಮುಂದಿನ ದಿನಗಳಲ್ಲಿ ತಾಲೂಕು ಸಾಹಿತ್ಯ ಸಮ್ಮೇಳನ ನಡೆಸುವುದರ ಜತೆಗೆ ಕನ್ನಡದ ಕಂಪನ್ನು ಹಳ್ಳಿ ಹಳ್ಳಿಗೂ ಪಸರಿಸುವ ಉದ್ದೇಶದಿಂದ ಹೋಬಳಿ ಮಟ್ಟದಲ್ಲಿಯೂ ಸಮ್ಮೇಳನ ನಡೆಸಲು ಉದ್ದೇಶಿಸಿದ್ದು ಇದಕ್ಕೆ ಶಾಸಕರು ಮತ್ತು ಕನ್ನಡ ಪ್ರೇಮಿಗಳು ಅಗತ್ಯ ಸಹಕಾರ ಮತ್ತು ಮಾರ್ಗದರ್ಶನ ನೀಡಬೇಕು ಎಂದು ಕೋರಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಸಾಪ ನಿಟಕಪೂರ್ವ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ, ತಾಲೂಕು ಗೌರವಾಧ್ಯಕ್ಷ ಡಾ.ಡಿ.ನಟರಾಜ್ ಮಾತನಾಡಿದರು. ಕಸಾಪ ವತಿಯಿಂದ ಶಾಸಕ ಡಿ.ರವಿಶಂಕರ್, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಕೆ.ಎಸ್.ಮಹೇಶ್, ರಾಜ್ಯ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತ ಶಿಕ್ಷಕ ಭಾಸ್ಕರ, ಜಿಲ್ಲಾ ಪ್ರಶಸ್ತಿ ಪುರಸ್ಕೃತೆ ಭಾರತಿಕಶ್ಯಪ್, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ರಾಮಕೃಷ್ಣ, ರಾಜ್ಯ ಕನ್ನಡ ಸಾಹಿತ್ಯ ಪರಿಷತ್ ದತ್ತಿ ಪ್ರಶಸ್ತಿ ಪುರಸ್ಕೃತ ಛೇರ್ಮರಾಮ್‌ಕುಮಾರ್ ಅವರುಗಳನ್ನು ಅಭಿನಂದಿಸಲಾಯಿತು.

ಸಾಹಿತಿ ಹೆಗ್ಗಂದೂರು ಪ್ರಭಾಕರ್, ಜಿಲ್ಲಾ ಕಸಾಪ ಕೋಶಾಧ್ಯಕ್ಷ ಜಿ.ಪ್ರಕಾಶ್, ನಗರ ಘಟಕದ ಅಧ್ಯಕ್ಷ ಸಿ.ವಿ.ಮೋಹನ್ ಕುಮಾರ್, ಪದಾಧಿಕಾರಿಗಳಾದ ಭಾಸ್ಕರ್. ಕೆ.ಎಲ್, ಬಿಎಸ್‌ಎನ್‌ಎಲ್ ಕೃಷ್ಣ, ಗೋಪಾಲ್, ಬಿ.ಎಲ್.ಮಹದೇವ್, ಕೆಎಲ್. ಕೃಷ್ಣಯ್ಯ ಮತ್ತಿತರರು ಹಾಜರಿದ್ದರು.

ಬಸವ ಭವನ ನಿರ್ಮಾಣಕ್ಕೆ ಎಲ್ಲರ ಸಹಕಾರ ಅಗತ್ಯ



ಸರಗೂರು ಅಖಿಲ ಭಾರತ ವೀರಶೈವ–ಲಿಂಗಾಯಿತ ಮಹಾಸಭಾ ತಾಲೂಕು ಘಟಕ ಸರಗೂರು ನೂತನ ಪದಾಧಿಕಾರಿಗಳು ಮತ್ತು ನಿರ್ದೇಶಕರುಗಳ ಪದಗ್ರಹಣದ ಕಾರ್ಯಕ್ರಮ ನಡೆಸಲಾಯಿತು.

ಸರಗೂರು, ಅ.6– ವೀರಶೈವ–ಲಿಂಗಾಯಿತ ಸಮಾಜದ ಏಳಿಗೆಗೆ ಶ್ರಮಿಸುವುದಾಗಿ ನೂತನ ಅಧ್ಯಕ್ಷ ಕೆ.ಎಸ್.ವೀರಭದ್ರಪ್ಪ (ನಟರಾಜು) ಭರವಸೆ ನೀಡಿದ್ದಾರೆ.

ಪಟ್ಟಣದ ಶಿವರಾತ್ರೀಶ್ವರ ಶಿವಾನುಭವ ಮಂಟಪದಲ್ಲಿ ನಡೆದ ಅಖಿಲ ಭಾರತ ವೀರಶೈವ–ಲಿಂಗಾಯಿತ ಮಹಾಸಭಾ ತಾಲ್ಲೂಕು ಘಟಕ ಸರಗೂರು ನೂತನ ಪದಾಧಿಕಾರಿಗಳು ಮತ್ತು ನಿರ್ದೇಶಕರುಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸರಗೂರಿನಲ್ಲಿ ಭವ್ಯವಾದ ಬಸವ ಭವನ ನಿರ್ಮಾಣ ಮಾಡಲು ಸಮಾಜದ ಎಲ್ಲರ ಸಹಕಾರ ಅಗತ್ಯವಾಗಿದೆ. ಹಿಂದಿನ ಸಂಸದರಾದ ದಿ. ವಿ.ಶ್ರೀನಿವಾಸ್ ಪ್ರಸಾದ್ ಬಸವಭವನ ನಿರ್ಮಾಕ್ಕೆ 10 ಲಕ್ಷ ನೀಡಿದ್ದಾರೆ, ತಾಲೂಕಿನ ಶಾಸಕರಾದ ಅನಿಲ್ ಚಿಕ್ಕಮಾದು 25 ಲಕ್ಷ ಅನುದಾನವನ್ನು ಬಿಡುಗಡೆ ಮಾಡುವುದಾಗಿ ತಿಳಿಸಿದ್ದಾರೆ, ಸಮಾಜದ ಬಡವರ ಶುಭ ಕಾರ್ಯಗಳಿಗೆ, ವಿದ್ಯಾರ್ಥಿಗಳಿಗೆ ಓದಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಭವನ ನಿರ್ಮಾಣ ಮಾಡಲು ಬಂಧುಗಳು ಸಂಘಟಿತರಾದಾಗ ಮಾತ್ರ ಭವನ ನಿರ್ಮಿಸಲು ಸಾಧ್ಯ. ಹೀಗಾಗಿ ಸಮಾಜ ಬೆಳಸಲು ಪ್ರತಿಯೊಬ್ಬರ ಸಲಹೆ ಸಹಕಾರ ಅಗತ್ಯ ಎಂದರು,

ವೀರಶೈವ ಲಿಂಗಾಯುತ ಮಹಾಸಭಾದ ಅಧ್ಯಕ್ಷ ಹಿನಕಲ್ ಬಸವರಾಜು ಮಾತನಾಡಿ ಸರಗೂರಿನಲ್ಲಿ ಬಸವ ಭವನ ನಿರ್ಮಾಣಕ್ಕೆ ಮಹಾಸಭಾ ಸಹಕಾರ ನೀಡಲಿದೆ, ಹಾಗೆ ಮೈಸೂರಿನಲ್ಲಿಯೂ ಬಸವ ಭವನ ನಿರ್ಮಾಣ ಮಾಡುವ ಭರವಸೆ ನೀಡಿದರು.

ಹಂಚೀಪುರ ಮಠದ ಚನ್ನಬಸವ ಸ್ವಾಮೀಜಿ, ದಡದಹಳ್ಳಿ ಮಠದ ಷಡಕ್ಷರಸ್ವಾಮೀಜಿ, ಪಡವಲು ಮಠದ ಮಹದೇವಸ್ವಾಮೀಜಿ ಹಂಚೀಪುರ ಮಠದ ಕಿರಿಯಸ್ವಾಮೀಜಿ ತೊಟದಾರ್ಯ ಸ್ವಾಮೀಜಿ, ಸಮಾಜದ ಬಂಧುಗಳಿಗೆ ಆಶೀರ್ವಚನ ನೀಡಿದರು,

ಕಾರ್ಯಕ್ರಮದಲ್ಲಿ ಹೆಚ್.ಡಿ.ಕೋಟೆ ತಾಲೂಕು ಘಟಕದ ಅಧ್ಯಕ್ಷ ರುದ್ರಪ್ಪ, ರಾಷ್ಟ್ರೀಯ ನಿರ್ದೇಶಕರಾದ ಯುಎಸ್ ಬಸವರಾಜು, ಕಂಡೇಶ್, ರಾಜ್ಯ ನಿರ್ದೇಶಕರಾದ ಮೊತ್ತ ಬಸವರಾಜಪ್ಪ, ಹೆಚ್.ಕೆ. ಚನ್ನಪ್ಪ, ಜಿಲ್ಲಾ ನಿರ್ದೇಶಕ ಬಿ.ವಿ.ಬಸವರಾಜು, ಕೆ.ಗಿರಿಕುಮಾರ್, ಮಾಜಿ ಅಧ್ಯಕ್ಷರಾದ ಡಿ.ಜಿ.ಶಿವರಾಜು, ಮಹದೇವಪ್ಪ, ಕಾರ್ಯಧ್ಯಕ್ಷ ಸಿ.ಕೆ.ಗಿರೀಶ್, ಉಪಾಧ್ಯಕ್ಷ ಎಸ್.ಎನ್.ಮೋಹನ್ ಕುಮಾರ್, ಮಂಜುಳ ದೇವಣ್ಣ, ಡಿ.ಸಿ.ಸಿದ್ದಪ್ಪ, ಕೋಶಾಧ್ಯಕ್ಷ ಸಿ.ಎನ್.ಪ್ರಕಾಶ್, ಪ್ರಧಾನ ಕಾರ್ಯದರ್ಶಿ ಗುರುಸ್ವಾಮಿ, ಕಾರ್ಯದರ್ಶಿ ಮಹದೇವಮ್ಮ ಮಂಜುನಾಥ್, ಹೆಚ್.ಸಿ.ಮಹದೇವಸ್ವಾಮಿ, ನಿರ್ದೇಶಕರಾದ ವಿರುಪಾಕ್ಷ ಮಾದಪ್ಪ ಶ್ರೀಕಂಠ, ಮಂಜುನಾಥ್, ಲಿಂಗರಾಜು, ಸುರೇಶ್, ವಿಕೇಶ್, ನೀಲಮ್ಮ ಗುರುಮಲ್ಲಪ್ಪ, ನಾಗರತ್ನ ಬಸವಣ್ಣ, ಪುಟ್ಟಮಣಿ ಮಲ್ಲಪ್ಪ, ಮಂಜುಳ ಸಿದ್ದಪ್ಪ ಅವರನ್ನು ಅಭಿನಂದಿಸಿ, ಗೌರವಿಸಲಾಯಿತು,

ಇದೇ ಸಂದರ್ಭದಲ್ಲಿ ನಿರ್ಗಮಿತ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ನಿರ್ದೇಕರುಗಳಿಗೆ ಗೌರವ ಸಮರ್ಪಣೆ ನಡೆಸಿ ಅಭಿನಂದಿಸಲಾಯಿತು.

ದಸರಾ ಯೋಗಾಸನ ಸ್ಪರ್ಧೆಯಲ್ಲಿ ಗೀತಾಂಜಲಿಗೆ ದ್ವಿತೀಯ ಸ್ಥಾನ



ಮೈಸೂರು ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ನಡೆದ ರಾಜ್ಯ ಮಟ್ಟದ ಮಹಿಳಾ ಯೋಗಾಸನ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದ ಗೀತಾಂಜಲಿ ಮಣಿಕಂಠ ಅವರಿಗೆ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು.

ಕೆ.ಆರ್.ನಗರ, ಅ.6– ಮೈಸೂರು ದಸರಾ ಮಹೋತ್ಸವದ ಅಂಗವಾಗಿ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಶನಿವಾರ ನಡೆದ ರಾಜ್ಯ ಮಟ್ಟದ ಮಹಿಳೆಯರ ವಿಭಾಗದ ದಸರಾ ಯೋಗಾಸನಾ ಸ್ಪರ್ಧೆಯಲ್ಲಿ 35ರಿಂದ 45 ವಯೋಮಾನದ ಮಹಿಳೆಯರ ವಿಭಾಗದಲ್ಲಿ ಕೆ.ಆರ್. ನಗರ ಪಟ್ಟಣದ ಅರ್ಕನಾಥ ರಸ್ತೆ ನಿವಾಸಿ ಗೀತಾಂಜಲಿ ಮಣಿಕಂಠ ದ್ವಿತೀಯ ಸ್ಥಾನ ಪಡೆದಿದ್ದಾರೆ. ಪಟ್ಟಣದ ಸಂತ ಜೋಸೆಫರ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿರುವ ಇವರು ಪಟ್ಟಣದ ಸುಮುಖ ಯೋಗಕೇಂದ್ರದ ಯೋಗ ಶಿಕ್ಷಕರಾದ ಯೋಗಮಣಿ ಮತ್ತು ರೇವಣ್ಣ ಅವರುಗಳ ಮಾರ್ಗದರ್ಶನದಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ಪಿರಿಯಾಪಟ್ಟಣ ಅಬಕಾರಿ ವೃತ್ತ ನಿರೀಕ್ಷಕ ವೆಂಕಟೇಶ್

ಬೆಟ್ಟದಪುರ, ಅ.6– ಪಿರಿಯಾಪಟ್ಟಣ ತಾಲೂಕಿನ ಅಬಕಾರಿ ವೃತ್ತ ನಿರೀಕ್ಷಕರಾಗಿ ವೆಂಕಟೇಶ್‌ರವರನ್ನು ಸರ್ಕಾರ ನೇಮಕ ಮಾಡಿ



ಆದೇಶ ಹೊರಡಿಸಿದೆ. ಈ ಹಿಂದೆ ಇವರು ಹಾಸನ ಜಿಲ್ಲೆ ಅರಕಲಗೂಡು ತಾಲೂಕಿನ ಅಬಕಾರಿ ವೃತ್ತ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಪಿರಿಯಾಪಟ್ಟಣ ಅಬಕಾರಿ ವೃತ್ತ ನಿರೀಕ್ಷರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಧರ್ಮರಾಜ್ ಅವರು ಹಾಸನ ಜಿಲ್ಲೆಗೆ ವರ್ಗಾವಣೆಗೊಂಡಿದ್ದಾರೆ.

ಯುವ ದಸರಾ ಸಮಿತಿಗೆ ಮಧು ಕುಮಾರ್ ಉಪಾಧ್ಯಕ್ಷ

ತಿ.ನರಸೀಪುರ, ಅ.6– ಮೈಸೂರು ದಸರಾ ಮಹೋತ್ಸವದ ಯುವ ದಸರಾ ಸಮಿತಿಗೆ ಉಪಾಧ್ಯಕ್ಷರನ್ನಾಗಿ ಪ್ರಥಮ ದರ್ಜೆ ಗುತ್ತಿಗೆದಾರ ಕಗ್ಗಲಿಪುರ ಕೆ.ಎಂ. ಮಧುಕುಮಾರ್ ಅವರನ್ನು ನೇಮಕ ಮಾಡಲಾಗಿದೆ. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ. ಮಹದೇವಪ್ಪ ಸಂಸದ ಸುನಿಲ್ ಬೋಸ್ ಅವರನ್ನು ಅಭಿನಂದಿಸಿದ್ದಾರೆ.



ಶಿಕ್ಷಣದಿಂದ ಮಾತ್ರ ಉತ್ತಮ ಸಮಾಜ ನಿರ್ಮಾಣ



ಕಾಳಮ್ಮನ ಕೊಪ್ಪಲು ಗ್ರಾಮಸ್ಥರಿಂದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ.

ಸಾಲಿಗ್ರಾಮ, ಅ.6– ಪ್ರಜಾಪ್ರಭುತ್ವದಲ್ಲಿ ಉತ್ತಮ ಸಮಾಜ ನಿರ್ಮಾಣವಾಗಬೇಕಾದರೆ ಪ್ರತಿಯೊಬ್ಬ ಪೋಷಕರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ಕೊಡಿಸಿ ಉನ್ನತ ಅಧಿಕಾರಿಗಳನ್ನಾಗಿ ಮಾಡಿ ಎಂದು ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತರಾದ ಎಂ.ಜಯಸ್ವಾಮಿ ಹೇಳಿದರು.

ತಾಲೂಕಿನ ಕಾಳಮ್ಮನ ಕೊಪ್ಪಲು ಗ್ರಾಮದಲ್ಲಿ ಗ್ರಾಮಸ್ಥರು ಆಯೋಜಿಸಿದ್ದ ಸಾಧಕರುಗಳಿಗೆ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಸನ್ಮಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.ಗ್ರಾಮೀಣ ಪ್ರದೇಶದಲ್ಲಿರುವ ಮಕ್ಕಳು ಪ್ರಸ್ತುತ ದಿನಗಳಲ್ಲಿ ನಗರ ಪ್ರದೇಶದಲ್ಲಿ ವ್ಯಾಸಂಗ ಮಾಡುವ ಮಕ್ಕಳಿಗೆ ತೀವ್ರ ಪೈಪೋಟಿ ನೀಡುವ ಮೂಲಕ ಉತ್ತಮ ವ್ಯಾಸಂಗ ಮಾಡುತ್ತಿದ್ದಾರೆ ಎಂದರು.

ನಮ್ಮ ಗ್ರಾಮದ ಎಲ್ಲ ಸಮಾಜದ ಮುಖಂಡರು ಪ್ರತಿ ವರ್ಷವೂ ಕೂಡ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಗೌರವಿಸುವುದು ಮತ್ತು ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಸಮಾಜ ಸೇವೆಯನ್ನು ಸಲ್ಲಿಸುತ್ತಿರುವವರನ್ನು ಸನ್ಮಾನಿಸುವ ಮೂಲಕ ಅವರಿಗೆ ಮತ್ತಷ್ಟು ಉತ್ತೇಜನ ನೀಡುತ್ತಿದ್ದಾರೆ. ಇದನ್ನು ಮುಂದಿನ ದಿನಗಳಲ್ಲಿ ಎಲ್ಲರೂ ಕೂಡ ಈ ಒಳ್ಳೆಯ ಬೆಳವಣಿಗೆ ಇನ್ನೂ ಮುಂದುವರಿಸಿಕೊಂಡು ಹೋಗುವುದು ಎಂದರು.

ಗ್ರಾಮ ಪಂಚಾಯಿತಿ ಸದಸ್ಯ ಡಿ.ಕೃಷ್ಣ ಮಾತನಾಡಿದರು. ಕಾರ್ಯಕ್ರಮದಲ್ಲಿ ಶಿಕ್ಷಕರಾದ ಎಂ.ಜಯಸ್ವಾಮಿ, ಮುರಳಿಧರ, ಪತ್ರಕರ್ತ ಕೆ.ಟಿ.ಮೋಹನ್ ಕುಮಾರ್, ಕೆಎಸ್‌ಆರ್‌ಟಿಸಿ ಇನ್ಸ್‌ಪೆಕ್ಟರ್ ಎಂ.ಸುರೇಶ್, ಪ್ರತಿಭಾವಂತ ವಿದ್ಯಾರ್ಥಿಗಳಾದ ಪಾರ್ತೇಶ್, ಸಹನಾ, ಪ್ರಜ್ವಲ್, ಶಾಲಿನಿ, ಪ್ರಿಯಾಂಕ, ಸ್ಫೂರ್ತಿ, ಪ್ರೀತಮ್ ಹಾಗೂ ಉತ್ತಮ ಕ್ರೀಡಾಪಟುಗಳನ್ನು ಸನ್ಮಾನಿಸಲಾಯಿತು.

> ಗ್ರಾಮದಲ್ಲಿನ ಶಕ್ತಿ ದೇವತೆ ಶ್ರೀ ಕಾಳಮ್ಮ ತಾಯಿ ದೇವಾಲಯದ ಜೀರ್ಣೋದ್ಧಾರ ಕಾರ್ಯಕ್ಕೆ ನಮ್ಮ ಕುಟುಂಬದಿಂದ 50,000 ರೂ ನೆರವು ನೀಡಲಾಗುವುದು.
> - ಎಂ ಜಯಸ್ವಾಮಿ, ಜಿಲ್ಲಾ ಪ್ರಶಸ್ತಿ ಪುರಸ್ಕೃತ ಶಿಕ್ಷಕ

ಸಮಾರಂಭದಲ್ಲಿ ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಕೋಮಲಾಚಾರಿ, ಮಾಜಿ ಸದಸ್ಯರಾದ ಬಲರಾಮ್, ಮರೀಗೌಡ, ವಿಎಸ್‌ಎಸ್ ನಿರ್ದೇಶಕ ಲೋಕೇಶನಾಯಕ, ಮಾಜಿ ನಿರ್ದೇಶಕ ಕರೀಗೌಡ, ಶಿಕ್ಷಕ ಕೆ.ಸಿ.ಕೃಷ್ಣೆಗೌಡ, ಮುಖಂಡರುಗಳಾದ ಜ.ರಂಗೇಗೌಡ, ಯು.ಮಲ್ಲೇಶ್, ಕೆ.ಮಹದೇವ, ರಂಗೇಗೌಡ, ಬಿಳಿಯಪ್ಪ, ಕೆ.ಶಿವಣ್ಣ, ಕೆ.ಸಿ.ಸುಬ್ಬೇಗೌಡ, ನಾಗರಾಜು, ಸಿ.ಸ್ವಾಮಿ, ಕೆ.ಕೆ.ರಾಜನಾಯಕ, ಕೆ.ಟಿ.ಕುಮಾರ, ಕೆ.ರಂಗೇಗೌಡ, ಜವರೇಗೌಡ, ಜವರಪ್ಪ, ಲೋಕೇಶಚಾರಿ, ಕುಮಾರ್, ಚಂದ್ರಚಾರಿ, ಹೋಟೆಲ್ ಮಂಜುನಾಥ್, ಟೈಲರ್ ನಾಗರಾಜ, ಮಹೇಂದ್ರ, ಹರೀಶ್, ಮುರಳಿ, ಸ್ವಾಮಿಗೌಡ, ಚಿಕ್ಕನಾಯಕ ಸೇರಿದಂತೆ ಹಲವರು ಇದ್ದರು.

ಏಳು ವರ್ಷಗಳಾದರೂ ನಿರ್ಮಾಣವಾಗದ ಉಪ್ಪಾರ ಸಮುದಾಯ ಭವನ

ಅರ್ಧಕ್ಕೆ ನಿಂತ ಕಾಮಗಾರಿ, ತುಕ್ಕು ಹಿಡಿಯುತ್ತಿರುವ ಕಬ್ಬಿಣ, ಗಿಡ–ಗಂಟೆಗಳು ಬೆಳೆದು ನಿಂತಿವೆ

ತಿ.ನರಸೀಪುರ,ಅ.6– ಪಟ್ಟಣದ ಪುರಸಭಾ ವ್ಯಾಪ್ತಿಯಲ್ಲಿ ಕೋಟ್ಯಾಂತರ ರೂ. ಸರ್ಕಾರಿ ಅನುದಾನದಲ್ಲಿ ನಿರ್ಮಾಣ ಮಾಡಲುದ್ದೇಶಿಸಿರುವ ಉಪ್ಪಾರ ಸಮುದಾಯ ಭವನದ ಕಾಮಗಾರಿ ಕಳೆದ ಏಳು ವರ್ಷಗಳಿಂದಲೂ ಪೂರ್ಣಗೊಳ್ಳದೆ ನನೆಗುದಿಗೆ ಬಿದ್ದಿದೆ.

ಪಟ್ಟಣದ ಹೆಳವರಹುಂಡಿ ಸಮೀಪದ ನಂಜನಗೂಡು ರಸ್ತೆಯಲ್ಲಿರುವ ಮಿಣಿಮಿಂಚಿನ ಕಟ್ಟೆ (ಕೆರೆ)ಯಲ್ಲಿ ಕಂದಾಯ ಇಲಾಖೆ ಶ್ರೀ ಭಗೀರಥ ಉಪ್ಪಾರ ಜನ ಕಲ್ಯಾಣ ಟ್ರಸ್ಟ್‌ಗೆ ವಾರ್ಷಿಕ ಮಂತಿಕೆ ಆಧಾರದ ಮೇಲೆ ಮಂಜೂರು ಮಾಡಿದ 0.15 ಗುಂಟೆ ಜಮೀನಿನಲ್ಲಿ ನಿರ್ಮಾಣವಾಗಬೇಕಿದ್ದ ಉಪ್ಪಾರ ಸಮುದಾಯ ಭವನ ಕಾಮಗಾರಿ ಹಲವು ವರ್ಷಗಳಿಂದ ಹಳ್ಳ ಹಿಡಿದಿದೆ, ಸಾಮಾಜಿಕವಾಗಿ ಹಿಂದುಳಿದ ಉಪ್ಪಾರ ಸಮುದಾಯಕ್ಕೆ ಭವನವನ್ನು ನಿರ್ಮಿಸಿ ಕೊಡುವ ಜನಪ್ರತಿನಿಧಿಗಳ ಭರವಸೆ ಈಗ ನನೆಗುದಿಗೆ ಬಿದ್ದಿದೆ,

2017ರಲ್ಲಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಸ್ವಕ್ಷೇತ್ರ ಹೆಳವರಹುಂಡಿ ವಿಧಾನಸಭಾ ವ್ಯಾಪ್ತಿಗೆ ಬರುವ ತಿ. ನರಸೀಪುರ ವಿಧಾನ ಸಭಾ ಕ್ಷೇತ್ರದ ಅಂದಿನ ಸಚಿವರಾಗಿದ್ದ ಲೋಕೋಪಯೋಗಿ ಡಾ. ಎಚ್.ಸಿ. ಮಹದೇವಪ್ಪ ರವರು ಉಪ್ಪಾರ ಸಮುದಾಯ ಭವನ ನಿರ್ಮಾಣಕ್ಕೆ ನಿವೇಶನ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ 1 ಕೋಟಿ ರೂ ಅನುದಾನ ಮಂಜೂರು ಮಾಡಿಸಿದ್ದರು, ಅಲ್ಲದೆ ಅಂದಿನ ಸಂಸದ ದಿವಂಗತ ಆರ್. ಧ್ರುವ ನಾರಾಯಣ್ ಅವರು ಕೂಡ 20 ಲಕ್ಷ ರೂ ಅನುದಾನವನ್ನು ಬಿಡುಗಡೆ ಮಾಡಿಸಿದ್ದರು.



ತಿ ನರಸೀಪುರ ಪಟ್ಟಣದ ಹೊರವಲಯದ ಹೇಳವರಹುಂಡಿ–ನಂಜನಗೂಡು ರಸ್ತೆ ಬಳಿ ನಿರ್ಮಿಸಲಾಗುತ್ತಿರುವ ಉಪ್ಪಾರ ಸಮುದಾಯ ಭವನದ ಅಪೂರ್ಣಗೊಂಡಿರುವ ಕಾಮಗಾರಿ.

2018–19ರಲ್ಲಿ ಸಾರ್ವತ್ರಿಕ ಚುನಾವಣೆಯಲ್ಲಿ ಸರ್ಕಾರ ಬದಲಾಗಿದ್ದರಿಂದ ಹಿಂದುಳಿದ ವರ್ಗಗಳ ಇಲಾಖೆಗೆ ನೀಡಿದ್ದ ಒಂದು ಕೋಟಿ ರೂ. ಅನುದಾನ ಸರ್ಕಾರಕ್ಕೆ ವಾಪಸ್ ಆಗಿತ್ತು, ಸಂಸತ್ ಸದಸ್ಯರಾಗಿದ್ದ ಆರ್. ಧ್ರುವನಾರಾಯಣ್ ಅವರು ನೀಡಿದ್ದ 20 ಲಕ್ಷ ರೂ.ಗಳ ಅನುದಾನಕ್ಕೆ ಕಾಮಗಾರಿ ನಿರ್ವಹಣೆ ಪಡೆದಿದ್ದ ಜಿಲ್ಲಾ ಪಂಚಾಯಿತಿ ತಾಂತ್ರಿಕ ಉಪ ವಿಭಾಗದ ಅಧಿಕಾರಿಗಳು ನಂಜನಗೂಡು ಮೂಲದ ಗುತ್ತಿಗೆದಾರರಿಗೆ ಗುತ್ತಿಗೆ ನೀಡಿ ಅಡಿಪಾಯ ಸೇರಿದಂತೆ ಕಟ್ಟಡದ ಪಿಲ್ಲರ್‌ಗಳ ಕಾಮಗಾರಿಯಷ್ಟೇ ಮುಗಿಸಲಾಗಿತ್ತು. ಈಗ ಉಪ್ಪಾರ ಸಮುದಾಯ ಭವನ ಕಳೆದ ಏಳು ವರ್ಷಗಳಿಂದಲೂ ನಿರ್ಮಾಣವಾಗದೆ ಪಾಳು ಬಿದ್ದಿದೆ, ಸಿಮೆಂಟ್ ಕಂಬಗಳು ಬಿಸಿಲು ಮಳೆಗೆ ಒಣಗಿ ನಿಂತಿವೆ. ಕಬ್ಬಿಣದ ರಾಡುಗಳು ತುಕ್ಕು ಹಿಡಿಯಲು ಆರಂಭಿಸಿವೆ, ಒಟ್ಟಾರೆ ಸರ್ಕಾರದ ಅನುದಾನ ಪೋಲಾಗುತ್ತಿದೆ, ಇದಲ್ಲದೆ ಕಟ್ಟಡದ ಒಳ ಆವರಣದಲ್ಲಿ ಗಿಡ–ಗಂಟಿಗಳು ಬೆಳೆಯುತ್ತಿವೆ, ಸಮುದಾಯ ಭವನ ಕನಸು ಕಾಣುತ್ತಿದ್ದ ಸಮುದಾಯದ ಜನರು ನಿರಾಶರಾಗಿದ್ದಾರೆ.

ಟೈಲರಿಂಗ್ ತರಬೇತಿ ಪಡೆದ ಮಹಿಳೆಯರಿಗೆ ಪ್ರಮಾಣ ಪತ್ರ ವಿತರಣೆ

ಹೆಚ್.ಡಿ.ಕೋಟೆ, ಅ.6– ಶ್ರೀ ಸಾಯಿ ಚಾರಿಟಬಲ್ ಟ್ರಸ್ಟ್ ಹಾಗೂ ಅಪ್ನಾ ಸ್ವದೇಶಿ ಸ್ಟುಡಿಯೋ ಪ್ರೈವೇಟ್ ಲಿಮಿಟೆಡ್ ಆಶ್ರಯದಲ್ಲಿ ಕೇಂದ್ರ ಸರ್ಕಾರದ ಪಿಎಂಕೆಕೆವೈ ಅನುದಾನದ ಅಡಿಯಲ್ಲಿ ತರಬೇತಿ ಪಡೆದ 40 ಮಹಿಳೆಯರಿಗೆ ಟೈಲರಿಂಗ್ ತರಬೇತಿ ಪ್ರಮಾಣ ಪತ್ರ ನೀಡಲಾಯಿತು.

ಇದೇ ಸಂದರ್ಭದಲ್ಲಿ ಎಂ.ಲಿಂಗಣ್ಣ, ಸುಮಾ, ಲಕ್ಷ್ಮಿ, ಪಾಪಣ್ಣ, ನರ್ಸ್ ತಾಲೂಕು ಟೈಲರಿಂಗ್ ಕಾರ್ಮಿಕರ ಅಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ರಂಗಸ್ವಾಮಿ ಬೀಚನಹಳ್ಳಿ, ಸುಮಾ, ಸಂಸ್ಥೆಯ ಮುಖ್ಯಸ್ಥರಾದ ಎಲ್., ಪುಷ್ಪಲತಾ, ಇನ್ನು ಮುಂತಾದವರು ಹಾಜರಿದ್ದರು.



ಮಹಿಳೆಯರಿಗೆ ಟೈಲರಿಂಗ್ ತರಬೇತಿ ಪ್ರಮಾಣ ಪತ್ರ ನೀಡಲಾಯಿತು.

ಹಳ್ಳಿಕಾರ್ ತಳಿಯ ರಾಸು ಪ್ರದರ್ಶನ



ಬನ್ನೂರಿನ ರೈತರು ರೈತ ಮುಖಂಡ ಬನ್ನೂರು ನಾರಾಯಣ್ ನೇತೃತ್ವದಲ್ಲಿ ಮೈಸೂರಿನ ರೈತ ದಸರಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಹಳ್ಳಿಕಾರ್ ತಳಿಯ ರಾಸುಗಳನ್ನು ಪ್ರದರ್ಶಿಸಿದರು. ಸಚಿವ ವೆಂಕಟೇಶ್, ಬೆಟ್ಟಹಳ್ಳಿ ಶಿವರಾಂ, ಮೇಗಳಕೊಪ್ಪಲಿನ ರಂಗಸ್ವಾಮಿ, ಬಿಡನಹಳ್ಳಿ ಕುಮಾರ, ಪಾರ್ಥ, ರಾಜು, ಪುಟ್ಟಸ್ವಾಮಿ, ಗೋವಿಂದರಾಜು, ಚೆನ್ನಮಾಯೀಗೌಡ ಮೊದಲಾದವರು ಇದ್ದರು.

ಅರಮನೆ ವೇದಿಕೆಯಲ್ಲಿ ಖ್ಯಾತ ಗಾಯಕರ ಹಾಡಿನ ಮೋಡಿ

● ಗಾನಸುಧೆ ಹರಿಸಿದ ಮಂಗ್ಲಿ, ಸಂಗೀತಕಟ್ಟಿ ● ಕಣ್ಮನ ತಣಿಸಿದ ಕಥಕ್ ನೃತ್ಯ ● ಸುಗಮ ಸಂಗೀತದ ಇಂಪು



ಅರಮನೆ ವೇದಿಕೆಯಲ್ಲಿ ವಿದುಷಿ ಸಂಗೀತ ಕಟ್ಟಿ ಮತ್ತು ಅವರ ತಂಡ ಗೀತಗಾಯನ ಕಾರ್ಯಕ್ರಮ ನಡೆಸಿಕೊಟ್ಟಿತು.



ಗಾಯಕಿ ಮಂಗ್ಲಿಯವರು ತಮ್ಮ ತಂಡದೊಂದಿಗೆ ಹಾಡುತ್ತಿರುವುದನ್ನು ಕಾಣಬಹುದು.





ಅರಮನೆ ವೇದಿಕೆಯಲ್ಲಿ ವಿವಿಧ ತಂಡಗಳ ಅದ್ಭುತ ಪ್ರದರ್ಶನದ ದೃಶ್ಯಗಳು.

ಮೈಸೂರು,ಅ.6(ಪಿಎಂ)– ಖ್ಯಾತ ಗಾಯಕಿ ವಿದುಷಿ ಮಂಗ್ಲಿಯವರ ಸಂಗೀತ ಮೋಡಿ... ಮತ್ತೊಬ್ಬ ಪ್ರಸಿದ್ಧ ಗಾಯಕಿ ವಿದುಷಿ ಸಂಗೀತ ಕಟ್ಟಿಯವರ ಗೀತ ಗಾಯನದ ಹೊನಲು... ಇದರೊಂದಿಗೆ ನೃತ್ಯರೂಪಕ ಹಾಗೂ ವಾದ್ಯ ಸಂಗೀತವು ಸಮ್ಮಿಲನಗೊಂಡು ಸಭಿಕರನ್ನು ಸಂಗೀತದ ಸಾಗರದಲ್ಲಿ ತೇಲಿಸಿತು.

ದಸರಾ ಮಹೋತ್ಸವ ಪ್ರಯುಕ್ತ ಸಾಂಸ್ಕೃತಿಕ ಉಪಸಮಿತಿ ವತಿಯಿಂದ ಅರಮನೆ ವೇದಿಕೆಯಲ್ಲಿ ಹಮ್ಮಿಕೊಂಡಿರುವ ಸಾಂಸ್ಕೃತಿಕ ಕಾರ್ಯಕ್ರಮ ಅಂಗವಾಗಿ ನಾಲ್ಕನೇ ದಿನವಾದ ಭಾನುವಾರ ಸಂಜೆ ಇಂತಹ ಸಂಗೀತದ ಕಲಾತ್ಮಕ ಲೋಕ ನೆರೆದವರ ಮನಸೂರೆಗೊಂಡಿತು.

ರಾಷ್ಟ್ರಕವಿ ಕುವೆಂಪು ಅವರ 'ಎಲ್ಲಾದರು ಇರು ಎಂತಾದರು ಇರು ಎಂದೆಂದಿಗೂ ನೀ ಕನ್ನಡವಾಗಿರು...' ಗೀತೆಯೂ ಸೇರಿದಂತೆ ನಾಡು ನುಡಿಯ ವೈಭವ ಮೆರೆಯುವ ವಿವಿಧ ಗೀತೆಗಳನ್ನು ವಿದುಷಿ ಸಂಗೀತ ಕಟ್ಟಿ ಮತ್ತು ಅವರ ತಂಡ ಪ್ರಸ್ತುತಪಡಿಸಿ ಕನ್ನಡಭಿಮಾನ ಮೆರೆಯಿತು. ಅಲ್ಲದೆ, 'ಎಲ್ಲಿ ಕಾಣೆ ಎಲ್ಲಿ ಕಾಣೆನ ಯಲ್ಲವನಂಕಿನ ಎಲ್ಲಿ ಕಾಣೆನೊ...', 'ಕಂಬದ ಮ್ಯಾಲಿನ ಗೊಂಬೆಯೇ... ನಂಬಲೇನ ನಿನ್ನ ನಗೆಯನ್ನ...' ಸೇರಿದಂತೆ ಹಲವು ಗೀತೆಗಳನ್ನು ಸಂಗೀತ ಕಟ್ಟಿ ತಮ್ಮ ಕಂಠಸಿರಿಯಲ್ಲಿ ಸಾದರಪಡಿಸಿ ಸಭಿಕರಿಂದ ಅಭಿಮಾನದ ಚಪ್ಪಾಳೆ ಗಿಟ್ಟಿಸಿದರು.

ಅಲ್ಲದೆ, ಮಂಗ್ಲಿ ಎಂದೇ ಖ್ಯಾತಿಗೊಂಡಿರುವ ಗಾಯಕಿ ಸತ್ಯವತಿ ರಾಥೋಡ್ ಚೌಹಾಣ್ ತಮ್ಮ ಗೀತೆಗಳ ಮೂಲಕ ಸಂಗೀತದ ಸಂಚಲನ ಉಂಟು ಮಾಡಿದರು. ಶಿವನ ಕುರಿತ 'ಗಂಗಾಧರ ಶಿವಶಂಕರ' ತೆಲುಗು ಗೀತೆ ಹಾಡಿ ರಂಜಿಸಿದ ಅವರು, ಕನ್ನಡ ಸ್ವಲ್ಪ ಸ್ವಲ್ಪ ಮಾತನಾಡುತ್ತೇನೆ ಎಂದು ತೆಲುಗು ಭಾಷೆಯಲ್ಲಿ ಅವಕಾಶಕ್ಕಾಗಿ ಧನ್ಯವಾದ ಅರ್ಪಿಸಿದರು. ಡಾ.ಶಿವರಾಜ್‌ಕುಮಾರ್ ಅಭಿನಯದ ವೇದ ಕನ್ನಡ ಸಿನಿಮಾದ 'ಗಿಲ್ಲಕ್ಕೊ ಶಿವ ಗಿಲ್ಲಕ್ಕೊ...' ಗೀತೆ ಸೇರಿದಂತೆ ವಿವಿಧ ಹಾಡುಗಳನ್ನು ಹಾಡಿ ರಂಜಿಸಿದರು.

ಕಣ್ಮನ ತಣಿಸಿದ ಕಥಕ್ ನೃತ್ಯ: ಮೈಸೂರು ಬಿ.ನಾಗರಾಜ್ ಮಾರ್ಗದರ್ಶನದಲ್ಲಿ ಅವರ ಶಿಷ್ಯವೃಂದ ಸಾದರಪಡಿಸಿದ ಕಥಕ್ ನೃತ್ಯ ಕಣ್ಮನ ತಣಿಸಿತು. ನಟರಾಜನ ಆರಾಧನೆಯ ಗೀತೆಗೆ ಹೆಜ್ಜೆ ಹಾಕಿದ ಬಿ.ನಾಗರಾಜ್ ಶಿಷ್ಯವೃಂದವು ಭಾವಾಭಿನಯ–ನೃತ್ಯದ ಸಮ್ಮಿಲನದೊಂದಿಗೆ ಸಭಿಕರ ಮೋಡಿ ಮಾಡಿತು. 'ಮಾತಾ ಕಾಳಿಕಾ...' ಗೀತೆಯೂ ಸೇರಿದಂತೆ ವಿವಿಧ ಗೀತೆಗಳಿಗೆ ಗೆಜ್ಜೆ ನಾದದೊಂದಿಗೆ ಹೆಜ್ಜೆ ಹಾಕಿದ ಸದರಿ ತಂಡವು ಪ್ರೇಕ್ಷಕರ ಮನಮುದಗೊಳಿಸಿ, ಸಂಭ್ರಮಿಸುವಂತೆ ಮಾಡಿತು.

ಡಾ.ವೈ.ಕೆ.ಮುದ್ದುಕೃಷ್ಣ ಮತ್ತು ಅವರ ತಂಡ ಸುಗಮ ಸಂಗೀತದ ಮೂಲಕ ಶ್ರೋತೃಗಳನ್ನು ಸಂಗೀತದ ಸುಧೆಯಲ್ಲಿ ತೇಲುವಂತೆ ಮಾಡಿತು. 'ಕರ್ನಾಟಕ ಬರೀ ನಾಡಲ್ಲ, ನಮ್ಮ ಸಂಸ್ಕೃತಿಯ ಧಾತು, ಕನ್ನಡ ಕೇವಲ ನುಡಿಯಲ್ಲ, ನಮ್ಮಂತರಂಗದ ಮಾತು...' ಗೀತೆ ಮೂಲಕ ಕನ್ನಡಾಭಿಮಾನ ಮೆರೆಯಿತು. ಜೊತೆಗೆ ಇನ್ನು ಅನೇಕ ಗೀತೆಗಳನ್ನು ಹಾಡಿ ರಂಜಿಸಿದರು.

ಇದರೊಂದಿಗೆ ಚಲನಚಿತ್ರ ಮತ್ತು ರಂಗಭೂಮಿ ಕಲಾವಿದೆ ಎಂ.ಎಸ್.ಶಾಂತಲಾ ಅವರ ಶಿಷ್ಯವೃಂದ ಪ್ರಕೃತಿಯನ್ನು ಆರಾಧಿಸುವ ಹಾಡಿಗೆ ಭರತನಾಟ್ಯ ಸೇರಿದಂತೆ ವಿವಿಧ ಶೈಲಿಯ ನೃತ್ಯ ಸಮ್ಮಿಲನಗೊಳಿಸಿ ಹೆಜ್ಜೆ ಹಾಕಿ ಪ್ರೇಕ್ಷಕರಿಂದ ಚಪ್ಪಾಳೆ ಗಿಟ್ಟಿಸಿತು.

ಅಲ್ಲದೆ, ರೋಲಿಂಗ್ ಮೀಡಿಯಾ ಹೌಸ್ ತಂಡವು 'ಸಂವಿಧಾನ ಪೀಠಿಕೆ' ಗೀತೆಗೆ ಜಾನಪದ ಕಲಾ ನೃತ್ಯ ಸಾದರಪಡಿಸಿತು. ಡೊಳ್ಳು, ಕಂಸಾಳೆ, ವೀರಗಾಸೆ, ಪೂಜಾಕುಣಿತ ನೃತ್ಯಗಳನ್ನು ಈ ತಂಡವು ಅದ್ಭುತವಾಗಿ ಪ್ರಸ್ತುತಪಡಿಸಿ ಪ್ರೇಕ್ಷಕರಿಂದ ಅಭಿಮಾನದ ಚಪ್ಪಾಳೆ ಪಡೆಯಿತು. ಅಲ್ಲದೆ, ಡಾ.ಸಂಪದಾ ಭಟ್ಟ ಮರಬಳ್ಳಿ ಅವರ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಹಾಗೂ ವಿದ್ವಾನ್ ಸಿ.ಎಸ್.ಕೇಶವಚಂದ್ರ ಅವರ ಕರ್ನಾಟಕ ಶಾಸ್ತ್ರೀಯ ವೇಣುವಾದನವು ಶ್ರೋತೃಗಳಲ್ಲಿ ತನ್ಮಯತೆ ಉಂಟು ಮಾಡಿತು.

ಪಂಜ ಕುಸ್ತಿಯಲ್ಲಿ ಪ್ರಾಬಲ್ಯ ಮೆರೆದ ಬೆಂಗಳೂರು ಪಟುಗಳು



ಪಂಜ ಕುಸ್ತಿ ವಿಜೇತರಿಗೆ ಟೈಟಲ್ ಟ್ರೋಫಿಗಳನ್ನು ನೀಡಿ ಅಭಿನಂದಿಸಲಾಯಿತು

ಮೈಸೂರು, ಅ.6(ಎಂಕೆ)– ದಸರಾ ಕುಸ್ತಿ ಪಂದ್ಯಾವಳಿಯ ನಡುವೆ ತೋಳ್ಬಲ ಪ್ರದರ್ಶಿಸಿದ ಬೆಂಗಳೂರಿನ ಪಂಜ ಕುಸ್ತಿ ಪಟುಗಳು ವಿವಿಧ ಟೈಟಲ್ ಟ್ರೋಫಿಗಳನ್ನು ಮುಡಿಗೇರಿಸಿಕೊಂಡರು.

ನಗರದ ದೊಡ್ಡಕೆರೆ ಮೈದಾನ ಆವರಣದ ಶ್ರೀ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ದಸರಾ ಕುಸ್ತಿ ಪಂದ್ಯಾವಳಿಯ ನಡುವೆ ಭಾನುವಾರ ನಡೆದ ಪಂಜ ಕುಸ್ತಿ ಪಂದ್ಯಾವಳಿಯಲ್ಲಿ ತೋಳ್ಬಲ ಪ್ರದರ್ಶಿಸಿದ ಪಂಜ ಕುಸ್ತಿ ಪಟುಗಳು ವಿವಿಧ ವಿಭಾಗಗಳ ಟ್ರೋಫಿಗಳನ್ನು ತಮ್ಮದಾಗಿಸಿಕೊಂಡರು.

10 ಸಾವಿರ ರೂ. ನಗದು ಬಹುಮಾನದೊಂದಿಗೆ ಬೆಂಗಳೂರಿನ ಶಶಿಧರ್ 'ದಸರಾ ಶ್ರೀ' ಗೆದ್ದರೆ, ಬೆಂಗಳೂರಿನ ಕೆ.ಎಂ.ಮಧುರಾ 'ದಸರಾ ಕುಮಾರಿ', ವಿಶೇಷಚೇತನ ಪುರುಷರ ವಿಭಾಗದಲ್ಲಿ ಬೆಂಗಳೂರಿನ ಮಂಜುನಾಥ್ ಪವಾರ್ 'ದಸರಾ ವಿಶೇಷಚೇತನ್' ಹಾಗೂ ವಿಶೇಷಚೇತನ ಮಹಿಳಾ ವಿಭಾಗದಲ್ಲಿ ಬೆಂಗಳೂರಿನ ಎಸ್.ರೇಣುಕಾ 'ದಸರಾ ನವ ಚೇತನ ತಾರೆ' ಪ್ರಶಸ್ತಿ ಗೆದ್ದರು. ಕಡೆಯಲ್ಲಿ ವಿಜೇತರಿಗೆ ಕುಸ್ತಿ ಉಪಸಮಿತಿ ವತಿಯಿಂದ ಟ್ರೋಫಿ ನೀಡಿ, ಅಭಿನಂದಿಸಲಾಯಿತು.

ಮರದ ಅಂಬಾರಿ ಹೊತ್ತು ಹೆಜ್ಜೆ ಹಾಕಿದ ಪ್ರಶಾಂತ

ಮೈಸೂರು, ಅ.6(ಎಂಟಿವೈ)– ಜಂಬೂಸವಾರಿಗೆ ಕೇವಲ ಆರು ದಿನ ಮಾತ್ರವಿರುವ ಹಿನ್ನೆಲೆಯಲ್ಲಿ ಗಜಪಡೆಯನ್ನು ಸಜ್ಜುಗೊಳಿಸುವ ಅಂತಿಮ ಹಂತದ ತಾಲೀಮು ನಡೆಸುವ ಪ್ರಕ್ರಿಯೆಗೆ ಅರಣ್ಯ ಇಲಾಖೆ ಮುಂದಾಗಿದ್ದು, ಭಾನುವಾರ ಸಂಜೆ ಪ್ರಶಾಂತ ಆನೆಗೆ ಮರದ ಅಂಬಾರಿಯೊಂದಿಗೆ ಭಾರ ಹೊರಿಸುವ ತಾಲೀಮನ್ನು ಯಶಸ್ವಿಯಾಗಿ ನಡೆಸಿತು.

ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಗಜಪಡೆ ಈಗಾಗಲೇ ಜಂಬೂಸವಾರಿಗೆ ಮಾನಸಿಕವಾಗಿ ಸಜ್ಜಾಗಿದ್ದು, ಇದೀಗ ಅಂತಿಮ ಹಂತ ತಾಲೀಮಿನಲ್ಲಿ ಪಾಲ್ಗೊಂಡಿವೆ. ಬೆಳಗ್ಗೆ ಭಾರ ಹೊರಿಸದೇ ತಾಲೀಮು ನಡೆಸಲಾಯಿತಾದರೂ, ಸಂಜೆ ಪರ್ಯಾಯ ಆನೆಯಾಗಿ ಪ್ರಶಾಂತ ಆನೆಗೆ ಮರದ ಅಂಬಾರಿ ಕಟ್ಟಿ ಭಾರ ಹೊರಿಸುವ ತಾಲೀಮು ನಡೆಸಲಾಯಿತು. ಮರದ ಅಂಬಾರಿಯೊಂದಿಗೆ ಮರಳು ಮೂಟೆ ಕಟ್ಟಿ ಅರಮನೆಯಿಂದ ಬನ್ನಿಮಂಟಪದ ಪಂಜಿನ ಕವಾಯತ್ ಮೈದಾನದವರೆಗೆ ಕರೆತರಲಾಯಿತು. ಕುಮ್ಕಿ ಆನೆಗಳಾದ ಲಕ್ಷ್ಮೀ ಹಾಗೂ ಹಿರಣ್ಯಳೊಂದಿಗೆ ಗಾಂಭೀರ್ಯದಿಂದ ಹೆಜ್ಜೆ ಹಾಕಿದ ಪ್ರಶಾಂತ ಗಮನ ಸೆಳೆಯಿತು. ಎರಡನೇ ಬಾರಿ ಪ್ರಶಾಂತ ಆನೆ ಮರದ ಅಂಬಾರಿಯೊಂದಿಗೆ ಭಾರ ಹೊತ್ತು ಸರಾಗವಾಗಿ ಹೆಜ್ಜೆ ಹಾಕಿದ್ದು, ಅಧಿಕಾರಿಗಳಲ್ಲಿ ಭರವಸೆ ಮೂಡಿಸಿದೆ.


ಬೆಳಗ್ಗೆ ತಾಲೀಮು: ಇಂದು ಬೆಳಗ್ಗೆ ಗಜಪಡೆಗೆ ಭಾರ ಹೊರುವ ತಾಲೀಮಿನಿಂದ ವಿನಾಯಿತಿ ನೀಡಲಾಗಿತ್ತು. ವಾರಾಂತ್ಯ ರಜೆ ದಿನವಾಗಿದ್ದರಿಂದ ತಾಲೀಮಿನಲ್ಲಿ ಪಾಲ್ಗೊಳ್ಳುವ ಗಜಪಡೆಯನ್ನು ಕಣ್ತುಂಬಿಕೊಳ್ಳಲು ಪ್ರವಾಸಿಗರು ಸೇರಿದಂತೆ ನೂರಾರು ಮಂದಿ ನೆರೆದಿದ್ದರು. ಕೋಟೆ ಆಂಜನೇಯಸ್ವಾಮಿ ದೇಗುಲದ ಮುಂಭಾಗದ ಆವರಣದಲ್ಲಿ ನೆರದಿದ್ದ ಜನಸ್ತೋಮದ ನಡುವೆ ಗಜಪಡೆ ಶಾಂತವಾಗಿ ಹೆಜ್ಜೆ ಹಾಕಿ ಗಮನ ಸೆಳೆಯಿತು. ಈ ಸಂದರ್ಭದಲ್ಲಿ ಡಿಸಿಎಫ್‌ಗಳಾದ ಡಾ.ಐ.ಬಿ.ಪ್ರಭುಗೌಡ, ಡಾ.ಕೆ.ಎನ್.ಬಸವರಾಜು, ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶುವೈದ್ಯ ಡಾ.ಮುಜೀಬ್ ರೆಹಮಾನ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ದಸರಾ ಗಜಪಡೆಯ ಪ್ರಶಾಂತ ಆನೆಗೆ ಭಾನುವಾರ ಸಂಜೆ ಮರದ ಅಂಬಾರಿ ಕಟ್ಟಿ ತಾಲೀಮು ನಡೆಸಲಾಯಿತು.

ರಾಜ್ಯಪಾಲರ ಹುದ್ದೆ ರದ್ದತಿಗಾಗಿ ದೇಶವ್ಯಾಪ್ತಿ ಹೋರಾಟ ಅನಿವಾರ್ಯ

ಹಿರಿಯ ವಕೀಲ ರವಿವರ್ಮ ಕುಮಾರ್ ಅಭಿಮತ



ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಭವನದಲ್ಲಿ ಭಾನುವಾರ 'ಪ್ರಭುತ್ವ ಮತ್ತು ಸಂವಿಧಾನದ ಆಶಯ' ಕುರಿತ ವಿಚಾರ ಸಂಕಿರಣದಲ್ಲಿ ಹಿರಿಯ ವಕೀಲ ರವಿವರ್ಮ ಕುಮಾರ್ ಮಾತನಾಡಿದರು.

ಮೈಸೂರು, ಅ.6(ಎಂಟಿವೈ)– ಇತ್ತೀಚೆಗೆ ದೇಶದಲ್ಲಿ ಪ್ರಜಾಪ್ರಭುತ್ವ ಹಾಗೂ ಒಕ್ಕೂಟ ವ್ಯವಸ್ಥೆಗೆ ರಾಜ್ಯಪಾಲರ ಹುದ್ದೆಯೇ ಮಾರಕವಾಗುತ್ತಿರುವ ಹಿನ್ನೆಲೆಯಲ್ಲಿ ರಾಜ್ಯಪಾಲರ ಹುದ್ದೆಯನ್ನು ರದ್ದುಗೊಳಿಸಲು ಒತ್ತಾಯಿಸಿ ದೇಶವ್ಯಾಪಿ ಹೋರಾಟ ನಡೆಸಬೇಕಾದ ಅನಿವಾರ್ಯ ಎದುರಾಗಿದೆ ಎಂದು ಹಿರಿಯ ವಕೀಲ ರವಿವರ್ಮ ಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯ ಸೆನೆಟ್ ಭವನದಲ್ಲಿ ಸಂವಿಧಾನ ಅಂಗೀಕಾರದ ಅಮೃತ ಮಹೋತ್ಸವ ಅಂಗವಾಗಿ ದಸರಾ ರಾಷ್ಟ್ರೀಯ ಸಮ್ಮೇಳನ ಉಪಸಮಿತಿ, ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನ ಮತ್ತು ವಿಸ್ತರಣ ಕೇಂದ್ರ ಮತ್ತು ಜಿಲ್ಲಾಡಳಿತ ವತಿಯಿಂದ ಭಾನುವಾರ ಆಯೋಜಿಸಿದ್ದ 'ಪ್ರಭುತ್ವ ಮತ್ತು ಸಂವಿಧಾನದ ಆಶಯ' ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಜಿಎಸ್‌ಟಿ ಹಾಗೂ ರಾಜ್ಯಪಾಲರ ಹುದ್ದೆ ಒಕ್ಕೂಟ ವ್ಯವಸ್ಥೆಗೆ ಸವಾಲೊಡ್ಡುತ್ತಿದೆ. ಆ ಕಾರಣದಿಂದ ರಾಜ್ಯಪಾಲರ ಹುದ್ದೆಯನ್ನೇ ರದ್ದುಗೊಳಿಸುವ ಅವಶ್ಯಕತೆ ಇದೆ. ಇದಕ್ಕೆ ದೊಡ್ಡ ಮಟ್ಟದ ಹೋರಾಟದ ಅನಿವಾರ್ಯತೆ ಇದೆ. ಈ ಹೋರಾಟ ಯಶಸ್ವಿಯಾಗಿ ನಡೆದರೆ ಒಕ್ಕೂಟ ವ್ಯವಸ್ಥೆ ಉಳಿಯಲು ಸಾಧ್ಯ. ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಸರ್ಕಾರ ತಮ್ಮ ಪಕ್ಷ ಆಡಳಿತದಲ್ಲಿ ಇಲ್ಲದ ರಾಜ್ಯದಲ್ಲಿ ರಾಜಕೀಯ ಅಸ್ಥಿರತೆ ನಿರ್ಮಾಣ ಮಾಡಲು ರಾಜ್ಯಪಾಲರ ಹುದ್ದೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ. ಇದು ಒಕ್ಕೂಟ ವ್ಯವಸ್ಥೆಗೆ ಬಂದಿರುವ ಬಹುದೊಡ್ಡ ಕಂಟಕವಾಗಿದೆ. ತಮಿಳುನಾಡು, ಕೇರಳ, ಕರ್ನಾಟಕ, ಪಶ್ಚಿಮ ಬಂಗಾಳ, ತೆಲಂಗಾಣ ಮುಂತಾದ ರಾಜ್ಯಗಳಲ್ಲಿ ಇಂತಹ ಪರಿಸ್ಥಿತಿ ಎದುರಾಗಿದೆ ಎಂದು ವಿಷಾದಿಸಿದರು.

ತೆರಿಗೆ ಸಂಗ್ರಹದಲ್ಲಿ ಈ ಹಿಂದೆ ಕರ್ನಾಟಕ ಸಾರ್ವಭೌಮವಾಗಿತ್ತು. ಆದರೆ, ಜಿಎಸ್‌ಟಿ ವ್ಯವಸ್ಥೆ ಬಂದ ನಂತರ ರಾಜ್ಯ ಸರ್ಕಾರ ಕೇಂದ್ರದ ಮುಂದೆ ಕೈ ಚಾಚುವ ಪರಿಸ್ಥಿತಿ ನಿರ್ಮಾಣವಾಗಿದೆ. ರಾಜ್ಯದ ತೆರಿಗೆ ಪಾಲನ್ನು ಪಡೆಯಲು ರಾಜ್ಯಗಳು ಸುಪ್ರೀಂಕೋರ್ಟ್ ಮೆಟ್ಟಿಲನ್ನು ಏರುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಒಕ್ಕೂಟ ವ್ಯವಸ್ಥೆಯ ಆರೋಗ್ಯದ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆಯಲ್ಲ ಎಂದು ಕಿಡಿಕಾರಿದರು.

ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ಎಸ್.ಆರ್. ಬೊಮ್ಮಾಯಿ ಸರ್ಕಾರವನ್ನು ಕೇಂದ್ರ ವಜಾಗೊಳಿಸಿದ ತೀರ್ಮಾನವನ್ನು ಸುಪ್ರೀಂಕೋರ್ಟ್ ಅಸಿಂಧು ಎಂದು ಘೋಷಿಸಿ, ಒಕ್ಕೂಟ ವ್ಯವಸ್ಥೆ ದೇಶದ ಅಡಿಪಾಯ, ಅದನ್ನು ಯಾರೂ ಬದಲಾಯಿಸಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟಿತ್ತು. ದೇಶಕ್ಕೆ ಆರೋಗ್ಯಕರವಾದ ಒಕ್ಕೂಟ ವ್ಯವಸ್ಥೆಯನ್ನು ಸಂವಿಧಾನ ನೀಡಿದ್ದು, ಅದನ್ನು ಕಾಪಾಡುವ ಕಾರ್ಯ ಆಗಬೇಕು ಎಂದರು.

1975ರಲ್ಲಿ ತುರ್ತು ಪರಿಸ್ಥಿತಿ ಹೇರಿದ ಸಂದರ್ಭದಲ್ಲಿ ಮಾತನಾಡುವ ಸ್ವಾತಂತ್ರ್ಯ ಇರಲಿಲ್ಲ. ಆ ಸಂದರ್ಭದಲ್ಲಿ ಪ್ರಜೆಗಳೇ ಸಂವಿಧಾನವನ್ನು ರಕ್ಷಣೆ ಮಾಡಿದರು. ಸರ್ವಾಧಿಕಾರಿಯನ್ನು ಅಧಿಕಾರದಿಂದ ಕಿತ್ತೊಗೆದು ಸಂವಿಧಾನವನ್ನು ಮರುಸ್ಥಾಪಿಸಿದರು. ಆ ನಂತರ ದೇಶದ ಮೇಲೆ ಸುಲಭವಾಗಿ ತುರ್ತು ಪರಿಸ್ಥಿತಿ ಹೇರಬಾರದು ಎಂಬ ಉದ್ದೇಶದಿಂದ ಸಂವಿಧಾನಕ್ಕೆ ತಿದ್ದುಪಡಿ ತರಲಾಯಿತು. ಇದರಿಂದ ದೇಶದ ಒಕ್ಕೂಟ ವ್ಯವಸ್ಥೆ ಮತ್ತಷ್ಟು ಭದ್ರವಾಯಿತು. ಪ್ರಪಂಚದ ವಿವಿಧ ದೇಶಗಳ ಸಂವಿಧಾನದ ಆಯಸ್ಸು ಅವಲೋಕಿಸಿದರೆ ಸರಾಸರಿ 17 ವರ್ಷ ಮಾತ್ರ ಇರುವುದು ತಿಳಿದು ಬರುತ್ತದೆ. ಅದರಲ್ಲೂ ಶ್ರೀಲಂಕಾ, ಪಾಕಿಸ್ತಾನ, ನೇಪಾಳ, ಬಾಂಗ್ಲಾದೇಶದ ಸಂವಿಧಾನ ಹೆಚ್ಚು ಕಾಲ ಉಳಿಯಲಿಲ್ಲ. ಆದರೆ, ಅದೇ ಕಾಲದಲ್ಲಿ ಅಸ್ತಿತ್ವಕ್ಕೆ ಬಂದ ನಮ್ಮ ಸಂವಿಧಾನ ಇಂದಿಗೂ ಅಸ್ತಿತ್ವದಲ್ಲಿದೆ. ಇದನ್ನು ನಾವು ಹೆಮ್ಮೆಯಿಂದ ಹೇಳಿಕೊಳ್ಳಬೇಕು ಎಂದರು. ವಿಚಾರ ಸಂಕಿರಣದಲ್ಲಿ ಕಾನೂನು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಸತೀಶ್ ಗೌಡ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೃಷ್ಣಂ ಪ್ರಣಯ ಸಖಿ (ಕ) ದೇವರ (ಕ)	1+3 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ದೇವರ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭೈರಾದೇವಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ದೇವರ (ತೆ)	4 ಪ್ರದರ್ಶನಗಳು
ರಾಜಕಮಲ್	
ಜೋಕರ್ ಪೋಲಿಕಾ ಡ್ಯೂಕ್ಸ್ (ಇಂ)	4 ಪ್ರದರ್ಶನಗಳು
ಸಂಗಂ	
ಭೈರಾದೇವಿ (ಕ)	4 ಪ್ರದರ್ಶನಗಳು
ಲಿಡೋ	
ಉಪೇಂದ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ಪ್ರಭಾ	
ಭೀಮ (ಕ)	2 ಪ್ರದರ್ಶನಗಳು
ರಾಜಯೋಗ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಜೋಕರ್ ಘೋಲಿಕಾ ಡ್ಯೂಕ್ಸ್ (ಇಂ): ಬೆ.10.05ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.9.55ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1ಕ್ಕೆ.
ಸ್ಕ್ರೀನ್ 2	ದೇವರ 1 (ತೆ): ರಾ.10ಕ್ಕೆ.
ಸ್ಕ್ರೀನ್ 3	ಸ್ತ್ರೀ 2 (ಹಿಂ): ಬೆ.10.05ಕ್ಕೆ, ದೇವರ 1 (ತೆ): ಮ.1ಕ್ಕೆ, ಅನ್ನ (ಕ): ಸಂ.4.30ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ರಾ.7ಕ್ಕೆ, ಕಳಿಂಗ (ತೆ): ರಾ.10.10ಕ್ಕೆ.
ಸ್ಕ್ರೀನ್ 4	ಪುಷ್ಪಕ ವಿಮಾನಂ (ಮ): ಬೆ.10.20ಕ್ಕೆ, ಭೈರಾದೇವಿ (ಕ): ಮ.1.05ಕ್ಕೆ, ದೇವರ 1 (ತೆ): ಮ.3.45ಕ್ಕೆ, ರಾ.7.05ಕ್ಕೆ, ತೆಕ್ಕು ವಡಕ್ಕು (ಮ): ರಾ.10.30ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1.10ಕ್ಕೆ, ಸ್ವಾಗ್ (ತೆ): ಸಂ.4.10ಕ್ಕೆ, ತೆಕ್ಕು ವಡಕ್ಕು (ಮ): ರಾ.7.10ಕ್ಕೆ, ಗುಮಾಸ್ತಾನ್ (ಮ): ರಾ.9.40ಕ್ಕೆ.
ಸ್ಕ್ರೀನ್ 2	ಜೋಕರ್ ಘೋಲಿಕಾ ಡ್ಯೂಕ್ಸ್ (ಇಂ): ಮ.1.45ಕ್ಕೆ, ದೇವರ 1 (ತೆ): ಸಂ.4.40ಕ್ಕೆ, ರಾ.8ಕ್ಕೆ.
ಸ್ಕ್ರೀನ್ 3	ಭೈರಾದೇವಿ (ಕ): ಮ.1.40ಕ್ಕೆ, ಸಂ.4.15ಕ್ಕೆ, ಜೋಕರ್ ಘೋಲಿಕಾ ಡ್ಯೂಕ್ಸ್ (ಇಂ): ಸಂ.6.50ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 4	ದೇವರ 1 (ಕ): ಮ.1.30ಕ್ಕೆ, ದೇವರ 1 (ತೆ): ಸಂ.6.05ಕ್ಕೆ, ರಾ.9.20ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ದಸರಾದಲ್ಲಿ ಗಂಗರಸರ ಸ್ಮರಿಸುವ ಕೆಲಸವಾಗಲಿ

ಇತಿಹಾಸ ವಿದ್ವಾಂಸ ಡಾ.ತಲಕಾಡು ಚಿಕ್ಕರಂಗೇಗೌಡ



ಮುಡುಕುತೊರೆಯಲ್ಲಿರುವ ತಲಕಾಡು ಗಂಗರಸ ಶ್ರೀಪುರುಷನ ಸಮಾಧಿಗೆ ಪೂಜೆ ಸಲ್ಲಿಸಲಾಯಿತು.

ಮೈಸೂರು,ಅ.6(ಪಿಎಂ)– ಮೈಸೂರು ದಸರಾ ಉತ್ಸವಕ್ಕೆ ಗಂಗರಸರೇ ಮೂಲ. ಹಾಗಾಗಿ ಈ ದಸರಾ ಮಹೋತ್ಸವದಲ್ಲಿ ಗಂಗರಸರನ್ನು, ಅದರಲ್ಲಿಯೂ ಗಂಗರಸರ ಶ್ರೀಪುರುಷನನ್ನು ಸ್ಮರಿಸುವ ಕೆಲಸವಾಗಬೇಕು ಎಂದು ಇತಿಹಾಸ ವಿದ್ವಾಂಸ ಡಾ.ತಲಕಾಡು ಚಿಕ್ಕರಂಗೇಗೌಡ ಹೇಳಿದರು.

ಮುಡುಕುತೊರೆಯಲ್ಲಿರುವ ತಲಕಾಡು ಗಂಗರಸ ಶ್ರೀಪುರುಷನ ಸಮಾಧಿ ಸ್ಥಳದಲ್ಲಿ ಬೆಂಗಳೂರಿನ ಗೌಡರ ವೇದಿಕೆ ಮತ್ತು ಗೌಡತಿಯರ ಸೇನೆ ಜಂಟಿ ಆಶ್ರಯದಲ್ಲಿ ಭಾನುವಾರ 'ನಮ್ಮ ನಡೆ ತಲಕಾಡು ಗಂಗರಸ ಶ್ರೀಪುರುಷನ ಸಮಾಧಿ ಎಡೆಗೆ' ಶೀರ್ಷಿಕೆಯಡಿ ಭಾನುವಾರ ಹಮ್ಮಿಕೊಂಡಿದ್ದ ಶ್ರೀಪುರುಷನ ಸಮಾಧಿಯ ಪೂಜಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮೈಸೂರು ದಸರಾದ ಮೂಲ ತಲಕಾಡಿನ ಗಂಗರಿಗೆ ಹೋಗಿ ನಿಲ್ಲುತ್ತದೆ. ಶ್ರೀಪುರುಷ ಮೊದಲಿಗೆ ದಸರಾ ಆಚರಣೆ ಪ್ರಾರಂಭಿಸಿದನು. ನಂತರದಲ್ಲಿ ವಿಜಯನಗರ ಅರಸರು ಮುಂದುವರೆಸಿದ್ದಾರೆ. ಆ ಬಳಿಕ ಮೈಸೂರು ಒಡೆಯರ್ ಮನೆತನದವರು ಮುಂದುವರೆಸಿ, ಇದೀಗ ಸರ್ಕಾರ ಆಚರಿಸುವ ಹಂತಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ ಮೈಸೂರು ದಸರಾ ಮಹೋತ್ಸವದಲ್ಲಿ ತಲಕಾಡಿನ ಗಂಗರಸರನ್ನು ಸ್ಮರಿಸುವ ಕೆಲಸವಾಗಬೇಕಿದೆ ಎಂದು ತಿಳಿಸಿದರು.

ಇದಕ್ಕೂ ಮುನ್ನ ತಲಕಾಡಿಗೆ ಭೇಟಿ ನೀಡಿ ಗಂಗರ ಕಾಲದ ದಸರಾ ಸಂಬಂಧ ಅಧ್ಯಯನ ನಡೆಸಲಾಯಿತು. ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ಶ್ರೀಪುರುಷನ ಕುರಿತು ಸಂಶೋಧನೆ ನಡೆಸಿ ಡಾಕ್ಟರೇಟ್ ಪಡೆದಿರುವ ವೈದ್ಯ ಡಾ.ರವೀಶ್, ನಿವೃತ್ತ ಜಿಲ್ಲಾಧಿಕಾರಿ ಚಿಕ್ಕತಮ್ಮಯ್ಯ, ಸಾಕ್ಷ್ಯಚಿತ್ರ ನಿರ್ದೇಶಕ ಸಿದ್ದೇಗೌಡ, ಮುಖಂಡ ಡಾ.ರಾಮೇಗೌಡ, ಗೌಡರ ವೇದಿಕೆ ಮತ್ತು ಗೌಡತಿಯರ ಸೇನೆ ಪದಾಧಿಕಾರಿಗಳು ಹಾಜರಿದ್ದರು.

ಶುಭವಿವಾಹ



ರಾಜ್ಯ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ರಘು ಕೌಟಿಲ್ಯ ಅವರ ಪುತ್ರಿ ಆರ್.ವರ್ಣಿಕಾ ಮತ್ತು ಎಸ್.ವೆಂಕಟೇಶ್ ಪ್ರಸಾದ್ ವಿವಾಹದ ಆರತಕ್ಷತೆ ಮೈಸೂರಿನ ಸಾರಾ ಕನ್ವೆನ್ಷನ್ ಹಾಲ್‌ನಲ್ಲಿ ನಡೆದಿದ್ದು, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕರಾದ ಎಲ್.ನಾಗೇಂದ್ರ, ಪ್ರೀತಂ ಗೌಡ, ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಬಿಜೆಪಿ ಮುಖಂಡ ಗುರುಪಾದ ಸ್ವಾಮಿ, ಸಚಿವ ಹೆಚ್.ಕೆ.ಪಾಟೀಲ್, ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್, ಮಾಜಿ ಸಂಸದ ಪ್ರತಾಪ್ ಸಿಂಹ ಸೇರಿದಂತೆ ಹಲವಾರು ರಾಜಕೀಯ ಧುರೀಣರು, ಉದ್ಯಮಿಗಳು, ಶಿಕ್ಷಣ ಕ್ಷೇತ್ರದ ಪ್ರಮುಖರು ನೂತನ ವಧು–ವರರಿಗೆ ಶುಭ ಹಾರೈಸಿದರು.







ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು





